ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ವಿನಯ ಕುಮಾರ್ ಸೊರಕೆ:– (ಮಾನ್ಯ ನಗರಾಭಿವೃದ್ಧಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ, 2014ರ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:– ಮಂಡಿಸಲಾಗಿದೆ.

(ಅನುಬಂಧ–2)

4. ವಿತ್ತೀಯ ಕಾರ್ಯಕಲಾಪಗಳು

2014–2015 ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು 2014–15 ನೇ ಸಾಲಿನ 1 ಲಕ್ಷದ 36 ಸಾವಿರ ಕೋಟಿ ರೂ.ಗಳ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷಗಳು ಮತ್ತು ಆಡಳಿತ ಪಕ್ಷಗಳು ಬಹಳ ದೊಡ್ಡ ಚರ್ಚೆಯನ್ನು ಮಾಡಿ ಪರ ಮತ್ತು ವಿರೋಧವಾಗಿ ಮಾತನಾಡಿದ್ದಾರೆ. ಆದರೆ ನಾನೊಬ್ಬ ಹೋರಾಟಗಾರನಾಗಿ, ಚಳುವಳಿಯ ಹಿನ್ನೆಲೆಯಿಂದ ಬಂದಿರುವುದರಿಂದ ನನ್ನ ಅನಿಸಿಕೆ ಮತ್ತು ಆಲೋಚನೆಗಳು ಬೇರೆ ಬೇರೆ ಇದೆ. ಇದು ಕೆಲವು ಅಂಶಗಳು ಪೂರಕವಾಗಿದೆ. ಕೆಲವು ಅಂಶಗಳನ್ನು ಅತ್ಯಂತ ಗಂಭೀರವಾಗಿ ಆಲೋಚನೆಯನ್ನು ಮಾಡಿದ್ದೇನೆ. ಆದುದರಿಂದ ಮೊದಲು ಸರ್ಕಾರ ಒಂದು ಕಟಿಬದ್ಧವಾಗಿರಬೇಕಾಗಿತ್ತು.

ಲೋಕಾಯುಕ್ತಕ್ಕೆ ತಿದ್ದುಪಡಿ ತಂದು ಲೋಕಾಯುಕ್ತವನನು strengthen ಮಾಡಿ ಭ್ರಷ್ಟಾಚಾರದ ವಿರುದ್ಧ ಎಚ್ಚರಿಕೆಯ ಕೆಲಸವನ್ನು ನೂತನವಾಗಿ ಬಂದಂಥ ಈ ಸರ್ಕಾರ ಆಡಳಿತಕ್ಕೆ ಬಂದ ತಕ್ಷಣ ಮಾಡಬೇಕಾಗಿತ್ತು. ಸರ್ಕಾರದಿಂದ 1 ರೂಪಾಯಿ ಹೊರಟರೆ ಕನಿಷ್ಠ 75 ಪೈಸೆ ಸಾರ್ವಜನಿಕವಾಗಿ, ಆಡಳಿತಾತ್ಮಕವಾಗಿ ಉಪಯೋಗವಾಗತಕ್ಕಂಥ ಕೆಲಸವಾಗಬೇಕು. ಈಗ ನಾವಿನ್ನೂ ಎಷ್ಟನ್ನೇ ಇಸವಿಯಲ್ಲಿದ್ದೇವೆಂದರೆ, ಬ್ರಿಟಿಷ್‌ನವರು ನಮ್ಮನ್ನು ಬಿಟ್ಟುಹೋದರೂ ಕೂಡ ಅವರ ಬುದ್ಧಿ ಮಾತ್ರ ಇನ್ನೂ ಹೋಗಿಲ್ಲವೆಂದೆನಿಸುತ್ತದೆ. ಹಳ್ಳಿಯವರಾದ ನಮಗೆ ಮೊದಲು ಸ್ವಾತಂತ್ರ್ಯ ಬೇಕು. ತಹಶೀಲ್ದಾರ್ ಆಫೀಸ್‌ಗೆ ಹೋದರೂ, ಡಿ.ಸಿ. ಆಫೀಸ್‌ಗೆ ಹೋದರೂ ಅಥವಾ ಎ.ಸಿ. ಆಫೀಸ್‌ಗೆ ಹೋದರೂ ರೈತರನ್ನು ಕೂರಿಸಿ ಮಾತನಾಡಿಸತಕ್ಕಂಥ ಸೌಜನ್ಯದ ನಡವಳಿಕೆಯನ್ನೇ ಇನ್ನೂ ಕಲಿತಿಲ್ಲವೆಂದರೆ ನಾವು ಆಡಳಿತವನ್ನು ಹೇಗೆ ಸುಧಾರಣೆ ಮಾಡುವುದಕ್ಕಾಗುತ್ತದೆ, ವಾಪಸ್ ನಾವು ಗುಲಾಮಗಿರಿಯಿಂದ ಹೊರಗಡೆ ಬಂದಿಲ್ಲವೆಂದರೆ ಹೇಗೆ? ಒಬ್ಬ ದೊಡ್ಡದಾಗಿ ಕಾರ್‌ನಲ್ಲಿ ಬರುವವನನ್ನು, ಸೂಟು ಬೂಟು ಹಾಕಿಕೊಂಡು ಬರುವವನನ್ನು ಛೇರ್ ಮೇಲೆ ಕೂರಿಸುತ್ತಾರೆ. ಪಂಚೆ ಹಾಕಿಕೊಂಡು ಬರುವವನನ್ನು, ಹಳ್ಳಿಯ ಮುಗ್ಧನನ್ನು ನಿಲ್ಲಿಸಿ ಮಾತನಾಡುತ್ತಿದ್ದೇವೆಂದರೆ ಏನಾಗಿದೆ ಈ ಆಡಳಿತಕ್ಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಮೊದಲು ಈ ಆಡಳಿತಕ್ಕೆ ಸಂಸ್ಕೃತಿ ಮತ್ತು ಸಂಸ್ಕಾರವಿರಬೇಕು. ನಮ್ಮ ಕೆಲಸ ಮಾಡುವುದು ಆಮೇಲೆ ಇರಲಿ, ನಮ್ಮನ್ನು ಗೌರವಿಸತಕ್ಕಂಥ ಒಂದು political culture ಇಲ್ಲದೇ ಇದ್ದರೆ ದೇಶ ಹೇಗೆ ಕಟ್ಟುತ್ತೀರಿ. ಪೊಲೀಸ್ ಸ್ಟೇಷನ್‌ಗೆ ಹೋದರೂ ಅಷ್ಟೇ, ಸಾಹೇಬರು ಕುಳಿತಿರುತ್ತಾರೆ, ನಾವು ಗುಲಾಮರು ನಿಂತಿರಬೇಕು. ಎಲ್ಲಿ ಬಂದಿದೆ ನಮಗೆ ಸ್ವಾತಂತ್ರ್ಯ? ತಾಲ್ಲೂಕು ಆಫೀಸ್ ಹತ್ತಿರ ಹೋಗಿ ನೋಡಿದರೆ, ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್, ಇವರು ಯರ್‍ಯಾರು ಎಲ್ಲೆಲ್ಲಿ ಇರುತ್ತಾರೆ, ಯಾರು ಎಷ್ಟು ಹೊತ್ತಿಗೆ ಸಿಗುತ್ತಾರೆ, ಯಾವ

ವಿಷಯ ಚರ್ಚೆ ಮಾಡುವುದಕ್ಕೆ ರೈತರು ಎಲ್ಲಿಗೆ ಹೋಗಬೇಕೆಂದು ಒಂದು ಕನಿಷ್ಠ ಬೋರ್ಡ್ ಇಡೀ ಕರ್ನಾಟಕದ ಯಾವುದೇ ತಾಲ್ಲೂಕು ಆಫೀಸಿನಲ್ಲಿಯೂ, ಮುಖ್ಯಮಂತ್ರಿ ಸ್ಪರ್ಧೆ ಮಾಡಿರತಕ್ಕಂಥ ಜಾಗದಲ್ಲಿಯೂ ಕೂಡ ಇಲ್ಲ. ನೋಡಿ, ಹೀಗಾದರೆ ನೀವು ಆಡಳಿತವನ್ನು ಹೇಗೆ ಸುಧಾರಣೆ ಮಾಡುತ್ತೀರಿ? ಆರು ತಿಂಗಳಾದರೂ ಒಂದು ಸ್ಕೆಚ್ ಆಗುವುದಿಲ್ಲ. RTC ಗೆ ಯಾವುದೋ ಒಂದೇ ಮೆಷಿನ್ ಇರುವುದು. ಆ ಮೆಷಿನ್ ಏನಾದರೂ ಕೆಟ್ಟರೆ ಒಂದು ವಾರ ಕೆಲಸವಿಲ್ಲ. ನಾನೇ ಮೊನ್ನೆ ಪ್ರಯೋಗ ಮಾಡಿದೆ, ಬಿ.ಪಿ.ಎಲ್. ಕಾರ್ಡ್ ಬಗ್ಗೆ. ಎಂಟು ಸಾವಿರ ಕಾರ್ಡ್ ರೆಡಿ ಇದೆ. ಆ ಕಾರ್ಡ್‌ನ್ನು ಅವರು ಕೊಡಬೇಕಾದರೆ thumb impression ಹಾಕಿಸಿ ರೆಡಿ ಮಾಡಿ ಕೊಡುವುದಕ್ಕೆ ಒಂದು ದಿವಸಕ್ಕೆ 15, 20 ಅಥವಾ 30 ಕಾರ್ಡ್‌ಗಳನ್ನು ಮಾತ್ರ ಕೊಡುವುದು. ನಾನೇ ಖಾಸಗಿಯವರನ್ನು ಕರೆಸಿ ನನ್ನ ಕೈಯಿಂದಲೇ 30 ಸಾವಿರ ರೂ.ಗಳ ಹಣವನ್ನು ಕೊಟ್ಟು ಆರು ದಿವಸದಲ್ಲಿ 8 ಸಾವಿರ ಕಾರ್ಡ್‌ಗಳನ್ನು ರೆಡಿ ಮಾಡಿಸಿದೆ. ಆರು ದಿವಸದಲ್ಲಿ ಎಂಟು ಸಾವಿರ ಕಾರ್ಡು ರೆಡಿಯಾದವು. ಈಗ ಹೇಗಾಗಿದೆ ಗೊತ್ತೇ? ಮಾನ್ಯ ರಮೇಶ್ ಕುಮಾರ್‌ರವರೆ, ನಾವು ಎಲ್ಲಿ ತಿರುಗಾಡಬೇಕಾದರೂ ಕೂಡ ನಮ್ಮ ಹೆಗಲಿಗೆ ನೇತಾಕಿಕೊಂಡು ತಿರುಗಾಡಬೇಕು. ಒಂದು Voter ID card, APL card, Aadhaar card, ATM card, ಇನ್ನಾವುದೋ foreign ದುಡ್ಡಿದ್ದರೆ, ಅದಕ್ಕೆ ಒಂದು ಕಾರ್ಡು, ಕೊನೆಗೆ ನಾವು ಯಾವಾಗ ಸಾಯುತ್ತೇವೆಂದು ಒಂದು ತಿಥಿ ಕಾರ್ಡು, ಈ ರೀತಿ ಕಾರ್ಡು ಹಾಕಿಕೊಂಡು ತಿರುಗುವಂತಹ ಕಾಲ ಬಂದಿದೆ.

ನೀವು ಆಶ್ರಯ ಮನೆಗೆ machine, ಇಟ್ಟಿದ್ದೀರಿ ಅದು ಏನು ಹೇಳುತ್ತದೆ ಎಂದರೆ ನೀನು ಮೊದಲನೇ ಬಿಲ್‌ಅನ್ನು ತೆಗೆದುಕೊಳ್ಳಲು ಅರ್ಹನಾಗಿದ್ದೀಯ, ಸಂತೋಷ, ತೆಗೆದುಕೊಂಡು ಹೋಗು. ಎರಡನೆ ಬಿಲ್‌ಅನ್ನು ನಾನು ಒಪ್ಪಿದ್ದೇನೆ, ಪರವಾಗಿಲ್ಲ, ನೀನು ಹೋಗು. ಮೂರನೆ ಬಿಲ್

ಸರ್ಕಾರದ ಆದೇಶಕ್ಕಿಂತ ಹೆಚ್ಚಾಗಿ ಮೂರು ಅಡಿ ಅಗಲವಾಗಿ ಮನೆ ಕಟ್ಟಿರುವುದರಿಂದ, ನೀನು ದೊಡ್ಡ ಸಾಹುಕಾರನಾಗಿದ್ದೀಯ, ಆದ್ದರಿಂದ ನಿನಗೆ ಮೂರನೇ ಬಿಲ್ ಅನ್ನು ಕೊಡಲು ಸಾಧ್ಯವಿಲ್ಲ. 9 ತಿಂಗಳಿನಲ್ಲಿ 24 ಸಾವಿರ ಮನೆ ಬರುತ್ತದೆ. ಒಬ್ಬ ಬಡವ ಅಡಿಪಾಯ ಮಾಡಿ ಮೇಲ್ಛಾವಣಿ ಮಾಡಿ, ಮೂರನೇ ಬಿಲ್‌ಗೆ ಒಂಬತ್ತು ತಿಂಗಳಿನಿಂದ ಕಾಯುತ್ತಿದ್ದಾನೆ. Its a Constitutional Right, ಧರ್ಮಕ್ಕೆ ನಾವೇನು ಕೊಡುವುದಿಲ್ಲ. 24 ಸಾವಿರ ಮನೆಗಳನ್ನು ಮೂರನೇ ಬಿಲ್‌ನಲ್ಲಿ ಕೊಡುವುದಕ್ಕೆ ಆಗದಿದ್ದರೆ, ನಾವು ಆಡಳಿತವನ್ನು ಹೇಗೆ ನಡೆಸುತ್ತಿದ್ದೇವೆ? Section 9 and Section 11 ತಿದ್ದುಪಡಿಯಾಗಿಲ್ಲ. ಹಾಗಾಗಿ ಇನ್ನೂ ಕೂಡ ಒಂದು ಮನೆ ಖಾತೆಯಾಗುವುದಕ್ಕೆ ಆಗುವುದಿಲ್ಲ, ಒಂದು ವರ್ಷವಾದರೂ ಖಾತೆಯಾಗುವುದಿಲ್ಲ. ಆಮೇಲೆ ಎ.ಸಿ. ನಾಲ್ಕು-ನಾಲ್ಕು ವರ್ಷವಾದರೂ ಯಾವುದೇ ಒಂದು ನ್ಯಾಯಸಮ್ಮತವಾದ ತೀರ್ಪು ಬರುವುದಿಲ್ಲ. ಆರು, ಏಳು ವರ್ಷಗಳು ಆಗುತ್ತದೆ, ಇದಕ್ಕೆ ಏನು ಯಾವುದೇ ಒಂದು ಮಾನದಂಡ, ಕಾನೂನಿಗೆ ಒಂದು ನೀತಿ ಏನೂ ಬೇಡವೇ? ತಿರುಗಿ-ತಿರುಗಿ ಸರ್ವೆ ನಂಬರ್ ಒಟ್ಟುಗೂಡಿಸುವುದಕ್ಕೆ ಮೂರು ಅಥವಾ ನಾಲ್ಕು ವರ್ಷ ಬೇಕು. ನಮ್ಮಲ್ಲಿ ಮೂರು ಜನ ಎ.ಸಿ.ಯವರು ಬಂದುಹೋದರು. ಈಗ ಇರುವವರು ಮೂರನೆಯವರು. ಆರರಿಂದ ಎಂಟು ವರ್ಷಗಳ ಕೇಸುಗಳು ಹಾಗೆ ಇವೆ. ಯಾವುದೇ ತೀರ್ಪು ಇಲ್ಲ, ಜನ ತಿರುಗುತ್ತಿರಬೇಕು, ಇಲ್ಲ ಕುಳಿತಿರಬೇಕು. ಇದು ನಮ್ಮ ಆಡಳಿತ. ನೀವು ಆಡಳಿತವನ್ನು ಸುಧಾರಣೆ ಮಾಡಿದ್ದಿದ್ದರೆ ನಮ್ಮ ಕೈಯಲ್ಲಿ ಏನು ಸಾಧನೆ ಮಾಡುವುದಕ್ಕೆ ಸಾಧ್ಯ? ಆಮೇಲೆ ಒಬ್ಬ ಒಂದು ಸಾರಿ ಜಾತಿ certificate ತೆಗೆದುಕೊಂಡು ಬಿಟ್ಟರೆ ಅದೊಂದು certificate ಸಾಕು. ಎರಡು ವರ್ಷಕ್ಕೊಂದು ಸಾರಿ ನಾನು ಇಂತಹ ಜಾತಿ, ನಾನು ಇಂತಹ ಜಾತಿ ಎಂದು ನಾವು ಅಮೀನಾ ಆದ ಹಾಗೆ ಆಗಿಬಿಟ್ಟಿದ್ದೇವೆ. ನಾವು ತಾಲ್ಲೂಕು ಆಫೀಸ್‌ನಲ್ಲಿ ಹೋಗಿ ಕೂಗಿಕೊಳ್ಳುತ್ತಿರಬೇಕು. ನಾನು ಇಂತಹ ಜಾತಿಗೆ

ಸೇರಿದವನು ಎಂದು ಮೂರು ಬಾರಿ ಕೂಗಿದ ಮೇಲೆ ಆಗ ಅವನು certificate ಬಗ್ಗೆ ಪರಿಶೀಲನೆ ಮಾಡುತ್ತಾನೆ. ಸರ್ಕಾರಿ ಶಾಲೆಗೆ ಸೇರುವವನಿಗೆ Income Certificate ತೆಗೆದುಕೊಳ್ಳಬೇಕು. ಒಂದು ಕಾನೂನು ಮಾಡಿ. ಸರ್ಕಾರಿ ಶಾಲೆಗೆ ಸೇರಿರತಕ್ಕಂಥವರೆಲ್ಲರೂ ಬಡವರ ಮಕ್ಕಳು, ಯಾವ Income Certificate ಬೇಡವೆಂದು ಮಾಡಿದರೆ ಮುಗಿಯಿತು. ತಾಲ್ಲೂಕು ಆಫೀಸಿಗೆ ಮಕ್ಕಳ ಅಪ್ಪ-ಅವ್ವ ಬಂದಾಗ ತಹಶೀಲ್ದಾರ್ ಮೇಲುಕೋಟಿಯಲ್ಲಿದ್ದಾನೆ. ತಹಶೀಲ್ದಾರ್ ಇವತ್ತು ರಜೆ ಹಾಕಿದ್ದಾನೆಂದು ಹೇಳುವುದು. Income ಇಲ್ಲದಿರುವವರು ಆ certificate ತೆಗೆದುಕೊಳ್ಳುವುದಕ್ಕೆ ಬಂದರೆ ಆ certificate ಕೊಡುವುದಕ್ಕೆ ಏಕಿಷ್ಟು ತೊಂದರೆ ಕೊಡುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಇದು ಹೇಗಾಗಿದೆ ಎಂದರೆ ಎಲ್ಲರೂ ಈ ರೀತಿ ಸಾಹೇಬರು ಆಗಿ, ನಾವು ಗುಲಾಮಗಿರಿಯಿಂದ ಹೊರಗಡೆ ಹೇಗೆ ಬರಬೇಕೆಂದು ಸರ್ಕಾರ ಅಲೋಚನೆ ಮಾಡಬೇಕು.

ಒಂದು ಪಾಸ್ ಬುಕ್, ನೀನು ಕೃಷಿ ಕಾರ್ಮಿಕ, ನಿಮ್ಮ ಮನೆಯಲ್ಲಿ ಎರಡು ಹಂಡೆ, ಮೂರು ಬೋಸಿ, ಮೂರು ಕಡಾಯ, ಮೂರು ಒಳ್ಳೆ-ಮಿಳ್ಳೆ, ನಾಲ್ಕು ಆಡು, ಎರಡು ಎಮ್ಮೆ, ಎಂದು ಒಂದು ಪಾಸ್ ಬುಕ್ ಎಂಟ್ರಿ ಮಾಡಿ, ಆ ರೀತಿ ನಾವು independence ಬಂದಮೇಲೆ ಒಂದು pass book ಕೊಡುವುದಕ್ಕೆ ಆಗಿಲ್ಲ. ಈಗ ಹೊಸದಾಗಿ ಅಮೇರಿಕ imitation ಮಾಡುವುದಕ್ಕೆ ಹೊರಟು ಎಲ್ಲಾದಕ್ಕೂ ಕಾರ್ಡುಗಳು. ನಾವು ಯಾವ ರೀತಿಯಲ್ಲಿ ಆಡಳಿತ ಸುಧಾರಣೆ ಮಾಡುತ್ತಿದ್ದೇವೆ. ಇದು ಯಾರಿಗಾಗಿ? ಭೂಮಿಯಂತೂ ಹಾಗೆ ಇದೆ. ಒಂದು ಎಮ್ಮೆ ಎರಡು ಕರುವನ್ನು ಹಾಕಬಹುದು, ಭೂಮಿ ಹೇಗೆ ಕರು ಹಾಕುತ್ತದೆ? ಭೂಮಿ ಭಾಗವಾಗಿ ಹೋಗುತ್ತಿರಬಹುದು ಅಷ್ಟೆ. ಆಡಳಿತ ಸುಧಾರಣೆ ಮಾಡದೆ ನಾವು ದೇಶದಲ್ಲಿ ಕ್ರಾಂತಿ ಮಾಡುತ್ತೇವೆ, ರಾಜಕೀಯ ಬದಲಾವಣೆಗಳನ್ನು ಮಾಡುತ್ತೇವೆ ಎಂದರೆ ಹೇಗೆ? Political revolution

ಆಗದಿದ್ದರೆ ದೇಶದಲ್ಲಿ ಬದಲಾವಣೆ ಹೇಗೆ ಮಾಡುವುದಕ್ಕೆ ಸಾಧ್ಯ? ಈ ಸರ್ಕಾರಕ್ಕೆ ಇವತ್ತೇ ಕೆಲಸ ಮಾಡುತ್ತಾರೆ, ನಾಳೆ ಬೆಳಿಗ್ಗೆ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಆಡಳಿತ ಸುಧಾರಣೆ ಮಾಡಬೇಕು, ಅವಶ್ಯಕತೆಗಿಂತ ಮೀರಿರುವಂತಹ ಹುದ್ದೆಗಳನ್ನು ತೆಗೆದು ಹಾಕಬೇಕು. ನಾನು ಹೋದ ಬಾರಿ ಒಂದು ಉದಾಹರಣೆಯನ್ನು ಹೇಳಿದೆ. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಮನಸ್ವಿನಿ, ಆಶ್ರಯ ಮನೆ ಮತ್ತು ನಿವೇಶನ ಬರೆಯುವುದಕ್ಕೆ ಐದು ಜನರನ್ನು ನೇಮಕ ಮಾಡಿ, ಇದರ ಬಗ್ಗೆ ನೀವು ಪ್ರಯೋಗ ಮಾಡಬಹುದು. ಐದು ಜನರನ್ನು ನೇಮಕ ಮಾಡಿದರೆ ಐದು ದಿವಸದಲ್ಲಿ ನಿಮಗೆ ಸಂಪೂರ್ಣ ವಂಶವೃಕ್ಷ ಬಿಪಿಎಲ್ ಕಾರ್ಡಿಗೆ ಬರೆದು ಕೊಟ್ಟುಬಿಡುತ್ತಾರೆ. ಐದು ವರ್ಷವಾದರೂ ಏಕೆ ಬರೆಯುವುದಕ್ಕೆ ಆಗುತ್ತಿಲ್ಲ? ಯಾವ ಕಾರಣಕ್ಕೆ ಬರೆಯುವುದಕ್ಕೆ ಆಗಲಿಲ್ಲ? ನೀವು ಆಡಳಿತ ಸುಧಾರಣೆ ಹೇಗೆ ಮಾಡುತ್ತೀರಿ? ಅದೇ ತಹಶೀಲ್ದಾರ್, ಅದೇ ಡಿ.ಸಿ. ಅದೇ ಅಮಲ್ದಾರ, ಅದೇ ವಿಲೇಜ್ ಅಕೌಂಟೆಂಟ್, ಅದೇ ರೆವಿನ್ಯೂ ಇನ್ಸ್‌ಪೆಕ್ಟರ್ ಇರುವುದು. ಈಗ ಹೊಸದಾಗಿ ಪಿ.ಡಿ.ಓ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಂದು ಮಾಡಿಕೊಂಡಿದ್ದಾರೆ. ಆ ಪಂಚಾಯಿತಿಗೆ ಓಟು ಹಾಕಿದ್ದು, 91,000 ಜನ ಪಂಚಾಯತ್ ಮೆಂಬರುಗಳು ಇದ್ದಾರೆ. ಅವರನ್ನು ಎಲೆಕ್ಟ್ ಮಾಡಿ ಹೊಸ ಕ್ರಾಂತಿ ಮಾಡುವಂತಹ ಶಕ್ತಿ ಇರುವಂತಹ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಕಾಲದಲ್ಲಿ ಏನಾದರೂ ಪರಿಣಾಮ ಅಥವಾ ಬದಲಾವಣೆಯಾಗದಿದ್ದರೆ ದೇಶದಲ್ಲಿ ಹೇಗೆ ಬದಲಾವಣೆ ಮಾಡುವುದಕ್ಕೆ ಸಾಧ್ಯ? ಆದ್ದರಿಂದ ನಾವು ಆಲೋಚನೆ ಮಾಡಬೇಕಾಗಿದೆ. ಆದುದರಿಂದ ಆಡಳಿತ ಸುಧಾರಣೆ ಮಾಡಬೇಕಾಗಿರುವುದು ನನ್ನ ಮೊದಲನೆ ವಿನಂತಿ. ಮೊದಲು ಆಫೀಸ್‌ನಲ್ಲಿ ಕೂರಿಸಿ, ಮಾತನಾಡುವಂತಹ ಕಾನೂನನ್ನು ಮೊದಲು ಮಾಡಬೇಕು. ಮಾಡದಿದ್ದರೆ, ಬ್ರಿಟಿಷ್‌ನವರು ಈ ದೇಶ ಬಿಟ್ಟು ಹೋಗಿರುವವರು. ಬಣ್ಣ ಮಾತ್ರ ಬದಲಾವಣೆಯಾಗಿಲ್ಲ. ಬ್ರಿಟಿಷನವರು ಎಲ್ಲರಿಗೂ ಸಾಹೇಬರೇ,

ಸಾಹೇಬರೇ ಎಂದು ಕರೆಯುವುದು. ನಮಗೂ ಸಾಹೇಬರೇ ಎಂದು ಕರೆಯುವುದು. ಎಂ.ಎಲ್.ಎ. ಸಾಹೇಬರೇ, ಈ ರಸ್ತೆಯನ್ನು ತಾವು ತಕ್ಷಣ ಮಾಡಿಸಿ ಕೊಡದಿದ್ದರೆ ಜನ-ಜಾನುವಾರು ಮತ್ತು ಗಾಡಿಗಳು ತಿರುಗಾಡಲು ಸಾಧ್ಯವಿಲ್ಲ, ಆದ್ದರಿಂದ ಈ ರಸ್ತೆಯನ್ನು ಮಾಡಿಸಿ ಗಂಭೀರವಾಗಿ ನಮ್ಮನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತಾ ತಮಗೆ ಕೃತಾರ್ಥನಾಗುತ್ತೇನೆಂದು ನಮಗೆ ಒಂದು ಅರ್ಜಿ ಕೊಡುವುದು. ನಾವು ಅದನ್ನು ಎ.ಇ.ಇ. ಗೆ ಈ ಅರ್ಜಿಯನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣದಲ್ಲಿ ಈ ರಸ್ತೆಯನ್ನು ನೀನು ನನ್ನ ಅನುದಾನದಲ್ಲಿ ಸೇರಿಸಿ ಮಾಡಿಸಿಕೊಡಬೇಕೆಂದು ಆದೇಶ ಮಾಡುತ್ತಿದ್ದೇನೆ ಎಂದು ಹೇಳುವುದು. ಅದಕ್ಕೆ ಅವನು ಮಾನ್ಯ ಶಾಸಕರಿಗೆ ತಿಳಿಸುವುದೇನೆಂದರೆ ಈ ಸಾಲಿನ ಹಣ ಇಲ್ಲದಿರುವುದರಿಂದ ಇದನ್ನು ಮುಂದಿನ ಸಾಲಿಗೆ ಸೇರಿಸಲು ತಮ್ಮ ಅವಗಾಹನೆಗೆ ತರುತ್ತೇನೆ. Same ಅರ್ಜಿ, text ಅದೆ ಇರುತ್ತದೆ. ಹಳೇ ಗ್ರಾಮಫೋನ್ ಪ್ಲೇಟ್ಸ್ ಸಿಕ್ಕಿ ಹಾಕಿಕೊಂಡು ಬಿಡುತ್ತವೆ. ಆಗ ಅದು ನಾನಿರುವುದೇ ನಿಮಗಾಗಿ, ನಾನಿರುವುದೇ ನಿಮಗಾಗಿ ಎಂದು ಪದೇ ಪದೇ ಹೇಳಿದಂತೆ, ಇದೂ ಕೂಡ ನಿಮ್ಮ ಅರ್ಜಿ ಯಾವಾಗಲೂ ನಮಗಾಗಿ, ನಿಮ್ಮ ಅರ್ಜಿ ಯಾವಾಗಲೂ ನಮಗಾಗಿ ಎಂದು ಹೇಳುವುದು. ಪ್ರಜಾಪ್ರಭುತ್ವದ ಈ ದೇಶಕ್ಕೆ ಅನ್ನ ಕೊಡುವ ಅನ್ನದಾತ ಹಗಲು ರಾತ್ರಿ ಕೂಲಿ ಮಾಡಿ ಬೀದಿಯಲ್ಲಿರುವಂತಹ ವ್ಯಕ್ತಿಯನ್ನು ಗೌರವಯುತವಾಗಿ ಕಾಣದಿರುವಂತಹ ಪ್ರಜಾಪ್ರಭುತ್ವದಲ್ಲಿ ಇಲ್ಲಿ ನಾವು ಕುಳಿತುಕೊಂಡು 65 ವರ್ಷದಿಂದ ಈ ದೇಶದ ಆಡಳಿತ ಸುಧಾರಣೆ ಮಾಡುವುದಕ್ಕೆ ಆಗದೆ, ವ್ಯಕ್ತಿಯನ್ನು ಗೌರವಿಸದಿದ್ದ ಮೇಲೆ ಇದಕ್ಕಿಂತ ದೊಡ್ಡ ಅಸ್ಪೃಶ್ಯತೆ ಇನ್ನ್ಯಾವುದಿದೆ? ಜಾತಿ ಆಸ್ಪೃತ್ಯತೆ ಬೇರೆ. ಇದು ಎಂತಹ ಅಸ್ಪೃಶ್ಯತೆ? ಅಕ್ಷರ ಜ್ಞಾನವುಳ್ಳವರು ಈ ರೀತಿ ಮಾಡುವುದಕ್ಕೆ ಹೇಳಿದೆಯೇ? ಏನಾದರೂ ಆಡಳಿತ ಸುಧಾರಣೆ ಮಾಡುವುದಕ್ಕೆ ಮನಸ್ಸು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎರಡನೆಯದಾಗಿ ಕೃಷಿ, ಕೃಷಿ ಎಂದರೆ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಕೃಷಿ ಎಂದರೆ 135 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಿ ಆರೂಕಾಲು ಕೋಟಿ ಕನ್ನಡಿಗರನ್ನು ಹಸಿವಿಲ್ಲದಿರುವ ಹಾಗೆ ನೋಡಿಕೊಳ್ಳುವುದು. ಕೇಂದ್ರ ಸರ್ಕಾರ ಹೇಳುತ್ತದೆ. ಆಹಾರ ಭದ್ರತೆ ಕಾಯಿದೆಯನ್ನು ತಂದು ಈ ನಾಡಿನಲ್ಲಿ ಯಾರೂ ಕೂಡ ಹಸಿದುಕೊಂಡಿರಬಾರದು. ಏಕೆ ರೈತ ಭದ್ರತೆ ಕಾಯಿದೆಯನ್ನು ತಂದು ಈ ನಾಡಿನಲ್ಲಿ ಯಾರೂ ಕೂಡ ಹಸಿದುಕೊಂಡಿರಬಾರದು. ಏಕೆ ರೈತ ಭದ್ರತೆ ಕಾಯಿದೆ ಏನೂ ಬೇಡವೇ? ರೈತರಿಗೆ ಯಾವುದಾದರೂ ಒಂದು ಭದ್ರತೆ ಇದೆಯೇ? ಎಲ್ಲಿದೆ ನಮ್ಮ ಭದ್ರತೆ? ಯಾವುದು ಕೃಷಿ ನೀತಿ? ಕೃಷಿ ನೀತಿಯನ್ನು ಯಾರು ಮಾಡಿದ್ದಾರೆ? ಉದ್ಯೋಗ ಎಷ್ಟು? ನೂರಕ್ಕೆ 70ರಷ್ಟು ಉದ್ಯೋಗ ಸೃಷ್ಟಿ ಮಾಡಿ ಬೊಕ್ಕಸಕ್ಕೆ 75%, ಬೆಂಗಳೂರಿನಲ್ಲಿ 65% ತೆರಿಗೆ ಬೊಕ್ಕಸಕ್ಕೆ ಬರುತ್ತದೆಂದು ಹೇಳುತ್ತಾರೆ. Exciseನಲ್ಲಿ 14 ಸಾವಿರ ಕೋಟಿ ರೂಪಾಯಿ ಹೇಗೆ ಬಂತು? ಬೆಂಗಳೂರಿನಲ್ಲಿರುವ ಒಂದು ಕೋಟಿ ಜನರಿಗೆ ಹೋಟೆಲು ಇಲ್ಲವೇ? ಆ ಹೋಟೆಲ್ ತೆರಿಗೆ ಎಲ್ಲಿಂದ ಬರುತ್ತದೆ? ಇಡೀ ಬಟ್ಟೆ ಅಂಗಡಿಗಳು ಇವೆಯಲ್ಲ, ಇಡೀ ಜ್ಯೂಸ್ ಅಂಗಡಿ ಇವೆಯಲ್ಲ, ಅದು ಯಾವುದರಿಂದ ಬರುತ್ತದೆ? ಉದ್ಯೋಗ ಸೃಷ್ಟಿ ಮಾಡಿ 70 ರಿಂದ 75% ಬೊಕ್ಕಸಕ್ಕೆ ದುಡ್ಡು ಬರತಕ್ಕಂಥ ರೈತರಿಗೆ ಒಂದು ಬೆಲೆ ನೀತಿ ಮಾಡುವುದಕ್ಕೆ ಆಗಲಿಲ್ಲವೇ? ಏಕೆ ಮಾಡುವುದಕ್ಕೆ ಆಗಲಿಲ್ಲ? ಏಕೆ ಕೃಷಿ ನೀತಿ ಮಾಡುವುದಕ್ಕೆ ಆಗುವುದಿಲ್ಲ? ಆಮೇಲೆ consumer, consumer ಎನ್ನುವುದು, ನಾವೇನು consumer ಅಲ್ಲವೇ? ನಾವು ಬರೀ ಗಾಳಿ ಕುಡಿದು ಬದುಕಿದ್ದೇವೆ. ನಾವು consumer ತಾನೇ? ಬಹಳ ಜನ consumer ಎಂದು ಹೇಳುತ್ತಾರೆ. Producer ಇದ್ದರೆ ತಾನೇ consumer ಇರುವುದು. ಈಗ ಕೃಷಿ ಏನಾಗಿದೆ. ರೈತರು ಹಳ್ಳಿ ಬಿಟ್ಟು ಗುಳೆ ಹೋಗುತ್ತಿದ್ದಾರೆ. ಅವರಿಗೆ ಕೃಷಿ ಬೇಡವೆನ್ನುವ ಸ್ಥಿತಿಗೆ ಬಂದಿದ್ದಾರೆ. ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ, ಬಹಳ ಜನರು ಆಹಾರ

ಭದ್ರತೆ ಎಂದರೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಎಂದು ತಿಳಿದುಕೊಂಡಿರಬಹುದು. ನಾವು sign ಹಾಕಿಬಿಟ್ಟಿದ್ದೇವೆ, ಅಮೇರಿಕಾಕ್ಕೆ ಫೋನ್ ಮಾಡಿಬಿಟ್ಟರೆ ಮೂರು ಊಟ, ಎರಡು ನಾಷ್ಟ ಕಳುಹಿಸಿಕೊಡುತ್ತಾರೆ. ನಾವು ಸೀದಾ ಎಲ್ಲಾ ಊಟ ಮಾಡಬಹುದೆಂದು ಎಲ್ಲಾ ತೀರ್ಮಾನವನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಇನ್ನು ರೈತ ಇಲ್ಲದಿದ್ದರೂ ಪರವಾಗಿಲ್ಲ, ನೀನು ಸತ್ತರೆ we won't care, ಮೂರು ಲಕ್ಷ ಜನರು ಸತ್ತಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಒಂದು ದಿವಸವೂ ಚರ್ಚೆಯಾಗಲಿಲ್ಲ. ನಾವು ಕರ್ನಾಟಕದಲ್ಲಿ 56,000 ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಏಕೆ ಚರ್ಚೆಯಾಗಬೇಕಾಗಿತ್ತು. ನಮಗೆ ಮಾನಸಿಕ ರೋಗವಂತೆ, ಬಜೆಟ್‌ನಲ್ಲಿ ರೈತರನ್ನು ರಕ್ಷಣೆ ಮಾಡಲು ಮಾನಸಿಕ ತಜ್ಞರಿಗೂ ಹೇಳಿದ್ದೇನೆಂದು ಹೇಳಿದ್ದಾರೆ. ನಮಗೆ economy ಏನೂ ಇಲ್ಲವೇ? ನಮಗೆ ಯಾವುದೇ ಆರ್ಥಿಕ ಭದ್ರತೆ ಇಲ್ಲವೇ? Cost of Cultivation, Cost of living, ಈ ದೇಶದಲ್ಲಿ ಒಬ್ಬ ರೈತನ ಬಗ್ಗೆ ಒಂದು ಶಬ್ದ ಏಕೆ ಮಾತನಾಡಿಲ್ಲ? ನಾಲ್ಕು ಸಾವಿರ ಕೋಟಿ ಚಿಲ್ಲರೆ ಹಣವನ್ನು ಕೊಟ್ಟಿದ್ದೇನೆ. ನಮ್ಮ ಉತ್ಪಾದನೆ ಎಷ್ಟು, ನಮ್ಮ ಸಾಲ ಎಷ್ಟು? ವಾಣಿಜ್ಯ ಬೆಳೆಗಳ ಕೃಷಿ ನೀತಿ, ಮುಖ್ಯಮಂತ್ರಿ ಆಗಿರುವ ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿರುವುದು. Karnataka Sugar Development fund ಮಾಡಿ, 5,000 ಕೋಟಿ ರೂ.ಗಳ ಹಣವನ್ನು ಸಂಗ್ರಹಣೆ ಮಾಡಿ, ವಾಣಿಜ್ಯ ಬೆಳೆಗಳಲ್ಲಿ ಅದು 26 ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡುತ್ತದೆ. By-product ಜಾಸ್ತಿ ಇರುತ್ತದೆ, ಅದು ನಾಶವಾದರೆ long time, short time ಅನ್ನು ಒಂದು ವರ್ಷ, ಒಂದು ಕಾಲು ವರ್ಷ, ಒಂದೂವರೆ ವರ್ಷ ಬೆಳೆಯಾಗುತ್ತದೆ. ಅದನ್ನು ಸಂಪೂರ್ಣ ರಕ್ಷಣೆ ಮಾಡುವುದಕ್ಕೆ ಸಂಪೂರ್ಣ ಆರ್ಥಿಕ ಭದ್ರತೆ ಇರುವಂಥ Karnataka Sugar Development Fund ಎಂದು ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಅವರ ಹತ್ತಿರ ಮಾತನಾಡಿ, ಇಲ್ಲಿಯವರೆಗೂ ಮಾತನಾಡಿದ್ದೇವೆ. ಇದನ್ನು ಏಕೆ ಮಾಡುವುದಕ್ಕೆ ಆಗಲಿಲ್ಲ? ಈಗ

ಮಾತನಾಡುವುದಕ್ಕೆ ಆಗಲಿಲ್ಲ, ಈಗ ಯಾರಿಗೆ ಕೊಡುತ್ತೀರಿ, ಒಂದು ಟನ್‌ಗೆ 500 ರೂ.ಗಳನ್ನು ಕೊಡುವುದಿಲ್ಲ. ಹಾಗೆಂದು ಯಾರಾನ್ನಾದರೂ ಜೈಲಿಗೆ ಹಾಕುವುದಕ್ಕೆ ಆಗುತ್ತದೆಯೇ? ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ನನಗೆ ಅರ್ಥವಾಗುತ್ತಿಲ್ಲ. ನಮ್ಮ Parliament Members ಕೇಂದ್ರದಲ್ಲಿ ಏಕೆ ಚರ್ಚೆ ಮಾಡುತ್ತಿಲ್ಲ, ಇವರು ಏನಾಗಿದ್ದಾರೆ? ಸಕ್ಕರೆ ಜೀವನಾವಶ್ಯಕ ವಸ್ತು, ಅದು ಎಲ್ಲಿ ಆಗುತ್ತದೆ. ಸಕ್ಕರೆ ಖಾಯಿಲೆ 37% ಬಂದಿದೆ, ಇನ್ನು 63% ಸಕ್ಕರೆ ತಿನ್ನುವವರು, ಇನ್ನು 15 ವರ್ಷಗಳು ಹೋದರೆ ಇದು 40%ಗೆ ಬರುತ್ತದೆ. ಇಡೀ ಭಾರತ ದೇಶಕ್ಕೆ 10 ಕೆ.ಜಿ.ಸಕ್ಕರೆ ಸಾಕು, ಇನ್ನು 90 ಕೆ.ಜಿ. ವ್ಯಾಪಾರಕ್ಕೆ ಹೋಗುತ್ತದೆ. ಈ 90 ಕೆ.ಜಿ. ಸಕ್ಕರೆ ವ್ಯಾಪಾರಕ್ಕೆ ಹೋದರೆ 50 ರೂ.ಗಳಾಗುತ್ತದೆ. ಅದೇ ಸಕ್ಕರೆಯನ್ನು ಬಡವರಿಗೆ ಕೆ.ಜಿ.ಗೆ 5 ರೂ.ಗಳಿಗೆ ಕೊಡಿ, ಯಾರು ಬೇಡವೆಂದು ಹೇಳುತ್ತಾರೆ? ಬಡವರನ್ನು ರಕ್ಷಣೆ ಮಾಡಬೇಕು, 5 ರೂ.ಗಳಿಗೆ ನಮ್ಮವರೆಲ್ಲಾ ತಿನ್ನಲಿ, ಆದರೆ ಕಬ್ಬಿನ ಬೆಲೆಯನ್ನು ನಿಗದಿ ಮಾಡುವುದಕ್ಕೆ ಜಗತ್ತಿನಲ್ಲಿ 32 ರೂ.ಗಳಿದ್ದ ಸಕ್ಕರೆ 24 ರೂ.ಗಳಿಗೆ ಬಂದಿದೆ. ಯಾವುದಾದರೂ ಡಿ.ಸಿ. ಸಂಬಳ 80,000 ರೂ.ಗಳಿರುವುದು 40,000 ರೂ.ಗಳಿಗೆ ಬಂದಿದೆಯೇ? ನಮ್ಮ ಎಂ.ಎಲ್.ಎ. ಗಳ ಸಂಬಳ ಯಾವಾಗಲಾದರೂ ಹಿಂದಕ್ಕೆ ಹೋಗಿದೆಯೇ? ರೈತರಿಗೆ ಏಕೆ ಒಂದು ಬೆಲೆ ನೀತಿಯನ್ನು ಮಾಡುವುದಕ್ಕೆ ಆಗಲಿಲ್ಲ? Central Agriculture Price Commission, ರಂಗನಾಥನ್ ವರದಿ, ಸ್ವಾಮಿನಾಥನ್ ವರದಿ, ಹಕ್ ವರದಿ, ಈ ವರದಿಗಳು ಎಷ್ಟೊಂದು ತಯಾರಾಗಿ ಎಲ್ಲಿವೆ? ಅವೆಲ್ಲಾ ಆಲ್ಮೆರಾದಲ್ಲಿ ಸೇರಿಕೊಂಡಿವೆ. ಇವತ್ತು ಇಡೀ ಕರ್ನಾಟಕದಲ್ಲಿ by-product 1,500 ಮೆ.ವ್ಯಾಟ್ ಕರೆಂಟ್ ಉತ್ಪಾದನೆಯಾಗುತ್ತದೆ. ಕಬ್ಬಿನ ಸಿಪ್ಪೆಯಿಂದ 1,500 ಮೆಗಾವ್ಯಾಟ್ ಎಂದರೆ 8,000 ಕೋಟಿ ರೂ.ಗಳ ಕರೆಂಟ್ ಉತ್ಪಾದನೆ ಮಾಡುತ್ತಾರೆ. Agrigold ಗೊಬ್ಬರ ತಯಾರಾಗುತ್ತಿದೆ, ಇವತ್ತು ethanol ಗೆ ಹೋಗಬೇಕು. ಇನ್ನು 10–15 ವರ್ಷಗಳು 20 ವರ್ಷಗಳಿಗೆ ಡೀಸೆಲ್ ಇಲ್ಲ.

ಇನ್ನು 20 ವರ್ಷಗಳು ನಾನು ಕಾರಲ್ಲಿ ಓಡಾಡುತ್ತೇನೆಂಬ ಪ್ರಶ್ನೆಯೇ ಬರುವುದಿಲ್ಲ. ನಾವು ethanol ಹೋಗುವುದಕ್ಕೆ ಆಗಲಿಲ್ಲ, ಬ್ರೆಜಿಲ್‌ನಲ್ಲಿ 75% ನಿಂದ 80% ಎಥನಾಲ್‌ಗೆ ಹೋಗುತ್ತಿದೆ, ನಾವು ಈಗ 5% ಇಥನಾಲ್‌ಗೆ ಬಂದಿದ್ದೇವೆ. ಏಕೆಂದರೆ, oil ಲಾಬಿ, ನಾವು ನಮ್ಮ ದೇಶದ ಎಂಟು ಲಕ್ಷ ಕೋಟಿ ರೂ.ಗಳು ತೆರಿಗೆ ಹಣ ಅಲ್ಲಿಗೆ ಹೋಗುತ್ತಿರುವುದು. ನಮ್ಮ ಕಾಲ ಮೇಲೆ ನಾವೇ ನಿಂತುಕೊಳ್ಳುವಂಥ ತೈಲ ನೀತಿಯ ಬಗ್ಗೆ ಇದುವರೆಗೂ ಅಲೋಚನೆ ಮಾಡಿಲ್ಲ. ನಮ್ಮ ಹಿರಿಯೂರಿನ ರೈತನ ಬಳಿ ಇಸ್ರೇಲ್‌ನವರು ಬಂದು ಮೂರು ಲಕ್ಷ ಹೊಂಗೆ ಸಸಿಯನ್ನು ತೆಗೆದುಕೊಂಡು bio-diesel ಗೆ ಹೋಗಿದ್ದಾರೆ. ನಾವು ಇನ್ನು ಬರಗಾಲವನ್ನು ನಾಶ ಮಾಡುತ್ತೇವೆ. ಕೃಷಿ ಆಯೋಗ ಮಾಡಿದ ಸಂಪೂರ್ಣ ಖುಷ್ಕಿ ಪ್ರದೇಶದ ರೈತರ ರಕ್ಷಣೆಗೆ ಮಹಾ ಕ್ರಾಂತಿಯನ್ನು ಮಾಡುತ್ತೇವೆಂದು ಮಾಡಲಿ, ಒಂದು **ತೆವಡೆ ಮೇಲೆ ನೆಡೆಸಲಿ** ಒಂದು ಎಕರೆಯಲ್ಲಿ ಹೊಂಗೆ ಮರ ಮಾಡಿದರೆ 75,000 ರೂ.ಗಳು ಸಿಗುತ್ತದೆ. They declared a war ಸಂಪೂರ್ಣ ಬರಗಾಲವನ್ನು ನಾಶ ಮಾಡತಕ್ಕಂಥ ಆರ್ಥಿಕ ನೀತಿಯ ಭದ್ರತೆಯನ್ನು ಸರ್ಕಾರ ಘೋಷಣೆ ಮಾಡಿದೆ. ಒಂದು ಹೊಂಗೆ ಮರ 3,000 ರೂ.ಗಳ ಆದಾಯವನ್ನು ಕೊಡುತ್ತದೆ. ಒಂದು ಎಕರೆಗೆ 25 ಮರಗಳನ್ನು ನೆಡಿ ಸಾಕು, ಎಕರೆಯೆಂದರೆ ಬದುವಿನ ಮೇಲೆ ನೆಡಿ, ನೀರು ಸಂಗ್ರಹಣೆಯಾಗುತ್ತದೆ, ಗೊಬ್ಬರ ಆಗುತ್ತದೆ, ಹೊಂಗೆ ಹಿಂಡಿಯಾಗುತ್ತದೆ, bio-diesel ತಯಾರಾಗುತ್ತದೆ. ಆದರೆ ನಾವು ಯಾವ ಆಲೋಚನೆಯನ್ನು ಮಾಡುತ್ತಿಲ್ಲ. ಬರಗಾಲದಿಂದ ಹೇಗೆ ರಕ್ಷಣೆ ಮಾಡುತ್ತೀರಿ? ಬೆಂಗಳೂರಿಗೆ ಗುಳೆ, ಬೆಳಗಾಂಗೆ ಗುಳೆ, 70% ಆಹಾರ ಭದ್ರತೆಯನ್ನು ಸೃಷ್ಟಿ ಮಾಡುವಂಥ ಒಬ್ಬ ರೈತನಿಗೆ ರಕ್ಷಣೆ ಮಾಡುವುದಕ್ಕೆ ಆಗುತ್ತಿಲ್ಲ. ಮೊನ್ನೆ ಬಿ.ಟಿ.ಹತ್ತಿ 220 ಕೋಟಿ ರೂ.ಗಳಷ್ಟು ಸಂಪೂರ್ಣ ನಾಶವಾಗಿ ಹೋಯಿತು. ಸರ್ಕಾರ ಅವರ ಹತ್ತಿರ 10 ಕೋಟಿ ರೂ.ಗಳನ್ನು ಕಿತ್ತು, ಇವರ 26 ಕೋಟಿ ರೂ.ಗಳನ್ನು ಒಟ್ಟು 36 ಕೋಟಿ ರೂ.ಗಳು ಬಂತು. ರೈತರು ಏನು ಮಾಡಬೇಕು? Soil

reorganization ಆಗಬೇಕು, finance reorganization ಆಗಬೇಕು, 30 ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡುವಂಥ ಹತ್ತಿ ಬೆಳೆಗಾರರ ಸಂಪೂರ್ಣ ಕನಿಷ್ಠ ರಕ್ಷಣೆ ಮಾಡುವುದಕ್ಕೆ ನಮ್ಮ ಹತ್ತಿರ ಆರ್ಥಿಕ ನೀತಿ ಇಲ್ಲ. ಕೃಷಿ ಆಯೋಗವನ್ನು ರಚನೆ ಮಾಡಿದ್ದೀರಿ, ಎಲ್ಲಿಂದ ಹಣವನ್ನು ತರುತ್ತೀರಿ? ಟ್ಯಾಕ್ಸ್ ಹಾಕಬೇಕು. ಕರ್ನಾಟಕದ ಸಮಗ್ರ ಕೃಷಿಯನ್ನು ರಕ್ಷಣೆ ಮಾಡುವುದಕ್ಕೆ, ಹಳ್ಳಿಗಾಡಿನ ಜನರನ್ನು ರಕ್ಷಣೆ ಮಾಡುವುದಕ್ಕೆ, ರಾಜ್ಯದ ಅಹಾರ ಭದ್ರತೆಗೆ ವ್ಯಾಟ್ ಮಾದರಿಯಲ್ಲಿ ರೈತರನ್ನು ರಕ್ಷಣೆ ಮಾಡುವುದಕ್ಕೆ ಸಣ್ಣ ಟ್ಯಾಕ್ಸ್ ಹಾಕಿ, 12,000 ಕೋಟಿ ರೂ.ಗಳನ್ನು ಸಂಗ್ರಹಣೆ ಮಾಡಿ, ರೈತರನ್ನು ರಕ್ಷಣೆ ಮಾಡಿ. This is a political will. ಮೊನ್ನೆ ಮಾನ್ಯ ವೀರಪ್ಪ ಮೊಯಿಲಿಯವರ ಮನೆ ಹತ್ತಿರ ಹೋಗಿದ್ದೇವೆ, 18 ಎಕರೆ ಹೊಲ, 16–17 ಜನರು ಬೀದಿಯಲ್ಲಿ ಮಗುವನ್ನು ಮಲಗಿಸಿಕೊಂಡು, ಆ ಮಗು ಜೊಲ್ಲು ಸುರಿಸುತ್ತಿದೆ, ರಸ್ತೆಯಲ್ಲಿ ಕುಳಿತುಕೊಂಡು ಅನ್ನ ಚೆಲ್ಲಿಕೊಂಡು ಊಟ ಮಾಡುತ್ತಿದೆ. ಗುಳೆ ಹೋಗುವುದು ಒಂದು ದೇಶದ ಸಂಸ್ಕೃತಿ ಏನು? ಗುಳೆ ಹೋಗುವುದು ನಾಡಿಗೆ ಗೌರವ ತರುವಂಥ ಕೆಲಸವೆನ್ನುತ್ತೇವೆಯೆ? ಒಂದು ಕಾನೂನನ್ನಾದರೂ ಮಾಡಿ. ನಾನು ಅಮೇರಿಕ ದೇಶಕ್ಕೆ ಹೋಗಿದ್ದೆ, ಅಲ್ಲಿ ಒಂದು ಹೊಟೇಲ್‌ಗೆ ಹೋಗಿದ್ದೆ, ನಾವು ನಾಲ್ಕು ಜನರು ತಿಂದು ಹತ್ತು ಡಾಲರ್‌ಗಳ ಟ್ಯಾಕ್ಸ್ ಹಾಕಿದರು. ಅಲ್ಲಿ ಸಪ್ಲೈಯರ್‌ಗೆ ಕಡ್ಡಾಯವಾಗಿ 10 ಡಾಲರ್ ಕೊಡಬೇಕು. ನಮ್ಮ ಹಳ್ಳಿಯ ಹುಡುಗರು ಎಂಜಲು ಲೋಟಗಳನ್ನು ತೊಳೆಯುತ್ತಾರೆ. ಮೈಸೂರು–ಬೆಂಗಳೂರಿನಲ್ಲಿ ಒಬ್ಬನಿಗೆ ಸಪ್ಲೈ ಮಾಡಿದರೆ 2 ರೂ.ಗಳ tips ಕೊಡುತ್ತಾರೆ, 5 ಜನರಿಗೆ ಸಪ್ಲೈ ಮಾಡಿದರೆ 5 ರೂ.ಗಳ ಟಿಪ್ಸ್ ಕೊಡಿ ಎಂದು ಕಾನೂನಾದರೂ ಮಾಡಿ. ನಮ್ಮ ಹಳ್ಳಿ ಹುಡುಗರನ್ನು ನೋಡುವುದಕ್ಕೆ ಆಗುವುದಿಲ್ಲ. ಒಂದು ದೇಶದಲ್ಲಿ ಒಂದು ಉದ್ಯೋಗವನ್ನು ಗೌರವಿಸುವುದಕ್ಕೆ ಒಂದು ಟಿಪ್ಸ್, ಅವನ ಉದ್ಯೋಗಕ್ಕೆ ಗೌರವವನ್ನು ಕೊಡುವಂಥ ಕನಿಷ್ಠ ಹಣವನ್ನು ಕೊಡಿಸದೇ ಇರುವಂಥದ್ದಕ್ಕೆ ಕಾನೂನು ಮಾಡಬೇಕು, ಏಕೆ?

ಹೊಟೇಲ್‌ನವನು ಒಂದು ಮಸಾಲೆ ದೋಸೆಗೆ 45 ರೂ.ಗಳನ್ನು ಬರೆದರೂ ಸುಮ್ಮನೆ ಇರುತ್ತೀರಿ. ಅವನಿಗೆ ಆ 45 ರೂ.ಗಳು ಎಲ್ಲಿಂದ ಬರುತ್ತದೆ? ಆ ದೋಸಿಗೆ ಅಕ್ಕಿ ಎಲ್ಲಿಂದ ಬಂತು? ಮಂಡ್ಯದಿಂದ ಬಂತು, ಆಲೂಗಡ್ಡೆ ಎಲ್ಲಿಂದ ಬಂತು? ಅದು ಹಾಸನದಿಂದ ಬಂತು, ಈರುಳ್ಳಿ ಎಲ್ಲಿಂದ ಬಂತು? ಚಿತ್ರದುರ್ಗದಿಂದ ಬಂತು, ಎಣ್ಣೆ ಎಲ್ಲಿಂದ ಬಂತು? ಚಳ್ಳಕೆರಿಯಿಂದ ಬಂತು. ಆ ಎಣ್ಣೆ ಹಾಕುವ ಪೊರಕೆ ಎಲ್ಲಿಂದ ಬಂತು? ಅದು ನಮ್ಮ ಊರಿನ ತೆಂಗಿನ ಮರದ್ದು, ಅದಕ್ಕೆ extra ಹಾಕುವುದು, ಅವನ ಬೆವರು ಹಾಕುತ್ತಾನೆ ಅಷ್ಟೆ. ಆ ದೋಸೆಗೆ 45 ರೂ.ಗಳಾಗುತ್ತದೆ. ನಮ್ಮ ಊರಿನಿಂದ ದೋಸೆಗೆ ಅಕ್ಕಿ ತಂದು, ನಮ್ಮ ಹತ್ತಿರ ತೆಗೆದುಕೊಂಡು ಕಡುಬು ಮಾಡಿ, ಬೆಲೆ ಅವನು ನಿಗದಿ ಮಾಡುತ್ತಾನೆಂದರೆ, ನಾವು ಏನು ಮಾಡಿದ್ದೇವೆ. ನಾವು 1.300 ರೂ.ಗಳಿಗೆ ಭತ್ತವನ್ನು ಕೊಟ್ಟು ನಾವು ಕ್ಯೂ ನಲ್ಲಿ ನಿಂತಿದ್ದೀವಿ. ನಮ್ಮ ಸ್ಥಿತಿ ಹೇಗೆ ಆಗಿದೆಯಂದರೆ ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಊರಿನಲ್ಲಿ ಒಬ್ಬ ಇದ್ದ, ತೆಂಗಿನ ಮರಕ್ಕೆ ಕಾಯಿ ಕಿತ್ತುಕೊಂಡು ಹೋದರೆ ಬೋರ್ಡ್ ಹಾಕುತ್ತಿದ್ದ, ಮರ ನಿಮ್ಮದು, ಫಲ ನಮ್ಮದ್ದು ಎಂದು ಹಾಕುತ್ತಿದ್ದ ಹಾಗೆ ವಿಧಾನ ಸೌಧದಲ್ಲೂ ತೆರಿಗೆ ನಿಮ್ಮಧು, ದುಡ್ಡೆಲ್ಲಾ ನಮ್ಮದು ಎಂದು ಬೋರ್ಡ್ ಹಾಕುವ ಕಾಲ ಬರುತ್ತದೆ. ಯಾವ ನೀತಿಗೋಸ್ಕರ ನಾವು ಯೋಚನೆ ಮಾಡಿ, ಮೊನ್ನೆ ಒಬ್ಬ Scientist ಹತ್ತಿರ ಮಾತನಾಡುತ್ತಿದ್ದೆ, ಏನ್ರಿ ಇಷ್ಟೊಂದು ವಿಜ್ಞಾನಿಗಳಿದ್ದೀರಿ, ರೈತರಿಗೆ ದುಡಿಯುವವರಿಗೆ, ಬೆಳೆಗೆ ಒಂದು ಬೀಜವನ್ನು ಕೊಡುವುದಕ್ಕೆ ಆಗುವುದಿಲ್ಲವೇ? ಎಂದು ಕೇಳಿದರೆ ಸಂಶೋಧನೆಗೆ ಹಣವಿಲ್ಲವೆಂದು ಹೇಳುತ್ತಾರೆ. ಅಮೇರಿಕ ದೇಶದಲ್ಲಿ ಸಂಶೋಧನೆಗೆ ಬಜೆಟ್‌ನಲ್ಲಿ 10%, 12% ಇಡುತ್ತಾರೆ, ನಮ್ಮಲ್ಲಿ 1.6% ಇದೆ. ಕೃಷಿ ಪ್ರಧಾನವಾದ ದೇಶದಲ್ಲಿ ಒಂದು ಬಿತ್ತನೆ ಬೀಜವನ್ನು ಕೊಡಲು ಆಗದೇ ಇರುವಂಥ ಅಸಮರ್ಥ ವಿಜ್ಞಾನಿಗಳು ಎಂದು ಹೆಸರು ತೆಗೆದುಕೊಳ್ಳಬೇಕಾದರೆ ಕಾರಣವೇನು? ಇಷ್ಟೊಂದು ಕೃಷಿ ವಿಶ್ವ ವಿದ್ಯಾಲಯಗಳು ಏಕೆ ಬೇಕು? ಬಿ.ಟಿ.ಹತ್ತಿ, ಅಮೇರಿಕಾದಿಂದ

ಬದನೆಕಾಯಿಯನ್ನು ತರಬೇಕೆ? ನಮ್ಮ ಹತ್ತಿರ ಬದನೆಕಾಯಿ ಇಲ್ಲವೇ? ನಮ್ಮಲ್ಲಿ ಬದನೆಕಾಯಿಯ ತಳಿಗಳು 56 ಇವೆ. ಉತ್ತರ ಕರ್ನಾಟಕದಲ್ಲಿ ಉಂಡೆ ಬದನೆಕಾಯಿ ತಿನ್ನುತ್ತಾರೆ, ಅದು ಹೇಗಿರುತ್ತದೆ? ನಮ್ಮಲ್ಲಿ ಬದನೆಕಾಯಿ ಎಣ್ಣೆಗಾಯಿಯನ್ನು ಅಮೇರಿಕಾದವರು ಯಾರಾದರೂ ತಿಂದರೆ, ಅವರು ಹಾಗೆ ಎದ್ದು ನಿಂತುಕೊಂಡು ಬಿಡುತ್ತಾರೆ. ನಾನು ಒಂದು ಸಾರಿ ರೋಮ್‌ಗೆ ಹೋಗಿದ್ದೆ, ಹೇಗಾದರೂ ಇರಲಿ ಎಂದು ಉಪ್ಪೆಸರಿನ ಖಾರವನ್ನು ತೆಗೆದುಕೊಂಡು ಹೋಗಿದ್ದೆ. ಅಲ್ಲಿ ಯಾರೋ ಒಬ್ಬಳು, 'What is this?' ಎಂದು ಕೇಳಿದಳು. ನನಗೆ ಅಷ್ಟೊಂದು ಇಂಗ್ಲೀಷ್ ಬರುತ್ತಿರಲಿಲ್ಲ, ಚಿಲ್ಲಿ ಚಟ್ನಿ ಎಂದು ಹೇಳಿ, 'Do you want this'? ಎಂದರೆ, 'I want a small quantity' ಎಂದಳು. ನಾನು ಒಂದಿಷ್ಟು ದಪ್ಪ ಖಾರವನ್ನು ಹಾಕಿದೆ. ಅದನ್ನು ತಿರುಗಿಸಿ ಕುಡಿದುಬಿಟ್ಟು ಎದ್ದು ನಿಂತುಕೊಂಡು ಬಿಟ್ಟಳು, ಎರಡು ನಿಮಿಷ ಕೆಳಗೆ ಕುಳಿತುಕೊಳ್ಳಲೇ ಇಲ್ಲ. 'What is this? ಎಂದು ಕೇಳಿದ್ದಕ್ಕೆ, 'This is just like a dynamic atom bomb'. ಎಂದು ಹೇಳಿದಳು. ಇಷ್ಟು ಖಾರಕ್ಕೇ ಎದ್ದುನಿಂತುಕೊಂಡು ಬಿಟ್ಟಳು ಎಂದರೆ ನಾವು ಇಷ್ಟಿಷ್ಟು ದಪ್ಪ ಖಾರವನ್ನು ತಿಂದು ಆರಾಮವಾಗಿ ಕುಳಿತಿದ್ದೇವೆ ಎಂದರೆ ನಾವು ಎಷ್ಟು ಸ್ಟ್ರಾಂಗ್ ಇರಬಹುದು? ನಮ್ಮ food culture ಎಲ್ಲಿದೆ? ನಮ್ಮ ಹವಾಗುಣ, ನಮ್ಮ ಊಟ, ನಮ್ಮ ದಿನನಿತ್ಯದ ಬದುಕು, ನಮ್ಮ ವಾತಾವರಣಕ್ಕೆ ತಕ್ಕಂತೆ ಬೇಕಾಗಿರತಕ್ಕಂಥ ಬೆಳೆ ಪದ್ಧತಿಯ ಬೀಜವನ್ನು ಕೊಡಲಿಕ್ಕೆ ಆಗದಿದ್ದ ಮೇಲೆ ಹೇಗೆ? ಮೊದಲು ಹೆಡ್‌ರಾಗಿ, ಗಿಡ್‌ರಾಗಿ ಐದು ಕ್ವಿಂಟಾಲ್ ಮೇಲೆ ಬೆಳೆಯುತ್ತಿರಲಿಲ್ಲ. ಪರಿಶಿಷ್ಟ ಜಾತಿಯ ಲಕ್ಷ್ಮಣಪ್ಪ ಎನ್ನುವವರು 25 ಕ್ವಿಂಟಾಲ್ ಬೆಳಯತಕ್ಕಂಥ ರಾಗಿಯ ತಳಿಯನ್ನು ಕಂಡುಹಿಡಿದಿದ್ದು ಅವರು ನಮ್ಮ ರಾಗಿ ಶಿವ. ಸರ್ಕಾರ ಅವರನ್ನು ಇಂಗ್ಲೆಂಡ್‌ಗೆ ಹೋಗಿ ಎಂದು ಹೇಳಿದರು, ಅವರು ಹೋಗುವುದಿಲ್ಲ ಎಂದರು. ಅವರಿಗೆ ಮನೆ ಇರಲಿಲ್ಲ. ಒಂಭತ್ತು ಗಂಟೆ ರಾತ್ರಿಯಲ್ಲಿ ನಾನೇ ಅವರನ್ನು ಕರೆದುಕೊಂಡು ಹೋಗಿ ಅವರ ಮಗಳ ಮನೆಗೆ

ಬಿಟ್ಟುಬಂದೆ. ಅವರು ಆ ರಾಗಿ ತಳಿಯನ್ನು, ರಾಗಿ ಬಿತ್ತನೆಯನ್ನು ಹೇಗೆ ಕಂಡುಹಿಡಿದರು? ನಮ್ಮ ವಿಜ್ಞಾನಿಗಳಿಗ್ಗೆ ಹೇಗೆ ಇಂಥದ್ದು ಸಾಧ್ಯವಾಗುತ್ತಿಲ್ಲ, ಅವರು Bio Technologyಗೆ ಹೋಗಬೇಕು ಎನ್ನುತ್ತಾರೆ. ಜೀನ್ಸ್ ಬಗ್ಗೆ ಚರ್ಚೆಯಾಯಿತು. ಬೂದುಗುಂಬಳಕಾಯಿಗೆ ಹಂದಿ ಜೀನ್ಸ್ ಬಿಟ್ಟುಬಿಡುವುದು. ಬೂದುಗುಂಬಳಕಾಯಿಯನ್ನು ತಿಂದು ನಾವು ಹಂದಿಯ ಹಾಗೆ ಕೂಗಾಡುವುದೇ? ಯಾವಯಾವ ಜೀನ್ಸ್ ಎಲ್ಲೆಲ್ಲಿ ಬಿಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. Naturalityಯನ್ನು ಏಕೆ disturb ಮಾಡುತ್ತಾರೆ? ಉದಾಹರಣೆಗೆ ಹೇಳುತ್ತೇನೆ, ಪಶುಸಂಗೋಪನಾ ಸಚಿವರು, ಹಸುಗಳ ಸಾವಿಗೆ ನಾವು 26 ಕೋಟಿ ಇಟ್ಟಿದ್ದೇವೆ ಎಂದು ಹೇಳಿದರು. ಸತ್ತಿರುವಂಥ ಹಸುಗಳು ಯಾವುವು? ಇಂಡಿಯಾದವು ಒಂದೂ ಸತ್ತಿಲ್ಲ, ಸತ್ತಿರುವುದೆಲ್ಲ ಸೀಮೆಹಸುಗಳು, ಜೆರ್ಸಿ–ಗಿರ್ಸಿ ತಳಿಗಳು. ಏಕೆಂದರೆ, ಅವು ತಡೆಯಲು ಆಗುತ್ತಿಲ್ಲ. ನಮ್ಮ ದನಗಳಿಗೆ resistance power ಇದೆ. ಏಕೆಂದರೆ, ನಮ್ಮ ದನಗಳ ಭುಜ ಕಳಸ ಇದ್ದಹಾಗೆ ಇದೆ. ಅವುಗಳ ಭುಜವನ್ನು ನೋಡಿದ್ದೀರಾ? ಅದು ಫ್ಲ್ಯಾಟ್ ಆಗಿರುತ್ತದೆ. ಹಳ್ಳಿಕಾರ್ ತಳಿಯನ್ನು ನೀವು ನೋಡಬೇಕು. ಅಮೇರಿಕಾದಿಂದ ಹೋರಿ ತರಿಸಿ ಮಾಡಬಾರದ್ದನ್ನೆಲ್ಲ ಮಾಡಿದ್ದಾರೆ. ಯಾರು ಹೇಳಿದ್ದರು ನಿಮಗೆ? ನಮ್ಮ ಹಸುಗಳು ಅಮೇರಿಕಾದ ಹೋರಿಯನ್ನು ಕೇಳಿದ್ದವೇ? ಏಕೆಂದು ನನಗೆ ಅರ್ಥವಾಗುತ್ತಿಲ್ಲ. ನಮಗೆ ಅಮೇರಿಕಾದಿಂದ ಹೋರಿ ತರಿಸಿ, ನಮ್ಮ ಹೋರಿಗಳು ಚೆನ್ನಾಗಿಲ್ಲ ಎಂದು ನಮ್ಮ ನಾಡಹಸುಗಳು ನಿಮಗೆ ಯಾವತ್ತಾದರೂ ಲೆಟರ್ ಬರೆದಿದ್ದವೇ? ಹೇಗಿವೆ ನಮ್ಮ ಹೋರಿಗಳು? ಜಾತ್ರೆಗೆ ಹೋಗಿ ನೋಡಿರುವಿರಾ? ಇದೆಲ್ಲ ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಎಲ್ಲ ವಿದೇಶೀಕರಣವಾಗುತ್ತಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನಮ್ಮ ಸ್ಥಳೀಯ ಗೂಳಿಗಳೆಲ್ಲ ಅಸೆಂಬ್ಲಿಗೆ, ಪಾರ್ಲಿಮೆಂಟಿಗೆ ಬಂದುಬಿಟ್ಟವು. ಗೂಳಿಗಳ ಶಾರ್ಟೇಜ್ ಬಂದಿದ್ದರಿಂದ ಅಲ್ಲಿಂದ ಹೋರಿಗಳನ್ನು ತರಿಸಿದೆವು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- Actually, black skin is strong. ಜಗತ್ತಿನಲ್ಲಿ ಕ್ರೀಡಾರಂಗದಲ್ಲಿ ನೀಗ್ರೋಗಳನನು ಯಾರೂ ಏಕೆ ಹಿಡಿದುಕೊಳ್ಳುತ್ತಿಲ್ಲವೆಂದರೆ ಅವರ skin strong ಆಗಿದೆ. ನಮ್ಮ ಊರ ಎಮ್ಮೆಗೆ ಯಾವತ್ತಾದರೂ ಹಾರ್ಟ್ ಅಟ್ಯಾಕ್ ಆಗಿದೆ ಎಂದು ಯಾರಾದರೂ ಒಬ್ಬರು ಹೇಳಿ ನೋಡೋಣ. ಅದಕ್ಕೇ ಬಸ್ಸು ಬಂದರೂ ಅವು ಸುಮ್ಮನೆ ಹಾಗೇ ನಿಂತಿರುತ್ತವೆ. ಏಕೆಂದರೆ ಅದರ ಹಾರ್ಟ್ ಅಷ್ಟು ದೊಡ್ಡದು. ಅದರದ್ದು black skin. Black skin is very strong. ಉಸೇನ್ ಬೋಲ್ಟ್, ಅವತ್ತು ಚಿನ್ನದ ವಿಗ್ರಹ ಮಾಡಿದ್ದಾರೆ. ಅವತ್ತು ಗುಲಾಮರಾಗಿ ಹರಾಜಾಗುತ್ತಿದ್ದಂಥ ನೀಗ್ರೋಗಳು ನಮ್ಮ ಅಣ್ಣ-ತಮ್ಮಂದಿರು. ಅಸ್ಪೃಶ್ಯತೆಯ ನೋವನ್ನು ಅನುಭವಿಸಿದಂಥವರು ಅವರು. ನನಗೆ resistance power ಜಾಸ್ತಿ. ಅಮೇರಿಕಾದಲ್ಲಿ ಬಿಸಿಲಿಲ್ಲದೇ, ಬಿಸಿಲು ಬೇಕು ಎಂದು ಬೀಚ್‌ಗೆ ಬಂದು ಮಲಗಿಕೊಂಡಿರುತ್ತಾರೆ. ಆದ್ದರಿಂದ ತಾವು ಆಲೋಚನೆ ಮಾಡಬೇಕು? ನಾನು ನಮ್ಮ ಮಾರುಕಟ್ಟೆ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾರುಕಟ್ಟೆ ಎಲ್ಲಿದೆ ಎಂದು ದಯವಿಟ್ಟು ಹೇಳುವಿರಾ? ದಯವಿಟ್ಟು ರಮೇಶ್ ಕುಮಾರ್‌ರವರಲ್ಲಿ ವಿನಂತಿ, ನಮ್ಮ ಮಾರುಕಟ್ಟೆ ಕಾಣೆಯಾಗಿದೆ, ಹುಡುಕಿಕೊಟ್ಟವರಿಗೆ 5,001/- ರೂಪಾಯಿಗಳ ಬಹುಮಾನವನ್ನ ಕೊಡಲಾಗುತ್ತದೆ. ದಯವಿಟ್ಟು ಹುಡುಕಿಕೊಡಬೇಕಾಗಿ ತಮ್ಮಲ್ಲಿ ಪ್ರಾರ್ಥನೆ. ನಮ್ಮ ಮಾರುಕಟ್ಟೆಗಳು ಎಲ್ಲಿವೆ, ಸರ್? 140 ದೊಡ್ಡ ಮಾರುಕಟ್ಟೆ, 200 ಚಿಲ್ಲರೆ ಚಿಕ್ಕ ಮಾರುಕಟ್ಟೆಗಳಿವೆ ಎಂದು ಹೇಳಿದ್ದಾರೆ. ಆ ಮಾರುಕಟ್ಟೆಗಳು ಎಲ್ಲಿವೆ? ಮಾರುಕಟ್ಟೆಗಳಲ್ಲಿ ದಲ್ಲಾಳಿಯೇ third umpire. ರೇಷ್ಮೆಯನ್ನು ಹತ್ತು

ಪೈಸೆಯಿಂದ ಹರಾಜು ಕೂಗುತ್ತಾರೆ. ಜಗತ್ತಿನಲ್ಲಿ ರೇಷ್ಮೆಯನ್ನು ಹತ್ತು ಪೈಸೆಗೆ ಹರಾಜು ಕೂಗುವಂಥ ದೇಶ ಯಾವುದಾದರೂ ಇದೆಯೇ? ರಾಮನಗರ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಇನ್ನೂ ಹತ್ತು ಪೈಸೆಗೆ ಹರಾಜು ಹಾಕುತ್ತಾರೆ. ನಮ್ಮ ಮಾರುಕಟ್ಟೆ ಎಲ್ಲಿದೆ? ಬೆಲೆ ನಿಗದಿ ಮಾಡುವವರು ಯಾರು? 10% ಕಮಿಷನ್‌ಅನ್ನು ನಾವು ತಡೆಯುವುದಕ್ಕೆ ಆಗಲಿಲ್ಲ. ಮಂಡ್ಯ ಒಂದರಲ್ಲೇ ಎಳೆನೀರು ಮಾರುಕಟ್ಟೆಯಲ್ಲಿ 35 ರಿಂದ 40 ಕೋಟಿ ರೂಪಾಯಿ ಕಮಿಷನ್ ಹೋಗುತ್ತದೆ. Biggest tender coconut market in Asia is Mandya. 10% ಕಮಿಷನ್ ಇದೆ. ಇಡೀ ಮಾರುಕಟ್ಟೆ ದಲ್ಲಾಳಿಗಳ ಕೈಯ್ಯಲಿದೆ. ನಾನು ವ್ಯಾಪಾರ ಮಾಡುವುದಕ್ಕೆ ಎ.ಪಿ.ಎಂ.ಸಿ.ಗೆ ಹೆಚ್ಚು ಭತ್ತ ತೆಗೆದುಕೊಂಡು ಹೋಗಲಿ, ರಾಗಿ ತೆಗೆದುಕೊಂಡು ಹೋಗಲಿ, ಒಂದು ಗೋಡೌನ್ ಮಾಡಿ ನನ್ನ ಬೆಳೆಯನ್ನು ತಾತ್ಕಾಲಿಕವಾಗಿ ರಕ್ಷಣೆ ಮಾಡುವುದಕ್ಕೆ ಆರ್ಥಿಕ ಭದ್ರತೆ ಮಾರುಕಟ್ಟೆಯಲ್ಲಿ ಎಲ್ಲಿದೆ? ಒಂದೊಂದು ಮಾರುಕಟ್ಟೆಯಲ್ಲಿ ರೈತರಿಗೆ 75 ಭಾಗ ದುಡ್ಡನ್ನು ಬಡ್ಡಿರಹಿತವಾಗಿ ಕೊಟ್ಟು, ಅವನ ಪದಾರ್ಥವನ್ನು ಇಟ್ಟುಕೊಳ್ಳುವಂಥ ಶಕ್ತಿ ಎಲ್ಲಿದೆ? ನಮ್ಮ Vegetable Board ಎಲ್ಲಿದೆ? ತರಕಾರಿಯನ್ನು ಮಾರಿ ರೈತನನ್ನು ರಕ್ಷಣೆ ಮಾಡುವಂಥ Vegetable Board ಎಲ್ಲಿದೆ? ಅ ತರಕಾರಿಯನ್ನು ಬೆಳೆಯುವವರು ಯಾರು ಗೊತ್ತೇ? ಅವರು ಖುಷ್ಕಿ ಪ್ರದೇಶದ ಕೃಷಿಕರು. ಆದ್ದರಿಂದ ತಾವು ಬಹಳ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕು. ನಾನು 25 ವರ್ಷ ಭೂಮಿಯಲ್ಲಿ ದುಡಿದು ಬಂದು ಇಲ್ಲಿ ಭಾಷಣ ಮಾಡುತ್ತಿದ್ದೇನೆ. ಕೃಷಿ ಯೂನಿವರ್ಸಿಟಿಯಲ್ಲಿ ಓದಿ ನಾನು ಭಾಷಣ ಮಾಡುತ್ತಿಲ್ಲ. ಮಾನ್ಯ ಕಾನೂನು ಮಂತ್ರಿಗಳಿಗೆ ನನ್ನ ಒಂದು ವಿನಂತಿ ಎಂದರೆ, ಇನ್ನು 3–4 ವರ್ಷಗಳಲ್ಲಿ ತಾವು ಒಂದು ಕೆಲಸ ಮಾಡುವಿರಾ? ಒಂದು ಐದು ಜನ ಆರ್ಥಿಕ ತಜ್ಞರನ್ನು ನನ್ನ ಹತ್ತಿರ ಕಳುಹಿಸಿಕೊಡಿ. Agricultural loss, Agricultural investment ಇವೆರಡನ್ನೂ ಸೇರಿಸಿ ಒಂದು ಪುಸ್ತಕ ಬರೆಸಿ, ಏನೂ ಆಗದಿದ್ದರೂ ಪರವಾಗಿಲ್ಲ, ನಮ್ಮನ್ನು ಗೌರವಿಸುವುದಕ್ಕೆ ಒಂದು

ಪುಸ್ತಕವನ್ನಾದರೂ ಬರೆಸಿ. ಕೃಷಿಯನ್ನು ಒಂದು ಉದ್ಯಮ ಎಂದು ಘೋಷಣೆ ಮಾಡಿ. ಈ ಉದ್ದಿಮೆಗೆ ಇಷ್ಟು ಇನ್‌ವೆಸ್ಟ್‌ಮೆಂಟ್ ಆಗುತ್ತದೆ, ಇಷ್ಟು ಲಾಸ್ ಆಗುತ್ತದೆ ಎಂದು ಬರೆಸಿ. ಹೇಗೆ ಬರೆಯುತ್ತೀರಿ ಎಂದು ಹೇಳಿ, ಯಾವ ಆಧಾರದ ಮೇಲೆ ಲಾಸ್ ನಿಗದಿ ಮಾಡುತ್ತೀರಿ? ಮೊನ್ನೆ ಒಂದೂಕಾಲು ಕೋಟಿ ತೆಂಗಿನ ಮರಗಳು ಲಾಸ್ ಆಗಿವೆ. ಒಂದು ವೇಳೆ ಪುಟ್ಟಣ್ಣಯ್ಯ ಆಕ್ಸಿಡೆಂಟ್ ಆಗಿ ಸತ್ತರೆ, ಅವನು ಇನ್ನೂ ಎಂಟು ವರ್ಷ ಬದುಕಿದ್ದರೆ ಆರು ಲಕ್ಷ ಸಂಪಾದನೆ ಮಾಡುತ್ತಿದ್ದ ಎಂದು ಹೇಳಿ ಎಂಟು ವರ್ಷಕ್ಕೆ ಆರು ಲಕ್ಷ ರೂಪಾಯಿ insurance declare ಆಗುತ್ತದೆ. 70 ವರ್ಷ ಬದುಕುವ ತೆಂಗಿನ ಮರ ಸತ್ತರೆ ಏನಾದರೂ ಡಿಕ್ಲೇರ್ ಮಾಡಬೇಡವೇ? ತೆಂಗಿನ ಮರಕ್ಕೆ 70 ವರ್ಷ ಎಂದು ಇಟ್ಟುಕೊಂಡರೆ ಅದನ್ನು ಆರರಿಂದ ಭಾಗಿಸಿ. 6 x 6 ಅಂದರೆ 36 ಲಕ್ಷ ಕೊಡಬೇಕು. ಒಂದು ತೆಂಗಿನಮರಕ್ಕೆ 36 ಲಕ್ಷವನ್ನು ಎಲ್ಲಿಂದ ತಂದು ಕೊಡುತ್ತೀರಿ? 1 ಕೋಟಿ ತೆಂಗಿನ ಮರಗಳು ಎಂದರೆ 36 ಕೋಟಿ ಆಗುತ್ತದೆ. ಈಗ 50 ಕೋಟಿ ನಷ್ಟವಾಗಿದೆ. ಯಾವ ಮಾನದಂಡದ ಮೇಲೆ ತಾವು ಬೆಲೆ ನಿಗದಿ ಮಾಡುತ್ತೀರಿ? ಅಂದರೆ ನಮಗೆ ಮಾನ ಇಲ್ಲ, ಬರೀ ದಂಡ ಹಾಕುವುದೇ ಕೆಲಸವೇ? ಕೇವಲ ಭಾಷಣಕ್ಕೋಸ್ಕರ ನಾವ್ಯಾರೂ ಭಾಷಣ ಮಾಡುತ್ತಿಲ್ಲ. ತಾವು ದಯವಿಟ್ಟು ಆಲೋಚನೆ ಮಾಡಬೇಕು. ಸರ್ಕಾರ ಇವುಗಳ ಬಗ್ಗೆ ಹೊಸದಾಗಿ ಏನಾದರೂ ಆಲೋಚನೆ ಮಾಡಬೇಕು? ರಮೇಶ್ ಕುಮಾರ್‌ರವರೇ ಈಗ ತಾವೂ ಇಲ್ಲಿದ್ದೀರಿ. ನೀವು ನಮ್ಮ ಜೊತೆ ಇದ್ದಾಗ ಒಂದು ಕೃಷಿ ನೀತಿ ಮಾಡಲು ಹೊರಟಿರಿ. ಅಷ್ಟರಲ್ಲಿ ನೀವೂ ಹೊರಟು ಹೋದಿರಿ, ನಾನೂ ಹೊರಟುಹೋದೆ. ಈಗ ಮತ್ತೆ ನಾವಿಬ್ಬರೂ ವಾಪಸ್ಸು ಬಂದಿದ್ದೇವೆ. ಏನಾದರೂ ಮಾಡೋಣವೇ? ಮತ್ತೇ ನಾವು ಸುಮ್ಮನೆ ಹೀಗೇ ಮಾತನಾಡಿ, ಮಾತನಾಡಿ ಹೋಗುವುದೇ ಅಥವಾ ನೀವು ಏನಾದರೂ ಮಾಡಿಸುತ್ತೀರೋ? ಚುನಾವಣೆ ಪ್ರಣಾಳಿಕೆ ಬರೆಯುತ್ತಿದ್ದೇನೆ, ಪುಟ್ಟಣ್ಣಯ್ಯ ಏನೇನಿವೆ ಎಂದು ಹೇಳಪ್ಪಾ ಎಂದು ನೀವು ನನಗೆ ಫೋನ್ ಮಾಡಿಯೂ

ಕೇಳಿದಿರಿ. ನಾನೂ ತಮಗೆ ಒಂದಷ್ಟು ಹೇಳಿದೆ. ಆಯವ್ಯಯದ ಬಗ್ಗೆ ಚರ್ಚಿಸಲು ಮೊನ್ನೆ ಮುಖ್ಯಮಂತ್ರಿಗಳು ಕರೆದಿದ್ದಾಗಲೂ ನಾನು ಹೇಳಿದ್ದೇನೆ. ಬಹಳ ಗಂಭೀರವಾಗಿ ಕೃಷಿಯನ್ನು ಆಲೋಚನೆ ಮಾಡಬೇಕು. ಬಹಳ ಅನಾನುಕೂಲವಾಗುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಈಗಲೂ ಮಾಡಬಹುದು. ಸರ್ಕಾರ ಸುಭಾಷ್ ಪಾಳೇಕಾರ್‌ರವರನ್ನು ಈಗಲೂ ಕರೆದು ಮಾತನಾಡಿ. ಏಕೆ ಮಾತನಾಡಬಾರದು? ಬರೀ ತೊಪ್ಪೆ, ಗಂಜಲ, ಹೆಸರುಕಾಳು, ಬೆಲ್ಲ, ನೀರು ಇಷ್ಟನ್ನು ಹಾಕಿ ಒಂದು ಎಕರೆಗೆ 200 ಟನ್ ಕಬ್ಬು ಬೆಳೆಯಬಹುದು ಎಂದು ಅವರು ಹೇಳುತ್ತಾರೆ. ನೈಸರ್ಗಿಕ ಕೃಷಿ ಆಂದೋಲನವನ್ನು ಮಾಡುವುದರ ಮೂಲಕ ಒಂದು ಡಿಪ್ಲೊಮಾ ಕೋರ್ಸ್ ಮಾಡಿ 5,600 ಪಂಚಾಯತಿಗಳಿಗೆ ಒಬ್ಬೊಬ್ಬರನ್ನು ಹಾಕಿ. ಸರ್ಕಾರದವರು ಆತನನ್ನು ಕರೆದು ಮಾತನಾಡಿ, ಸರ್ಕಾರದವರು ಯಾರ್ಯಾರನ್ನೋ ದತ್ತು ತೆಗೆದುಕೊಳ್ಳುತ್ತಾರೆ, ಅವರನ್ನು ಏಕೆ ದತ್ತು ತೆಗೆದುಕೊಳ್ಳಬಾರದು? ಅವರನ್ನು ಎಂ.ಎಲ್.ಸಿ. ಮಾಡಿಕೊಳ್ಳಿ, ಏನಾಗುತ್ತದೆ? ಮೂರು ವರ್ಷಗಳ ಕಾಲ ಕಾಡಿನಲ್ಲಿ ಕುಳಿತು ಅವನು ಎಲ್ಲ ಸಸ್ಯಗಳನ್ನು ಸ್ಟಡಿ ಮಾಡಿ ಬಂದಿದ್ದಾನೆ. ಜಗತ್ತಿನ ಯಾವುದಾದರೂ ದೊಡ್ಡ ಪ್ರಶಸ್ತಿ ಇದ್ದರೆ ಅದನ್ನು ಅವರಗೆ ಕೊಡಬಹುದು. ದೇಶೀಯ ತಳಿಗಳ ತೊಪ್ಪೆ ಮತ್ತು ಗಂಜಲದ ಮೂಲಕ ಭೂಮಿಯಲ್ಲಿ ದೊಡ್ಡ ಕ್ರಾಂತಿ ಮಾಡಬಹುದು. ನಮ್ಮ ಒಬ್ಬ ಹುಡುಗನೂ ತೊಪ್ಪೆ, ಗಂಜ್ಜಲದಲ್ಲಿ 65 ಕೆ.ಜಿ. ಬೆಳೆದಿದ್ದಾನೆ. ಇದಕ್ಕೆ ಒಂದು ಡಿಪ್ಲೋಮ ಕೋರ್ಸ್ ಮಾಡಿ. 15 ವರ್ಷಕ್ಕೆ ಏನಾದರೂ ಒಂದು ಗತಿ ಆಗಲಿ. ಆಮೇಲೆ, ವಿಷಮುಕ್ತ ಆಹಾರ ಎಂದು ಮಾತನಾಡುತ್ತೇವೆ. ಅದನ್ನೂ ಸೇರಿಸಿ ಹೊಂಗೆ ಸಸಿ, ಜತ್ರೋಪಾ ಮತ್ತು ಇನ್ನಿತರ ಸಸಿಗಳು ಎಲ್ಲವನ್ನೂ ಸೇರಿಸಿ ಒಂದು ಡಿಪ್ಲೊಮ ಕೋರ್ಸ್ ಮಾಡಿಸಿ. ಈಗ ಈ University Professor ಗಳು ಯಾರಾದರೂ ನಮ್ಮ ಹಳ್ಳಿಗೆ ಬಂದಿದ್ದಾರೆಯೇ? ಹಿಂದೆ ಹಳ್ಳಿಹಳ್ಳಿಗೆ ಇಂಥಿಂಥ ಬೀಜಗಳನ್ನು ಬಿತ್ತಿ ಎಂದು ಹೇಳಿಕೊಂಡು ಒಬ್ಬ ಕೃಷಿ ಸಹಾಯಕ ಬರುತ್ತಿದ್ದ. ಈಗ ಕೃಷಿ ಸಹಾಯಕನೂ ಇಲ್ಲ, ಯಾರೂ ಬರುತ್ತಿಲ್ಲ.

Seed Bank ಮಾಡಬೇಕೆಂದು ಹೇಳಿದ್ದೆವು. ಇದುವರೆಗೂ Seed Bank ಮಾಡಲಿಕ್ಕೆ ಏಕೆ ಆಗಲಿಲ್ಲ? ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಯವರೆ, ಈಗ ಹೊಸದಾಗಿ ಯಾವುದೋ ಒಂದು ಗ್ರಾಮವನ್ನು ಸಂಪೂರ್ಣ ಅಭಿವೃದ್ಧಿ ಮಾಡೋಣ ಎಂದು ಮಾತನಾಡಿದೆವು. ತಮ್ಮಲ್ಲಿ ನಾನು ವಿನಂತಿ ಮಾಡುವುದು ಇಷ್ಟೆ, ಗ್ರಾಮವಿಕಾಸ ನಮಗೆ ಬೇಡ, ಯಾವುದೂ ಬೇಡ, ಒಂದು ವರ್ಷದಲ್ಲಿ 5 ಪಂಚಾಯಿತಿಗಳನ್ನು ದತ್ತು ತೆಗೆದುಕೊಳ್ಳಿ, 5x3= 15 ಕೋಟಿ ರೂಪಾಯಿ, 15 ಕೋಟಿ x 180 ಕ್ಷೇತ್ರ = ಸುಮಾರು 2700 ಕೋಟಿ ರೂಪಾಯಿ ಆಗುತ್ತದೆ. 5 ಪಂಚಾಯಿತಿಯನ್ನು ಸಂಪೂರ್ಣ ಅಭಿವೃದ್ಧಿ ಪಂಚಾಯಿತಿ ಎಂದು ಘೋಷಣೆ ಮಾಡಿ 2700 ಕೋಟಿ ರೂ. ಆಗುತ್ತದೆ. ಸರ್. ಕನಿಷ್ಠ ನಮ್ಮ ಇಡೀ ಗ್ರಾಮವನ್ನು ಸುಧಾರಣೆ ಮಾಡಬಹುದು. ಒಂದು ಗ್ರಾಮವನ್ನು ತೆಗೆದುಕೊಳ್ಳುವುದು, ತಲೆವಾರು ದೊಡ್ಡ ಗ್ರಾಮವನ್ನು ತೆಗೆದುಕೊಳ್ಳುವುದು. ಒಂದು ಪಂಚಾಯಿತಿ ತೆಗೆದುಕೊಂಡರೆ ಚಿಕ್ಕ ಗ್ರಾಮವು ಸಿಗುತ್ತದೆ, ದೊಡ್ಡ ಗ್ರಾಮವೂ ಸಿಗುತ್ತದೆ. ಬೇಚರಕ್ ಗ್ರಾಮವೂ ಅದರೊಳಗೆ ಸಿಗುತ್ತದೆ. ಏಕೆ ಮಾಡಬಾರದು? ಏಕೆ ಈ ಆಲೋಚನೆ ಆಗಬಾರದು? 91 ಸಾವಿರ ಪಂಚಾಯಿತಿ member ಇರತಕ್ಕಂಥ ಜಾಗದಲ್ಲಿ ಅವರವರ ಪಂಚಾಯಿತಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಅಲೋಚನೆ ಮಾಡದೆ ನಾವು 224 ಜನ ಕುಳಿತುಕೊಂಡು ಕರ್ನಾಟಕದ 29600, ಹಳ್ಳಿ 20,000 ಬೇಚರಕ್ ಗ್ರಾಮಗಳಿಗೆ ನಾನು ಇಲ್ಲಿಂದ ಆಡಳಿತವನ್ನು ನಡೆಸುತ್ತೇನೆಂದು ಏಕೆ ಮಾಡಬೇಕು? ನಾನು ಹೇಳುತ್ತೇನೆ, ಅಂತರ್ಜಲದ ರಕ್ಷಣೆ ಪಂಚಾಯಿತಿ, ದೇಶೀಯ ತಳಿಗಳನ್ನು ರಕ್ಷಣೆ ಮಾಡಲು ಪಂಚಾಯಿತಿ, ಇವತ್ತು ಅಂತರ್ಜಲ ಎಂದು ಮಾತನಾಡುತ್ತೇವೆ, ಎಷ್ಟು shortage ಇದೆ? ನಮ್ಮ ಭೂಮಿಯೊಳಗೆ ಎಷ್ಟು ನೀರು ಇದೆ? ಸರ್ಕಾರದ ಅಂಕಿಅಂಶದ ಆಧಾರದ ಮೇಲೆ ಹೇಳುವುದಾದರೆ 498 ಟಿಎಂಸಿ ನೀರು ನಮ್ಮ ಅಂತರ್ಜಲದಲ್ಲಿ ಇರುವಂಥದ್ದು. ನಮಗೆ ಬೇಕಾಗಿರುವುದು 28 ಲಕ್ಷ pumpset, 60 ಲಕ್ಷ

ಎಕರೆ ನೀರಾವರಿ, 900 ಟಿಎಂಸಿ ನೀರು ನಮಗೆ ಬೇಕು. ಅಂತರ್ಜಲ ಸಂರಕ್ಷಣೆಯನ್ನು ನಾವು ಎಲ್ಲಿ ಮಾಡಿದ್ದೇವೆ? ಕಾವೇರಿ ತೀರದಲ್ಲಿ ಒಂದು ಲಕ್ಷ ಮರಗಳನ್ನು ಕಡಿದು ಸಾಯಿಸಿ ಕರೆಂಟ್ ಲೈನ್ ತೆಗೆದುಕೊಂಡು ಕೇರಳಕ್ಕೆ ದಾಟುತ್ತಾರೆ. High tension power line ತೆಗೆದುಕೊಂಡು ಹೋಗುವುದಕ್ಕೆ, ಒಂದು ಮರ 80 ಸಾವಿರ ಲೀಟರ್ ನೀರನ್ನು ಹಿಡಿದಿಡತಕ್ಕಂಥದ್ದು ಇದ್ದರೆ, 150 ವರ್ಷಗಳ 5 ಸಾವಿರ ಮರಗಳನ್ನು ಕಡಿದು ಹಾಕಿದ್ದಾರೆ. ಈಗ ಇನ್ನೂ ಒಂದು ಲಕ್ಷ ಮರ ಕಡಿಯುತ್ತಿದ್ದರು. ಜನರು ಹೋರಾಟ ಮಾಡುತ್ತಿದ್ದಾರೆ. ಕಾವೇರಿ ಕಣ್ಣು, ಕಾವೇರಿ ನೀರು ನಮಗೆ ಬೇಕು, ಆದರೆ, ಪರಿಸರ ಸಂಪೂರ್ಣ ಶ್ರೀಮಂತರ ರೆಸಾರ್ಟ್, music ಹಾಕಿಕೊಂಡು ಶೋಕಿ ಮಾಡುವುದಕ್ಕೆ ರೆಸಾರ್ಟ್‌ಗಳು, ಎಣ್ಣೆ ಹಾಕುವುದಕ್ಕೆ ರೆಸಾರ್ಟ್‌ಗಳು, ಇಡೀ ಪರಿಸರವನ್ನು ನಾಶಮಾಡಿ ಮೋಜು ಮಾಡುವುದಕ್ಕೆ ಒಂದು ಲಕ್ಷ ಮರಗಳನ್ನು ಕಡಿಯುತ್ತಿದ್ದಾರೆ, ಜನರು ಅಲ್ಲಿ ಚಳುವಳಿ ಮಾಡುತ್ತಿದ್ದಾರೆ. ಪ್ರಕೃತಿಯನ್ನು ರಕ್ಷಣೆ ಮಾಡದಿದ್ದರೆ, ಕಾಡಿನ ಪ್ರಾಣಿಗಳೆಲ್ಲ ಊರೊಳಗೆ ಬರುತ್ತವೆ ನಮ್ಮ ತಾಲ್ಲೂಕಿನಲ್ಲಿ 30 ಚಿರತೆಗಳು ಬಂದಿವೆ. ಏಕೆ ಹೇಗೆ ಮಾಡುತ್ತೀರಿ ಎಂದು ಕೇಳಿದರೆ, ಅರಣ್ಯದೊಳಗೆ ನಾವು line ತೆಗೆದುಕೊಂಡು ಹೋದರೆ ಪ್ರಾಣಿಗಳಿಗೆ ಅಪಾಯ ಆಗುತ್ತದೆ ಎಂದು ಅರಣ್ಯ ಇಲಾಖೆಯವರು ಹೇಳುತ್ತಾರೆ. ಅದರೆ, ಇಲ್ಲಿ ಲೈನ್ ತೆಗೆದುಕೊಂಡು ಹೋದರೆ ಮಾನವನಿಗೆ ಅಪಾಯವಾದರೂ ತಪ್ಪಿಲ್ಲ. ಅವನು ಹುಟ್ಟಿರುವುದೇ ತಪ್ಪು, ಆದ್ದರಿಂದ ಅವನಿಗೆ ಅಪಾಯವಾದರೆ ತಪ್ಪಿಲ್ಲ. ಮಾನವನಿಗೆ ಅಪಾಯವಾದರೂ ಪರವಾಗಿಲ್ಲವಂತೆ. ಒಂದು ಲಕ್ಷ ಮರಗಳನ್ನು ಕಡಿಯುತ್ತಿದ್ದಾರೆಂದರೆ 80 ಸಾವಿರ ಲೀಟರ್ ನೀರನ್ನು ಹಿಡಿದಿಟ್ಟುಕೊಳ್ಳತಕ್ಕಂಥ ಮರಗಳನ್ನು ನಾಶ ಮಾಡುತ್ತಿದ್ದೇವೆಂದರೆ ನಾವು ಯಾವ ನಾಡನ್ನು ಕಟ್ಟುತ್ತಿದ್ದೇವೆ? ನೀರಿಗೋಸ್ಕರ ಜಗಳ. 35 ಟಿಎಂಸಿ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದಕ್ಕಾಗದೆ ಹರಿದುಹೋಯಿತು. ಶ್ರೀಮತಿ ಜಯಲಲಿತಾರವರು ಎಪ್ಪಡಿ, ಎಂಗೆ, ತಣ್ಣಿ ವಾಯು ಕೊಡುಂಗ್, ಎಂಗಳಕ್

ತೆರಿಯುಂ, ಎಂದು ಅಲ್ಲಿ ಹೇಳುತ್ತಾರೆ. ಇಲ್ಲಿ ಮಾನ್ಯ ಜೀ. ಮಾದೇಗೌಡರು– ಪ್ರಾಣ ಹೋದರೂ ನೀರು ಬಿಡಲಿಕ್ಕಿಲ್ಲ ಎಂದು ಹೇಳುತ್ತಾರೆ. ಆದರೆ, 35 ಟಿಎಂಸಿ ನೀರು ಹೋಗುತ್ತಲೇ ಇದೆ. ಶ್ರೀ. ಮಾದೇಗೌಡರು ಮಾತ್ರ ಪ್ರಾಣ ಹೋಗಲಿ ಪುಟ್ಟಣ್ಣಯ್ಯ ನಾನು ಮಾತ್ರ ಒಂದು ತೊಟ್ಟು ಸಹ ನೀರು ಬಿಡಕ್ಕಿಲ್ಲ ಎಂದು ಹೇಳಿದರು. 35 ಟಿಎಂಸಿ ನೀರು, ಅವರನ್ನೂ ಕೇಳಲಿಲ್ಲ, ಇವರನ್ನೂ ಕೇಳಲಿಲ್ಲ ಬಂಗಾಳಕೊಲ್ಲಿಗೆ ಹೊರಟೇ ಹೋಯಿತು. ನಾವು 15 ಟಿಎಂಸಿ ನೀರಿಗೆ ಮಾತ್ರ ಜಗಳವಾಡಿರುವುದು. 15 ಟಿಎಂಸಿ ನೀರಿಗೆ ಜಗಳ ಕಾಯುತ್ತೇವೆ, 35 ಟಿಎಂಸಿ ನೀರನ್ನು ಹಿಡಿದಿಟ್ಟುಕೊಳ್ಳಲಿಕ್ಕಾಗಲಿಲ್ಲ. ಇಲ್ಲಿ ಮಾನ್ಯ ಸಿದ್ದರಾಮಯ್ಯನವರು ಅಲ್ಲಿ ಶ್ರೀಮತಿ ಜಯಲಲಿತಾ ಇಬ್ಬರೂ ಮಾತನಾಡಲಿಕ್ಕೆ ಆಗಲಿಕ್ಕಿಲ್ಲ. ನೋಡಿ ನೀವು ಚೆನ್ನಾಗಿ ತಮಿಳು ಮಾತನಾಡುತ್ತೀರಿ. ನಾನು ನೀವು ಇಬ್ಬರೂ ಹೋಗಿ ಜಯಲಲಿತಾರವರ ಹತ್ತಿರ ಮಾತನಾಡೋಣವೇ? ನಿಮ್ಮ ಅಧ್ಯಕ್ಷತೆಯಲ್ಲಿ ಹೋಗೋಣ ಸರ್. ಬೇ ಸಲಂ, ನೀನು ಮೇಲುಕೋಟೆ ತಾಯಿ ವಸಿ ಒಪ್ಪಿಕೋ ಎಂದು ಹೋಳೋಣ. ಅವರು ನಮ್ಮ ಕ್ಷೇತ್ರದವರೇ ಮೇಲುಕೋಟೆಯವರು. ಪಾಂಡವಪುರದಲ್ಲಿ ಹುಟ್ಟಿದ ತಾಯಿ ಅವರು. ಅವರೂ ಒಂದೊಂದು ಸಲ ಧರಣಿ ಕುಳಿತುಕೊಳ್ಳುತ್ತಾರೆ, ನಮ್ಮ ಮಾನ್ಯ ಮಾದೇಗೌಡರು ಸಹ ಧರಣಿ ಕುಳಿತುಕೊಳ್ಳುತ್ತಾರೆ. ಅವರೇನೋ ದಪ್ಪವಾಗಿದ್ದಾರೆ ಧರಣಿ ಕುಳಿತುಕೊಳ್ಳಲಿ, ಆದರೆ ಇವರು ಒಣಗಿಕೊಂಡು ನಿಂತುಕೊಂಡವರೆ ಧರಣಿ ಕುಳಿತುಕೊಳ್ಳುತ್ತಾರೆ. (ನಗು) ಎಲ್ಲಿ ಪ್ರಾಣ ಹೊರಟುಹೋಗುತ್ತದೋ ಎನ್ನುವ ಭಯ. ನಾನು ಹೇಳಿದೆ, ಸರ್, ನೀವು ಊಟ ಮಾಡಿಕೊಂಡು ಬೇಕದರೆ ಧರಣಿ ಕುಳಿತುಕೊಳ್ಳಿ, ಕರಗಲಿ, ಬೇಕಾದರೆ ಅವರು ಉಪವಾಸ ಸತ್ಯಾಗ್ರಹ ಮಾಡಿಕೊಳ್ಳಲಿ ಎಂದು ಹೇಳಿದೆ. ಅವರು diet ಗೋಸ್ಕರ ಉಪವಾಸ ಸತ್ಯಾಗ್ರಹ ಮಾಡುವುದು. ಇವರು ಒಣಗಿಕೊಂಡು ನಿಂತಿದ್ದಾರೆ, ಇವರು ಏಕೆ diet ಮಾಡುವುದಕ್ಕೆ ಹೋಗುತ್ತಾರೆ? ಮೇಕೆದಾಟುವಿನಲ್ಲಿ ಏನಾದರೂ ಒಂದು dam ಕಟ್ಟಿಕೊಂಡು ಬೆಂಗಳೂರಿಗೆ

ಬೇಕಾದಂಥ 18 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಬೇಕು. Dam ನಿಂದ 18 ಟಿಎಂಸಿ ನೀರು ಬರುವುದನ್ನು ಉಳಿಸಿಕೊಳ್ಳಬೇಕು. ನೀರಾವರಿ ಬಗ್ಗೆ ಬಹಳ ಜನ ಮಾತನಾಡಿದರು. ಮಾಜಿ ಮುಖ್ಯಮಂತ್ರಿಗಳು, ಹಿರಿಯರೆಲ್ಲ ಗಂಟೆಗಟ್ಟಲೆ ಮಾತನಾಡಿದರು. ಆದರೆ, ನಮ್ಮೆಲ್ಲರ ಒಟ್ಟು ಪ್ರಯತ್ನ ನೀರನ್ನು ಉಳಿಸಿಕೊಳ್ಳುವುದಕ್ಕೆ ಆಗಬೇಕು. ನೀರಿನ ಬಗ್ಗೆ ಬಹಳ ದೊಡ್ಡ ವ್ಯಾಖ್ಯಾನ ಮಾಡುತ್ತೇವೆ. ಅಂತರ್ಜಲ ಎಲ್ಲಿ ರಕ್ಷಣೆ ಮಾಡುತ್ತೇವೆ? ಹಾಗಾಗಿ ಇನ್ನು ಮೇಲೆ ನೀರನ್ನು ಕೂಡಿಹಾಕುವ ಸಂಘಗಳು ಹಳ್ಳಿಯಲ್ಲಿ ಸೃಷ್ಟಿಯಾಗಬೇಕು. ಪ್ರತಿ ಪಂಚಾಯಿತಿಯಲ್ಲಿ ನೀರು ಕೂಡಿಹಾಕುವ ಸಂಘಗಳು ಆಗಬೇಕು. ಮಾನ್ಯ ಉಪಾಧ್ಯಕ್ಷರೆ, ನಾವೆಲ್ಲ MLA ಗಳು ಇನ್ನು 4 ತಿಂಗಳು ಯಾವ ಹಳ್ಳಿಗಳಿಗೂ ಹೋಗುವುದಕ್ಕಾಗುವುದಿಲ್ಲ. Bore ಹಾಕಿಸಿದ್ದೇವೆ, ನೀರಿಲ್ಲ ಎಂದು ಹೇಳುತ್ತಾರೆ. 350–400 ಟಿಎಂಸಿ ನೀರು ಕಡಿಮೆ ಇದೆ. ಕುಡಿಯುವುದಕ್ಕೆ ಎಷ್ಟು ನೀರು ಬೇಕು? ಬೆಂಗಳೂರು ಲೆಕ್ಕದಲ್ಲಿ ಹೋದರೆ 100 ಟಿಎಂಸಿ ನೀರು ಬೇಕು. 100 ಟಿಎಂಸಿ ನೀರನ್ನು ಕುಡಿಯುವುದಕ್ಕೋಸ್ಕರ ನಾವು ಕೊಡಲಿಕ್ಕಾಗಲಿಲ್ಲ. ಅದೂ ಕೂಡ ಕುಡಿಯುವ ನೀರು ಕೊಡುವುದಕ್ಕೆ ಏನು ಕಾನೂನು ಮಾಡಿದ್ದಾರೆಂದರೆ, ಈಗ ಏನೋ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಯವರು ಸ್ವಲ್ಪ ಬದಲಾವಣೆ ಮಾಡಿದ್ದಾರೆ. ಮೊದಲು ಹಳ್ಳಿಯಲ್ಲಿ ವಾಸ ಮಾಡುವವರಿಗೆ ದಿನವೊಂದಕ್ಕೆ 55 ಲೀಟರ್ ನೀರು ನಗರದಲ್ಲಿರುವವರಿಗೆ 135 ಲೀಟರ್ ನೀರು ಎಂದು ಮಾಡಿದ್ದರು. ಏಕೆಂದರೆ ನಮ್ಮ body ಅಷ್ಟು weak, ಕೆಲವು area ಬಿಟ್ಟು ಬಾಕಿ area ಮಾತ್ರ ತೊಳೆಯಬೇಕು. (ನಗು)

ಶ್ರೀ ಬಿ.ಆರ್. ಪಾಟೀಲ್:– ಪುಟ್ಟಣ್ಣಯ್ಯನವರೆ, ಪಟ್ಟಣದವರಿಗೆ ಏಕೆ ನೀರು ಜಾಸ್ತಿ ಬೇಕು ಎಂದರೆ ಅವರು ಜಾಸ್ತಿ ಹೊಲಸು ಇರುತ್ತಾರೆ ಅಂಥವರಿಗೆ ಜಾಸ್ತಿ ನೀರು ಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಆ ರೀತಿ ಹೇಳುವುದು ಬೇಡ, ಹೊಲಸಿಲ್ಲ, ಅದು ತಪ್ಪು ನೀತಿ. Democracy ಯಲ್ಲಿ ಹಳ್ಳಿಯಲ್ಲಿ ಹೆಚ್ಚು ಬೆವರು ಬರುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಅದೆಲ್ಲ ಬೇಡ, ಬಹಳ ಸಂತೋಷ ಎಂದರೆ, ಪುಟ್ಟಣ್ಣಯ್ಯನವರು ಮೂಲಭೂತವಾದ ವಿಷಯಕ್ಕೆ ಬಂದಿದ್ದಾರೆ. ದೇಶದಲ್ಲಿ ಹಳ್ಳಿಗರಿಗೆ ದಿನವೊಂದಕ್ಕೆ 40 ಲೀಟರ್ ನೀರು ಎಂದು ಇತ್ತು. ಇತ್ತೀಚೆಗೆ ಅದು 55 ಲೀಟರ್ ಆಗಿದೆ. ಕರ್ನಾಟಕ ಮೊಟ್ಟಮೊದಲ ರಾಜ್ಯ, ಹಳ್ಳಿಗರಿಗೆ ಕನಿಷ್ಠ 85 ಲೀಟರ್ ನೀರು ಕೊಡಬೇಕೆಂದು ಮಾಡಿರುವುದು, it is first in the country.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಬೆಂಗಳೂರಿನ 1 ಕೋಟಿ ಜನರಿಗೆ ಒಂದೂವರೆ ಟಿಎಂಸಿ ನೀರು ಬೇಕು. 18 ಟಿಎಂಸಿ ಎಂದರೆ ಅದನ್ನೇ 6 ಬಾರಿ ಗುಣಾಕಾರ ಮಾಡಿದರೆ ಬರುತ್ತದೆ. 100 ಟಿಎಂಸಿ ನೀರು ಬೇಕು. 100 ಟಿಎಂಸಿ ನೀರು ಕೊಡುವುದಕ್ಕೆ ಆಗದಿದ್ದ ಮೇಲೆ ನಾವು ಹೇಗೆ ರಕ್ಷಣೆ ಮಾಡುವುದಕ್ಕೆ ಸಾಧ್ಯ? ಹೇಗೆ ಆರೋಗ್ಯ ರಕ್ಷಣೆ ಮಾಡುವುದಕ್ಕೆ ಸಾಧ್ಯ? ಕಾಲುಬಾಯಿ ರೋಗ ಬರುವುದಕ್ಕೆ ಕಾರಣ ಏನೆಂದು ಗೊತ್ತಿದೆಯೇ? ಅಶುದ್ಧವಾದ ನೀರು ಕಾರಣ. ಡಾಕ್ಟರುಗಳ ಹತ್ತಿರ ಹೋಗಿ ಕೇಳಿ. 80% ಹಳ್ಳಿಯವರ ಕಾಯಿಲೆಗಳು ನೀರಿನಿಂದಲೇ ಬಂದಿರುವುದು. ಮಾನ್ಯ ಮಂತ್ರಿಯವರು ಹೇಳಿದ ಹಾಗೆ 55 ಲೀಟರ್ ನೀರು ಎಂದು ಇದ್ದುದ್ದನ್ನು ಈಗ 85 ಲೀಟರ್ ಎಂದು ಮಾಡಿದ್ದಾರೆ. ನಗರದವರಿಗೆ 135 ಲೀಟರ್ ನೀರು ಎಂದು ಕಾನೂನು ಇದೆ. ಅದು ಏಕೆ? ನಮಗೂ ಒಂದೇ ಓಟು, ಅವರಿಗೂ ಒಂದೇ ಓಟು, ಈ ತರಹ ತಾರತಮ್ಯದ ನೀತಿ ಏಕೆ? ಇದು ಅರ್ಥವಾಗಲಿಲ್ಲ. ಯಾವ ಪ್ರಜಾಪ್ರಭುತ್ವವನ್ನು ಕಟ್ಟಿದ್ದೇವೆ? ಹಾಗಾದರೆ, ಹಳ್ಳಿಯವರು ನಾವು ಬೇರೆಯವರೇ?

ಶ್ರೀ ಎನ್.ಹೆಚ್. ಕೋನರೆಡ್ಡಿ:– ಅವರು ಮೂರು ಸಲ ಸ್ನಾನ ಮಾಡುತ್ತಾರೆ, ಇವರು ಒಂದು ಸಲ ಸ್ನಾನ ಮಾಡುತ್ತಾರೆ ಅಷ್ಟೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅವರನ್ನು ನಾವು ಆಡಿಕೊಳ್ಳುವುದು ಬೇಡ. ಅವರಿಗೂ ಕೊಡಲಿ ನಮಗೂ ಕೊಡಲಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):– ಮಾನ್ಯ ಉಪಾಧ್ಯಕ್ಷರೆ, ನಾವು ಹಳ್ಳಿಯಲ್ಲಿ ವಾಸ ಮಾಡತಕ್ಕಂಥದ್ದು ಪ್ರಾಣಿಗಳ ಜೊತೆ. ಆ ಪ್ರಾಣಿಗಳಿಗೂ ಕೂಡ ನಾವು ನೀರು ಕೊಡಬೇಕಾಗುತ್ತದೆ. ನಮಗೆ ಇನ್ನೂ ಜಾಸ್ತಿ ನೀರು ಬೇಕು. ಹಸುಗಳಿಗೆ ನೀರು ಕೊಡಬೇಕು, ಮೇಕೆಗಳಿಗೆ ನೀರು ಕೊಡಬೇಕು, ಅದರ ಜೊತೆ ನಾವು ಜೀವನ ಮಾಡುತ್ತೇವೆ. ಕುಡಿಯಲಿಕ್ಕೇ ನೀರು ಇಲ್ಲದ ಪರಿಸ್ಥಿತಿ ಇದೆ. ಇನ್ನು ಮೈತೊಳೆಯುವ ಮಾತು ದೂರ ಹೋಯಿತು. ಅದಕ್ಕೆ ಈ disparity. 85 ಲೀಟರ್ ಎಂದು ಹೇಳಿದಿರಿ, 85 ಲೀಟರ್ ಅಲ್ಲ, ನೀವು ಇನ್ನೂ 125 ಲೀಟರ್, 130 ಲೀಟರ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೂ ತೊಂದರೆ ಇಲ್ಲ.

ಉಪಾಧ್ಯಕ್ಷರು:– ಪುಟ್ಟಣ್ಣಯ್ಯನವರೆ, ನೀವು ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ನಾನು 10 ನಿಮಿಷ ಮಾತನಾಡುತ್ತೇನೆ. ಇನ್ನು, ಕಂದಾಯ ಇಲಾಖೆ ಬಗ್ಗೆ ಹೇಳುತ್ತೇನೆ. ಇಲ್ಲಿರುವ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಗೊತ್ತಿದೆಯೇನೋ ಗೊತ್ತಿಲ್ಲ. Correct ಆಗಿ ಕಂದಾಯ ಎಷ್ಟು ಬರುತ್ತದೆಂದು ಹೇಳಿಬಿಟ್ಟರೆ, ನಾನು ಅವರ ಕಾಲಕೆಳಗೆ ನುಸುಳಿಬಿಡುತ್ತೇನೆ. ಕಂದಾಯ, Water tax ಮತ್ತು ಭೂಕಂದಾಯ ಎಷ್ಟು ಬರುತ್ತದೆಂದು ಸರ್ಕಾರಕ್ಕೇ ಗೊತ್ತಿಲ್ಲ. ಏಕೆ ಭೂಮಿಯನ್ನು ABCD ಎಂದ classification ಮಾಡಲಿಲ್ಲ? ನೀರಾವರಿ ಪ್ರದೇಶವಾದರೆ 2 ಬೆಳೆ ಬೆಳೆಯುವುದು, ಆಮೇಲೆ ಒಂದು ಬೆಳೆ ಬೆಳೆಯುವ ಪ್ರದೇಶ, ಖುಷ್ಕಿ ಪ್ರದೇಶ ಎಂದರೆ ಮಳೆಯಾಧಾರಿತ, ಖುಷ್ಕಿ ತೋಟಗಾರಿಕೆ, ನೀರಾವರಿ ತೋಟಗಾರಿಕೆ, plantation. ಇಷ್ಟು ಎಂದು

fix ಮಾಡುವುದು. ಕಾನೂನು ಏನಿದೆ? Village Accountatnt, ಯಾವ ಬೆಳೆಯನ್ನು ಬೆಳೆಯುತ್ತಾರೆಂಬುದನ್ನು ನೀರಾವರಿ ಇಲಾಖೆಯವರು ಸೇರಿ ಇಬ್ಬರೂ ಜಮೀನಿನ ಹತ್ತಿರಕ್ಕೆ ಹೋಗಿ ಏನು ಮಾಡಿದ್ದಾನೆಂದು ಬರೆದುಕೊಂಡು ಬರುವುದು. ಯಾರು ಹೋಗಿರುವವರು? ಯಾರೂ ಹೋಗುವುದಿಲ್ಲ. ಕಬ್ಬು ಇರುವುದನ್ನು ಭತ್ತ ಎಂದು ಬರೆಯುತ್ತಾನೆ. ಅವನಿಗೆ 50 ರೂ. ಕೊಟ್ಟರೆ ಮುಗಿಯಿತು. ಸರ್ಕಾರದ ಬೊಕ್ಕಸಕ್ಕೆ ನ್ಯಾಯಯುತವಾಗಿ ಬರಬೇಕಾದರೆ ತೆರಿಗೆ ನಾಶವಾಗುತ್ತದೆಂದರೆ, land classification ಮಾಡುವುದಕ್ಕೇನು ತೊಂದರೆ? ಭೂಮಿಯ Classification ಮಾಡಿಲ್ಲ. ಭೂಮಿಯ re-survey ಆಗಿಲ್ಲ. 30 ವರ್ಷಗಳಿಗೊಂದು ಸಾರಿ ಭೂಮಿಯನ್ನು re-servey ಮಾಡಿ, ರೈತರ ಮಧ್ಯೆ ಇರುವ ವ್ಯಾಜ್ಯವನ್ನು ಸುಧಾರಣೆ ಮಾಡುತ್ತೇವೆಂದು ಕಂದಾಯ ಇಲಾಖೆಯಲ್ಲಿ ಬರೆದುಕೊಂಡಿದ್ದೇವೆ. ಕಂದಾಯ ಇಲಾಖೆಯಲ್ಲಿ ಎಲ್ಲಿದೆ? ಯಾರು? Village Accountant, Revenue Inspector ಗಳು ಪವತಿ ಖಾತೆ ಮಾಡಿದ್ದಾರೆ. ನಾನು ಬದುಕಿದ್ದೇನೆ, ನನ್ನ ಜಮೀನನ್ನು ನಿಂಗಯ್ಯನವರಿಗೆ ಬರೆದುಬಿಡುವುದು. Assistant Commissioner ಹತ್ತಿರ ಹೋಗಿ, ಸ್ವಾಮಿ, ಇವನು ಸುಳ್ಳು ಮಾಡಿದ್ದಾನೆ, ನಾನಿನ್ನೂ ಬದುಕಿದ್ದೇನೆ, ಇವನು ಪವತಿ ಖಾತೆ ಮಾಡಿದ್ದಾನೆಂದರೆ, Assistant Commissioner, ನೀನು ಒಂದು ಸಾರಿ ಸತ್ತಮೇಲೆ close, ನೀನು ಬದುಕಿದ್ದರೂ ನಾವು ನಿನ್ನನ್ನು account ಗೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ, ನೀನು ಬದುಕಿದ್ದೇನೆಂದು prove ಮಾಡಬೇಕಾದರೆ ನೀನು ಯಾವ ಲೋಕಕ್ಕೆ ಹೋಗುತ್ತೀಯೋ ಹೋಗು, ಕಂದಾಯ ಇಲಾಖೆಯಲ್ಲಿ, ನೀನು ಸತ್ತಿದ್ದೀಯ ಎಂದು ಬರೆದುಬಿಟ್ಟಿದ್ದಾನೆ. ಬಂದಿರುವವನು ನೀನು ಯಾರೋ duplicate ನನ್‌ಮಗ, get out ಎನ್ನುತ್ತಾರೆ. ಬದುಕಿದ್ದ ನಮ್ಮನ್ನು ಸಾಯಿಸಿ, ಭೂಮಿಯನ್ನೇ ಬೇರೆಯವರ ಹೆಸರಿಗೆ ಬರೆಸುವುದು. ಆಮೇಲೆ, ಅವರ ಮೇಲೆ ಯಾವ ಶಿಸ್ತಿನ ಕ್ರಮವೂ ಇಲ್ಲ. ತಹಶೀಲ್ದಾರ್‌ಗೆ ACಗೆ complaint

ಕೊಟ್ಟರೆ, ಈ ತರಹ ಬರೆದವನು 20 ವರ್ಷ ಆಯಿತು, ಅವನು ಎಲ್ಲಿ ಹೋಗಿದ್ದಾನೆಂದು ನಮಗೆ ಗೊತ್ತಿಲ್ಲ, ಆದ್ದರಿಂದ ಯಾವುದೇ ಶಿಸ್ತಿನ ಕ್ರಮ ಇಲ್ಲ, ನೀನು ಮುಂದೆ DC Court ಗೆ ಹೋಗು ಎನ್ನುತ್ತಾನೆ. DC ಹತ್ತಿರಕ್ಕೆ ಹೋಗಿ, AC, ಇವನು ಸತ್ತಿರುವುದು guarantee, ಯಾವನೋ duplicate ಬಂದಿದ್ದಾನೆಂದು ಬರೆದಿದ್ದಾರೆ. DC ಗೆ ಹೇಳಿದರೆ, AC report ಆಧಾರದ ಮೇಲೆ ನೀನೂ ಸತ್ತಿದ್ದೀಯ ಎನ್ನುತ್ತಾರೆ. ನಾನು 2ನೇ ಸಾರಿ, 3ನೇ ಸಾರಿ ಸತ್ತೆ. ಅರೆ? ಕಾನೂನೇನಾದರೂ ಬಿಗಿ ಇದೆಯೇ? ಅದು ತಾಲ್ಲೂಕು ಆಫೀಸಿನ ಕುಲವೇ? ಒಂದು ಮಾಹಿತಿ ಕೊಡಿಸಿ ನೋಡೋಣ. ಇಂಥಿಂಥ ಅರ್ಜಿಯನ್ನು ಕೊಟ್ಟ ತಕ್ಷಣ 3, 4, 5, 6 ದಿವಸಗಳೊಳಗೆ ಈ ಅರ್ಜಿಯನ್ನು ವಿಲೇವಾರಿ ಮಾಡಲಾಗುತ್ತದೆ, ಇಲ್ಲದೇ ಇದ್ದರೆ, ಅವನನ್ನು suspend ಮಾಡಿ ಕ್ರಮ ತೆಗೆದುಕೊಳ್ಳುವ ಹಾಗೆ ಮಾಡಿಸಿ, ಅದು ಸುಮ್ಮನೆ ಇದೆ. ಅದು ಮಾಡುತ್ತಿಲ್ಲ. ಸಕಾಲ ಇಲ್ಲ, ಏನೂ ಇಲ್ಲ. ಯಾವ ಕಾಲವೂ ಇಲ್ಲ. ಯಾವ ಕಾಲ ಅದು? ಸಕಾಲ ಎಂದು ಜಗದೀಶ್ ಶೆಟ್ಟರ್‌ವರು introduce ಮಾಡಿದರು. ಆದರೆ, ಅದು ಕ್ರಮಬದ್ಧವಾಗಿ ಅನುಷ್ಠಾನಕ್ಕೆ ಬರುತ್ತಿಲ್ಲ. ಆದ್ದರಿಂದ, ಕೊನೆಗೆ ನೀರಾವರಿ ಬಗ್ಗೆ ಮಾತನಾಡಿ, ಕ್ರೀಡೆಯ ಬಗ್ಗೆ ಮಾತನಾಡಿ ನನ್ನ ಮಾತು ಮುಗಿಸುತ್ತೇನೆ. 2–2 ನಿಮಿಷ ಮಾತನಾಡುತ್ತೇನೆ. ಇಲ್ಲಿ ಸನ್ಮಾನ್ಯ ಕ್ರೀಡಾ ಮಂತ್ರಿಯವರು ಇದ್ದಾರೆಯೇ? ಯುವಜನ ಮತ್ತು ಕ್ರೀಡೆ ಮಂತ್ರಿ ಮಾನ್ಯ ಅಭಯ ಚಂದ್ರಜೈನ್‌ರವರು. 142 ಕೋಟಿ ರೂ.ಗಳನ್ನು ಈ ಇಲಾಖೆಗೆ ಕೊಟ್ಟಿದ್ದಾರೆ. ಹಳೆಯ ಗರಡಿ ಮನೆಗಳನ್ನು ರಿಪೇರಿ ಮಾಡಲು 25 ಲಕ್ಷ ರೂ., ಹೊಸ ಗರಡಿ ಮನೆಯನ್ನು ಕಟ್ಟಲು 25 ಲಕ್ಷ ರೂ. ಎಂದು ಇಟ್ಟಿದ್ದಾರೆ. Correct ಆಗಿ ಲಂಗೋಟಿ ಹೊಲಿಸಿದರೆ ಆ ಹಣ ತೀರಿ ಹೋಯಿತು. ಗರಡಿ ಆಮೇಲೆ ಕಟ್ಟಿಸಿ. ಗರಡಿ ಕಲೆ, ಕ್ರೀಡಾರಂಗ ಏನಾದರೂ ಗೊತ್ತಿದೆಯೇ? ಸನ್ಮಾನ್ಯ ಕಾನೂನು ಮಂತ್ರಿಗಳೆ, ಒಂದು ಕೆಲಸ ಮಾಡಿದರೆ ನಿಮಗೆ ಕೈಮುಗಿಯುತ್ತೇನೆ. ಎಲ್ಲಾ ಕಾಲೇಜುಗಳಲ್ಲಿ 7ನೇ ತರಗತಿಯಿಂದ 12ನೇ ತರಗತಿವರೆಗೆ ನೀವು ಹಣ

ಕೊಡಬೇಡಿ. ಯಾರ್ಯಾರು ಒಳ್ಳೆಯ ಆಟಗಾರರು ಇದ್ದಾರೆ. ಯಾರ್ಯಾರು ತಮ್ಮ ದೇಹವನ್ನು ಚೆನ್ನಾಗಿ ಇಟ್ಟುಕೊಂಡು ವ್ಯಾಯಾಮ ಮಾಡುತ್ತಾರೆ, ಅವರಿಗೆ 15 number free marks ಕೊಡುತ್ತೇವೆಂದು ಘೋಷಣೆ ಮಾಡಿ. ನೋಡಿ, ಕರ್ನಾಟಕದ ಆರೋಗ್ಯ ಹೇಗಿರುತ್ತದೆ. ದೇಹ ಹೇಗಿರುತ್ತದೆಂದು ನೋಡಿ. ಇದನ್ನು ಮಾಡಿ. ಮಾಡುತ್ತೀರಾ? ನಿಮಗೆ ಹಣ ಏಕೆ ಖರ್ಚಾಗುತ್ತದೆ? ಹಣ ಏಕೆ ಖರ್ಚಾಗುವುದಿಲ್ಲ? ಕ್ರೀಡಾರಂಗ ಜಗತ್ತಿನಲ್ಲಿ ದೊಡ್ಡ ರಂಗ. ಜಗತ್ತಿನಲ್ಲಿ ಏನು ಹೇಳುತ್ತದೆಂದರೆ, ಜಗತ್ತಿನಲ್ಲಿ ಯಾವ್ಯಾವ ದೇಶಗಳು ಚಿನ್ನದ ಪದಕವನ್ನು ತೆಗೆದುಕೊಳ್ಳುತ್ತವೆ, ಆ ದೇಶ ಮಾನವ ಶಕ್ತಿಗೆ ಬಹಳ ದೊಡ್ಡ ಗೌರವವನ್ನು ಕೊಟ್ಟಂಥ ದೇಶ ಎಂದು ಕ್ರೀಡಾ ರಂಗದ ಪದಕಗಳ ಮೇಲೆ ಹೇಳುತ್ತಾರೆ. ಚೈನಾ 1600 ಜನರನ್ನು ದತ್ತಕ ತೆಗೆದುಕೊಂಡು Beijing Olympics ನಲ್ಲಿ No.1 World Champion ಆಗಿಹೋದರು. ಅದಕ್ಕೆ ಖರ್ಚು ಎಷ್ಟು ಗೊತ್ತೆ, 1 ಲಕ್ಷದ 60 ಸಾವಿರ ಕೋ.ರೂ. ಇಲ್ಲಿ ನೀವು ಯುವ ಜನರನ್ನು separate ಮಾಡಿ ಕ್ರೀಡೆಗೆ ಎಲ್ಲಿ ಕೊಡುತ್ತೀರಿ? ಯಾವ ಯುವಕ ಸಂಘಗಳಿಗೆ ಕೊಟ್ಟಿದ್ದೀರಿ? ಯಾವ ಸಾಂಸ್ಕೃತಿಕ ಆಂದೋಲನಗಳನ್ನು ಮಾಡಿದ್ದೀರಿ? ಯಾರಿಗೆ ಸಹಾಯ ಮಾಡುತ್ತೀರಿ? ಎಲ್ಲಿದೆ ನಮ್ಮ ಆಟ? ಅದೊಂದು ಕ್ರಿಕೆಟ್ ಇದೆ. ಮಾತೆತ್ತಿದರೆ ಕ್ರಿಕೆಟ್. ಮೂರು ತುಂಡು ದೊಣ್ಣೆ, ಇಲ್ಲಿ ಮೂರು ತುಂಡು ದೊಣ್ಣೆ. ಇವನು ಹೀಗೆ ಅನ್ನುತ್ತಾನೆ, ಅವನು ಹಾಗೆ ಅನ್ನುತ್ತಾನೆ. ಅವರು ಆಹಾ Pepsi, Mirinda ಎಂದು ಕುಡಿಯುತ್ತಾನೆ. ಬಾಲ್ ಎಲ್ಲಿಗೆ ಹೋಯಿತೋ? ಅಲ್ಲಿ ಇಬ್ಬರು Umpire ನಿಂತಿರುತ್ತಾರೆ. ಒಬ್ಬ ಹೀಗೆ ಅನ್ನುತ್ತಾನೆ, ಒಬ್ಬ latrine ಗೆ ಹೋಗಬೇಕೆನ್ನುತ್ತಾನೆ, ಒಬ್ಬ ಒಂದಕ್ಕೆ ಹೋಗಬೇಕೆನ್ನುತ್ತಾನೆ. ಈ ಆಟ ಬಿಟ್ಟರೆ ಇನ್ನು ಯಾವುದೂ ಇಲ್ಲವೆ? ಗರಡಿಯಲ್ಲಿ ನಾವು 10 ವರ್ಷ World Champion. ನಮ್ಮ ಪೈಲ್ವಾನ್ ಗಾಮಾ ಇದ್ದ, ಜಗತ್ತಿನಲ್ಲಿ ಅವನನ್ನು ಹಿಡಿಯುವವರು ಯಾರೂ ಇರಲಿಲ್ಲವೇ? England ನಲ್ಲೊಬ್ಬ ಪೈಲ್ವಾನ್ ಸುಮ್ಮನೆ ಹೀಗೆ ಅಂದ ಅಷ್ಟೇ, ಎರಡು ಬೆರಳು

ಹಿಡಿದು ಧೋಬಿಷಾಟ್ ಹೊಡೆದು ಗೆದ್ದುಬಿಟ್ಟ. ಅವರ ಇಬ್ಬರು ಶಿಷ್ಯರು, ಅಬ್ದುಲ್ ಹಮೀದ್, ಇಮಾಮ್ ಬಕಷ್ ಎಂದು ಇದ್ದರು. ಜಗತ್ತಿನಲ್ಲಿ ಅವರ್ಯಾರನ್ನೂ ಹಿಡಿಯುವುದಕ್ಕೇ ಆಗುತ್ತಿರಲಿಲ್ಲ. ಕಾರ್ಲ್ ಲೂಯಿಸ್ ಗೆದ್ದಿರುವುದು ಯಾವುದರಲ್ಲಿ ಗೊತ್ತೆ? ಅವನು highest ಹುರುಳಿ ಕಾಳು ತಿಂದು ಗೆದ್ದಿರುವುದು. ನಮ್ಮ ದೇಶದ ಹುರುಳಿ ಕಾಳು ತಿಂದು ಅವರು World Champion ಆಗಿದ್ದು. ನಿಮಗೊಂದು ಕಿವಿ ಮಾತು ಹೇಳುತ್ತೇನೆ. ಇಲ್ಲಿರುವವರೆಲ್ಲ ಚೆನ್ನಾಗಿರಬೇಕೆಂಬುದು ನನ್ನ ಆಸೆ. ಸಾಯಂಕಾಲದ ಹೊತ್ತು 200 ಹುರುಳಿ ಕಾಳನ್ನು ನೀರಿನೊಳಗೆ ಹಾಕಿ ಬೆಳಗ್ಗೆವರೆಗೆ ಬಿಡಿ. ತೊಳೆದು ಹಾಕಿಬಿಡಿ. ಬೆಳಗ್ಗೆ ಹುರುಳಿ ಕಾಳನ್ನು ಬಿಟ್ಟು, ಕೇವಲ ನೀರು ಕುಡಿಯಿರಿ. ನಿಮ್ಮ ಕಿಡ್ನಿಗೆ ಯಾವ ಅಪಾಯವೂ ಬರುವುದಿಲ್ಲ. ನಿಮ್ಮ ಕಿಡ್ನಿ ಉಳಿಯಬೇಕೆ ಹುರುಳಿ ಕಾಳು ನೀರನ್ನು ಕುಡಿಯಿರಿ. ನಾನು ಇದನ್ನು ಹಾಸ್ಯಕ್ಕೆ ಹೇಳುತ್ತಿಲ್ಲ. ಬಹಳ ಕಡೆ kidney problem start ಆಗಿದೆ. Kidney ಎಂದರೇನು? ಅವು ನಿಮ್ಮ body shock observers. Shock observers ಗೆ oil ಹಾಕಿದಹಾಗೆ, ಅದು ಇನ್ನೇನೂ ಇಲ್ಲ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಕುಡಿಯುವವರಿಗೂ, ಲಿವರ್‌ಗೂ ನಮಗೂ ಸಂಬಂಧವಿಲ್ಲ. ಅವರದೇ ಒಂದು ತರಹ. ಅವರ ಲೈನ್ ಸುದ್ದಿ ನಾವು ಮಾತನಾಡುವ ಹಾಗಿಲ್ಲ. ನಮ್ಮ ಊರಿನಲ್ಲೊಬ್ಬ ಕುಡಿದು ಬಂದು Bus Stand ನಲ್ಲಿ Auto ಹತ್ತಿ, ಕ್ಯಾತನಹಳ್ಳಿಗೆ ಕರೆದುಕೊಂಡು ಹೋಗು ಎಂದ. ಆದರೆ, ಅದೇ ಕ್ಯಾತನಹಳ್ಳಿ Bus Stand ಆಗಿತ್ತು. Auto start ಮಾಡಿ, ರೈಜ್ ಮಾಡಿ ಮತ್ತೆ ಆಫ್ ಮಾಡಿ, ಕ್ಯಾತನಹಳ್ಳಿ ಬಂತು ಇಳಿ ಎಂದ. 200 ರೂ. ಕೊಟ್ಟು, ನನ್ನ ಜೀವನದಲ್ಲಿ ಇನ್ನೊಂದು ಸಾರಿ ಆಟೋ ಹತ್ತುವುದಿಲ್ಲ, ಇಷ್ಟು fast ಆಗಿ ಕರೆದುಕೊಂಡು ಬಂದ ಎಂದು ಅವನು ಹೋದ. ಆದ್ದರಿಂದ ಅವರ

ಸುದ್ದಿಯನ್ನು ನಾವು ಮಾತನಾಡುವುದ ಬೇಡ. ಇನ್ನೊಂದು ಸರಿ, ಎಲ್ಲರೂ drinks ಮಾಡುತ್ತಾ ಕುಳಿತಿದ್ದರಂತೆ. ಒಬ್ಬ ಬಂದು, ಏಕೆ ಎಲ್ಲ ಕುಳಿತಿದ್ದೀರಿ? ಏಕೆ ಇಷ್ಟು ಜನ ನೆಮ್ಮದಿಯಾಗಿ ಕುಳಿತಿದ್ದೀರಿ? ಊಟ ಮಾಡಿ ತೆಗೆದುಕೊಳ್ಳಿ, ನಾನು ಹೇಗೆ ಮಾಡುತ್ತೇನೆ, ಹಾಗೆ ಮಾಡಿ ಎಂದು ಹೇಳಿದ ಎಲ್ಲರೂ 2–2 ಬಿಯರ್, 3–3 ವಿಸ್ಕಿ ಕುಡಿದರಂತೆ. ನಾನು ಮಾಡಿದ ಹಾಗೆ ಮಾಡಿ ಎಂದು ಹೇಳಿದ, ಎಲ್ಲರೂ ಅದು ಫ್ರೀ ಎಂದು ಕುಡಿದುಬಿಟ್ಟರು. ಇವರು ಬಿಲ್ ಕೊಟ್ಟು ಹೋಗುತ್ತಿದ್ದನಂತೆ. ಏಕೆ ಸರ್ ಎಂದರೆ, ನಾನು ಮಾಡಿದಹಾಗೆ ಮಾಡಿ, ಹೋಗಿ ಎಂದನಂತೆ. ಇವರೆಲ್ಲರೂ ಅದು ಫ್ರೀ ಎಂದು ಕುಡಿದುಬಿಟ್ಟಿದ್ದಾರೆ. Drinks ನವರ ಸುದ್ದಿ ಮಾತನಾಡುವುದು ಬೇಡ. ನಿಮಗೇ ಚೆನ್ನಾಗಿ ಗೊತ್ತಿದೆ. ಯಾರ್‍ಯಾರು ಎಣ್ಣೆ ಹಾಕುತ್ತೀರಿ, ಅವರಿಗೇ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಅದನ್ನು ಮಾತನಾಡುವುದಕ್ಕಾಗುವುದಿಲ್ಲ. ಎಣ್ಣೆ ವಿಷಯವನ್ನು ನಾನು ಮಾತನಾಡುವುದು ಬೇಡ. ನಾನು ಸತ್ಯ ಹೇಳುತ್ತೇನೆ. ನಾನು ಅಮೆರಿಕಾಗೆ ಹೋಗಿದ್ದಾಗ 7–8 ಕಡೆ ಒಳ್ಳೆಯ drinks ಕುಡಿದೆ. ಏನು ಕುಡಿದರೂ ತಲೆ ತಿರುಗುತ್ತದೆ, ಇನ್ನೇನೂ ಆಗುವುದಿಲ್ಲ. ಇನ್ನೇನಾಗುತ್ತದೆ? ಏನು ಕುಡಿದರೂ ನಾಲಿಗೆ ತೊದಲಿಸುತ್ತದೆ. ಸ್ವಲ್ಪ ಕಾಲು ಅಡ್ಡಾದಿಡ್ಡಿ ಆಡಿಸುತ್ತದೆ. ಅದು ಬಿಟ್ಟರೆ ಇನ್ನೇನಾಗುತ್ತದೆ? ನಿಮ್ಮ ಊರಿನಲ್ಲಿರುವ ಸಾರಾಯಿ ಕುಡಿದರೂ ಅಷ್ಟೇ ತಲೆ ತಿರುಗುತ್ತದೆ, ಅಮೆರಿಕಾದಲ್ಲಿ 80 ಸಾವಿರ ರೂ.ಗಳ drinks ಕುಡಿದರೂ ಅಷ್ಟೇ ತಲೆ ತಿರುಗುತ್ತದೆ. 5 star hotel ನಲ್ಲಿ ಊಟ ಮಾಡಿದರೂ ಬೆಳಗ್ಗೆ ಕಕ್ಕಸ್ಸಿಗೆ ಹೋಗಬೇಕು, ನಮ್ಮ ಹಳ್ಳಿಯಲ್ಲಿ ಮುದ್ದೆ ಊಟ ಮಾಡಿದರೂ ಬೆಳಗ್ಗೆ ಎದ್ದು ಕಕ್ಕಸ್ಸಿಗೆ ಹೋಗಬೇಕು. ಆದ್ದರಿಂದ ಜಗತ್ತಿನಲ್ಲಿ ಯಾವುದು, drinks, ಇದೆ ಸುಮ್ಮನೆ ನಮ್ಮ ಕಲ್ಪನೆ. ಆಸೆಗಳು, ಎಣ್ಣೆ ಹಾಕುವುದು, ಆಸ್ಪತ್ರೆಗೆ ಸೇರಿಕೊಳ್ಳುವುದು, ಔಷಧಿ ತೆಗೆದುಕೊಳ್ಳುವುದು. ಹೀಗೇ ಆಗಿದೆ. ಎಣ್ಣೆ ಬಿಡಿಸುವುದಕ್ಕೆ ಒಬ್ಬ. ಎಣ್ಣೆ ಬಿಡಿಸುವುದಕ್ಕೆ ದೇವರ ಹತ್ತಿರ ಹೋದರು. ಮೊನ್ನೆ ದಿವಸ ನಮ್ಮ ಊರಿನಲ್ಲಿ ದೇವರ ಹತ್ತಿರಕ್ಕೆ ಹೋಗಿ, ಎಣ್ಣೆಯನ್ನು ಬಿಡಿಸಲು

ನಮ್ಮ ಯಜಮಾನರಿಗೆ ಸಹಕರಿಸಬೇಕೆಂದರು. ಬಾಲಕಿ ಹೆದರಬೇಡ, ನಾನು ಕೊಟ್ಟಂಥ ಒಂದು ಮಂತ್ರವನ್ನು ನಡುವಿಗೆ ಕಟ್ಟು ಎಣ್ಣೆ ಅವನ ಹತ್ತಿರಕ್ಕೆ ಬರುವುದಿಲ್ಲ ಎಂದರು. ಶನಿದೇವರೇ ಎಣ್ಣೆ ಕೊಟ್ಟು ಅವರೇ ಮಲಗಿದ್ದಾರೆ. ಇವನು ಅಲ್ಲಿ ಯಂತ್ರ ಕಟ್ಟಿಸಿಕೊಂಡಿದ್ದಾನೆ. ಮೊನ್ನೆ ದಿವಸ ನಮ್ಮ . . ಕೊಪ್ಪಲು ಎನ್ನುವ ಊರಿನಲ್ಲಿ ಶನಿ ದೇವರ ಹತ್ತಿರ ಹೋದಾನ ಏನು ತಾಯಿ ಎಂದರು. ನಮ್ಮ ಮಗಳು ಹೋಗಿ 8 ದಿವಸಗಳಾಗಿದೆ, ಮಹಾಸ್ವಾಮಿ ಏನಾದರೂ ಮಾಡಿ ಹುಡುಕಿಕೊಡಿ ಎಂದರು. ಹೆದರಬೇಡ ಬಾಲಕಿ ಎಂದರಂತೆ. ಅವಳು ಬಾಲಕಿಯಲ್ಲ, 85 ವರ್ಷದವಳು. ಅವಳು ಹೀಗಾಗಿದೆ ಎಂದ ತಕ್ಷಣ, ಆ ಶನಿ ದೇವ ಸ್ವಾಮಿ ನಿಂಬೆ ಹಣ್ಣನ್ನು ಕತ್ತರಿಸಿ ಹಾಕಿ ನೀನು ಈ ದಿಕ್ಕಿಗೆ ಹೋಗು ನಿನ್ನ ಮೊಮ್ಮಗಳು ಗ್ಯಾರಂಟಿ ಸಿಗುತ್ತಾಳೆ ಎಂದರಂತೆ. ಆ ಶನಿ ದೇವ ಸ್ವಾಮಿ ಪೊಲೀಸ್ ಠಾಣೆಯ ಹತ್ತಿರ ಕುಳಿತ್ತಿದ್ದರಂತೆ, ಏಕೆಂದು ಕೇಳಿದರೆ, ಅವನ ಮಗಳು ಹೋಗಿ ಏಳು ದಿವಸ ಆಗಿತ್ತಂತೆ ಅದಕ್ಕೆ ದೂರು ಕೊಡುವುದಕ್ಕೆ ಹೋಗಿದ್ದನಂತೆ. ಈ ತರಹ ಆದರೆ ನಾವು ಏನು ಮಾಡುವುದು? ನಾವು ಈ ವಿಷಯ ಅಲ್ಲಿ ಮಾತನಾಡಂಗಿಲ್ಲ, ಅಲ್ಲಿ ಮಾತನಾಡಿದರೆ ಓಟು ಹೊರಟು ಹೋಗುತ್ತವೆ. ಅದಕ್ಕೆ ಇಲ್ಲಿ ಮಾತನಾಡಬೇಕಷ್ಟೆ. ಈ ದೇಶದಲ್ಲಿ ಏನಾಗಿದೆ, ಮೌಢ್ಯತೆ ಎಷ್ಟರ ಮಟ್ಟಿಗೆ ಇದೆ ಎಂದರೆ, ಇವರೇನು ಮೌಢ್ಯತೆಯ ಬಗ್ಗೆ ಒಂದು ಬಿಲ್ ತರುತ್ತೇನೆ ಎಂದರು, ಏಕೋ ಹೆದರಿಕೊಂಡು ಬಿಟ್ಟರು. ದಯವಿಟ್ಟು ಕ್ರೀಡೆಗೆ ಹೆಚ್ಚು ಒಟ್ಟು ಕೊಡಬೇಕು. ದಯವಿಟ್ಟು ನಮ್ಮ ಎಲ್ಲಾ ಶಾಸಕರಲ್ಲಿ ವಿನಂತಿ. ಕ್ರೀಡಾ ರಂಗಕ್ಕೆ ಹೆಚ್ಚು ಒತ್ತು ಕೊಡಬೇಕು. ಯುವ ಶಕ್ತಿ ದೈಹಿಕವಾಗಿ ಚೆನ್ನಾಗಿರಬೇಕೆಂದರೆ ಕ್ರೀಡಾ ರಂಗಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಶಾಸಕರನ್ನು ಹೀಗೆ ಕೂಡಿಸಿ ಕೂಡಿಸಿ ತೌಡು ಕುಟ್ಟಿ ಕುಟ್ಟಿ ನಮಗೆ ಸಾಕಾಗಿದೆ. ಶಾಸಕರ ದಿನಾಚರಣೆ ಎಂದು ಮಾಡಿ, ನಾವು ಒಂದಿಷ್ಟು ನಾಟಕ ಗೀಟಕ, ಕುಣಿಯುವುದು, ಬಾಲ್ ಆಡುವುದು, ನಮ್ಮನ್ನು ಆಡಿಸಿ ಸ್ವಾಮಿ.

ಉಪಾಧ್ಯಕ್ಷರು:- ಶಾಸಕರ ದಿನಾಚರಣೆ ಮಾಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನಮ್ಮ ಹೆಂಡತಿಯನ್ನು ಕರೆದುಕೊಂಡು ಬರುತ್ತೇವೆ, ಅವರು ನಮ್ಮನ್ನು ಕಟ್ಟಿಕೊಂಡ ತಪ್ಪಿಗೆ ಹುಟ್ಟಿದ ತಪ್ಪಿಗೆ ಒಂದು ದಿವಸ ಬರಲಿ. ನನ್ನ ಹೆಂಡತಿ ನನಗೆ ಇದುವರೆಗೆ Divorce ಮಾಡದಿರುವುದು ಆಶ್ಚರ್ಯ. Divorce ಎಂದಾಕ್ಷಣ ಒಂದು ವಿಷಯ ಬಂತು. ಅತಿ ಹೆಚ್ಚು divorce ಆಗುತ್ತಿರುವುದು ಬೆಂಗಳೂರಿನಲ್ಲಿ. ಮೊನ್ನೆ ಟಿವಿಯಲ್ಲಿ 6000 ಹೆಣ್ಣು ಗಂಡುಗಳು ಬಿಡುಗಡೆಯಾದವು ಎಂದು ಬಂದಿತ್ತು. ಇದರ ಬಗ್ಗೆ ಚರ್ಚೆಯಾಗಬೇಕು, ಇದರ ಬಗ್ಗೆ ಒಂದು ನೀತಿ ಮಾಡಬೇಕು. ನಿಮ್ಮದೇನು divorce ಆಗಿಲ್ಲ ಅಲ್ಲವೆ? ನಮ್ಮದೂ divorce ಆಗಿಲ್ಲ. ಮಾನ್ಯ ರಮೇಶ್ ಕುಮಾರ್‌ರವರದ್ದು divorce ಆಗುವ ಸ್ಥಿತಿಗೆ ಬಂದಿತ್ತಂತೆ. ಕೊನೆಗೆ ಬೇಡ ಎಂದು ಸುಮ್ಮನಾಗಿದ್ದಾರೆ. ನಮ್ಮ ಮನೆಯಲ್ಲಿಯೂ ಆಗಿತ್ತು. ಹೀಗಾಗಿ divorce ಎನ್ನುವ ವಿಚಾರದ ಬಗ್ಗೆ ಚರ್ಚೆಯಾಗಬೇಕು. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಗಂಡಿನ ಸಂಬಂಧ ದಿನೇ ದಿನೇ ವೈಜ್ಞಾನಿಕವಾಗಿ ಕುಸಿಯುತ್ತಿದೆ.

ಶ್ರೀ ಬಿ.ಬಿ. ನಿಂಗಯ್ಯ:- Divorce ಅಲ್ಲ ಮದುವೆ ವ್ಯವಸ್ಥೆಯ ಬಗ್ಗೆಯೆ ಚರ್ಚೆಯಾಗಬೇಕಾದ ಸಂದರ್ಭ ಬಂದಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮದುವೆ ಎಂದರೆ ಏನು? ಲೈಂಗಿಕತೆಗೆ ಶಿಸ್ತು ಅಷ್ಟೆ. RTC ಇರುವುದರಿಂದಲೇ ತಾನೆ ನಾವು ನಮ್ಮ ಗದ್ದೆ ಯಾವುದಿದೆ ಅದಕ್ಕೆ ಉಳುವುದಕ್ಕೆ ಹೋಗುವುದು. RTC ಇಲ್ಲದಿದ್ದರೆ ಯಾವ ಗದ್ದೆಯನ್ನು ಯಾರಾದರೂ ಉತ್ತು ಬಿಡಬಹುದು. ಹೆಣ್ಣು ಗಂಡಿಗೆ ನಾವು RTC ಕೊಡುತ್ತೇವೆ. ಅವರ ಅಪ್ಪ-ಅವ್ವನೆ ತಹಶೀಲ್ದಾರ್, ನಾವೇ Village Accountant, ನೀವೇ Revenue Inspector. ಅದಕ್ಕೆ ಎಷ್ಟು ಮಂತ್ರ ಹೇಳಿದರೂ ಏನು ಆಗುವುದಿಲ್ಲ. ಮಂತ್ರ ಎಷ್ಟು ಹೇಳಿದರೂ ಏಕೆ ಗಂಡ-ಹೆಂಡತಿ ಬೇರೆಯಾದರು?

ಶ್ರೀ ಕೆ.ಆರ್. ರಮೇಶ್ ಕುಮಾರ್:– ಈಗ ಅರ್ಥವಾಯಿತೆ? ಪವತಿಯಾಗಿ ಈಗ ನೀವು ಬದುಕಿದ್ದರೂ ಖಾತೆ ಏಕೆ transfer ಮಾಡುತ್ತಾರೆಂದು ಈಗ ಗೊತ್ತಾಯಿತೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ತಾವು ಇನ್ನೊಂದು ಸಲ repeat ಮಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನೀವು ಉಳುಮೆ ಸರಿಯಾಗಿ ಮಾಡಲಿಲ್ಲವೆಂದರೆ ಬೇರೆಯವರು ನೇಗಿಲು ಕಟ್ಟಿದ ಎಂತಲೆ ಅರ್ಥ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಪುಟ್ಟಣ್ಣಯ್ಯನವರೆ, ಉಳುವವನೇ ಭೂಮಿಯ ಒಡೆಯ ಎಂದು ಹಿಂದೆಯೆ ಕಾನೂನು ತಂದಿದ್ದಾರೆ ಅದು ತಮಗೆ ಗೊತ್ತಿದೆ ಅಲ್ಲವೆ?

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಉಳುವವನೇ ಭೂಮಿಯ ಒಡೆಯ ಎನ್ನುವ ಕಾನೂನು ಇರುವುದು ಸರಿ, ಅದಕ್ಕೆ ನಾನು ಹೇಳುತ್ತಿದ್ದೇನೆ, ಸರಿಯಾಗಿ doctor certificate ತೆಗೆದುಕೊಂಡು ಮದುವೆ ಯಾಗುವುದು ಒಳ್ಳೆಯದು. Perfect ಉಳುಮೆ ಮಾಡತ್ತಾನೋ ಇಲ್ಲವೋ ಎಂದು doctor certificate ತೆಗೆದುಕೊಂಡರೆ ಮುಗಿದು ಹೋಯಿತು. ಆದ್ದರಿಂದ, ನಮ್ಮ ರವಿಯವರು ಹೇಳಿದ ಹಾಗೆ ಉಳುವವನೇ ಭೂಮಿಯ ಒಡೆಯ ಎಂದರೆ, ಅದು ಹಾಗೆ ಅಡ್ಡಾದಿಡ್ಡಿ ಆಗುವುದಿಲ್ಲ ಕಾನೂನು ಪ್ರಕಾರ ಉಳುಮೆ ಮಾಡಬೇಕು. ಮದುವೆ ಬಗ್ಗೆ ಬಹಳ ದೊಡ್ಡ ಅಲೋಚನೆ ಮಾಡಬೇಕು. ಮದುವೆ ಇದು ಹಾಸ್ಯವಲ್ಲ 6000 divorce ಆಯಿತು ಎಂದರೆ ನಮಗೆ ಭಯ ಆಗುತ್ತದೆ. ಅದರಲ್ಲೂ ಹೆಚ್ಚು ವಿದ್ಯಾವಂತರು. ನಮ್ಮ ಊರಿನಲ್ಲಿ ಆಂಡ ಎನ್ನುವವನು ಕಸ ಗುಡಿಸುವನೊಬ್ಬ ತನ್ನ ಹೆಂಡತಿ ಸತ್ತಾಗ, ನನ್ನ ಹೆಂಡತಿ ಇಲ್ಲವೆಂದ ಮೇಲೆ ನಾನು ಬದುಕುವುದಿಲ್ಲ, ನನ್ನ ಮನೆಯ ದೇವರು ಯಾರು ಎಂದರೆ ನನ್ನ ಹೆಂಡತಿ, ಎಂದು ಹೇಳಿದ. ಏನೂ ಓದದೆ ಇರುವವನು ಕಸ

ಗುಡಿಸುವನೊಬ್ಬ ತನ್ನ ಹೆಂಡತಿಯನ್ನು ದೇವರು ಎಂದೆನ್ನಬೇಕಾದರೆ ಅವರ ಪವಿತ್ರ ಬಾಂಧವ್ಯ ಎಷ್ಟು ಇರಬೇಕು.

ಉಪಾಧ್ಯಕ್ಷರು:– ಪುಟ್ಟಣ್ಣಯ್ಯನವರೆ, conclude ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಆಯಿತು, ಒಂದು ಮಾತು ಹೇಳಿ ನಾನು ಮುಗಿಸಿ ಬಿಡುತ್ತೇನೆ. ನೀರಾವರಿ ಬಗ್ಗೆ ನಾವೆಲ್ಲಾ ಮಾತನಾಡುತ್ತಿದ್ದೇವೆ. ಕುಮಾರಸ್ವಾಮಿಯವರು, ಜಗದೀಶ್ ಶೆಟ್ಟರ್‌ರವರು, ಕೃಷ್ಣಾ ಆ ರೀತಿ ಆಗಿದೆ, ಕಾವೇರಿ ಈ ರೀತಿ ಆಗಿದೆ ಎಂದು ಹೇಳಿದರು. ಕೃಷ್ಣಾದಲ್ಲಿ ನಾವು ಬಳಕೆ ಮಾಡಿರುವುದೆಷ್ಟು? 550 TMC, ಇನ್ನು ಬಳಕೆ ಮಾಡಬೇಕಾದದು ಎಷ್ಟು? 361 TMC. ಇದರಲ್ಲಿ 11 TMC ಮಾತ್ರ fiscal ಆಗಿ ನಾವು ಉಪಯೋಗ ಮಾಡಿಕೊಂಡ ಹಾಗೆ ಆಯಿತು. ಇದರ ಪ್ರಕಾರ ನಾವು ಇನ್ನೂ 35 ವರ್ಷಗಳು ಹೋದರೂ ಕೃಷ್ಣಾ ಸಂಪೂರ್ಣಗೊಳಿಸುವುದಕ್ಕೆ ಹೋಗುವುದಿಲ್ಲ. ಅದರ ಪ್ರಕಾರ ಹೋಗೋಣ, ನೀವು 11 ಸಾವಿರ ಕೋಟಿ ಕೊಟ್ಟರಿ SR Rate ಜಾಸ್ತಿಯಾಯಿತು ಅದು ಬೇರೆ ಪ್ರಶ್ನೆ. ಅದಕ್ಕೆ ನಾನು ಆಗಲೇ ನೀರಾವರಿಯ ಬಗ್ಗೆ ನಾವೆಲ್ಲರೂ ಮಾತನಾಡುತ್ತೇವೆ. ಉತ್ತರ ಕರ್ನಾಟಕದಲ್ಲಿ ಆ 350 TMC ಯನ್ನು 60 ವರ್ಷಗಳಿಂದ ನಾವು ಬಳಕೆ ಮಾಡಿಕೊಂಡಿಲ್ಲವೆಂದರೆ ಎಷ್ಟು TMC ನೀರು ನಾವು Waste ಮಾಡಿದ್ದೇವೆ. ಏಕೆ ನಮ್ಮ ರಾಜಕೀಯ ಬದ್ಧತೆಯನ್ನು ತೋರಿಸಿಲ್ಲ? ನಮ್ಮ ರಾಜಕೀಯ ಬದ್ಧತೆ ಏನು? ಹೀಗಾದರೆ ಇನ್ನು 30 ರಿಂದ 35 ವರ್ಷಗಳು ಬೇಕು. ಬಚಾವತ್ ಆಯೋಗಕ್ಕೆ 2005 ರೊಳಗೆ ಮುಗಿಸುತ್ತೇವೆಂದು ಹೇಳಿದ್ದರು. ಬೇರೆ ರಾಜ್ಯಗಳು ನೀರಾವರಿಗೆ ಆದ್ಯತೆ ಕೊಟ್ಟ ಹಾಗೆ ನಮ್ಮ ರಾಜ್ಯಕ್ಕೆ ಏಕೆ ಆಗಿಲ್ಲ? ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ತನ್ನ ಮನೆಯ 4 ಮೂಟೆ ಚಿನ್ನ ಮಾರಿ ಕನ್ನಂಬಾಡಿ ಕಟ್ಟೆ ಕಟ್ಟಿದರು. ಮಂಡ್ಯದಲ್ಲಿ boiler ಮುಗಿಸಿಕೊಳ್ಳುವುದಕ್ಕೆ ಅವರ ಹೆಂಡತಿಯ ಮೈಮೇಲಿದ್ದ ಒಡವೆಗಳನ್ನು ಬಿಡಿಸಿಕೊಂಡು ಹೋಗಿ ಬಹಳ ಪೂಸಿ ಮಾಡಿ

boiler ಮುಗಿಸಿದರು. ಇವತ್ತು ಏನಾದರೂ ನಾನು ನನ್ನ ಹೆಂಡತಿಯ ಬಳಿಗೆ ಹೋಗಿ 6 ಬಳೆ 3 ಚೈನು ಕೊಡು ಎಂದರೆ, ನಿನ್ನ ಪ್ರೀತಿಯನ್ನು ಒಪ್ಪಿ ಮದುವೆಯಾಗಿದ್ದೆ, ಈಗ ಬಿಡುಗಡೆಗೆ ಅರ್ಜಿ ಹಾಕುತ್ತಿದ್ದೇನೆ, ಹೋಗಿ ಬಾ ಎನ್ನುತ್ತಾಳೆ. ಅಂದರೆ, ಅವತ್ತಿನ commitment ಹೇಗಿತ್ತು? ಚುರ್ಕಿ, ಗಾರೆಯಲ್ಲಿ ಕಟ್ಟಿದರು. ಅಂದರೆ, ಆ ತರಹದ ತ್ಯಾಗದ ಮನೋಭವನೆ ಸರ್ಕಾರಗಳಿಗ ಇಲ್ಲದೆ ಇದ್ದರೆ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೂ 361 TMC ನೀರು ಕನ್ನಂಬಾಡಿ ಕಟ್ಟೆ 77 TMC ಇನ್ನು ನಾವು ಬಳಕೆ ಮಾಡಿಕೊಂಡಿಲ್ಲ. Court ಕೊಟ್ಟಿರುವುದು 270 TMC ಯಲ್ಲಿ 193 TMC ನೀರನ್ನು ಬಳಕೆ ಮಾಡಿಕೊಳ್ಳುತ್ತಿದ್ದೇವೆಂದು ಹೇಳುತ್ತೇನೆ. ಕೊನೆಯದಾಗಿ, "ವೈದ್ಯೋ ನಾರಾಯಣೋ ಹರಿಃ" ಎಂದು ಕರೆಯುತ್ತಾರೆ. ಎಲ್ಲಾ ಆಸ್ಪತ್ರೆಯಲ್ಲಿಯೂ ಡಾಕ್ಟರ್, ಇಲ್ಲ, ಶುಶ್ರೂಷೆ ಯಾರೂ ಮಾಡಿಲ್ಲ Human health ಕಾಪಾಡುವುದು ನಿಮ್ಮ ಜವಾಬ್ದಾರಿ ಅಲ್ಲವೆ? ನಮ್ಮ ತಾಲ್ಲೂಕಿನಲ್ಲಿ 6 ಜನ ಡಾಕ್ಟರ್ಸ್ ಇಲ್ಲ. ನಿಮ್ಮ ತಾಲ್ಲೂಕಿನಲ್ಲಿ ಇರಬಹುದೇನು, ನೀವು ಡಿಸಿ ಗೆ ಹೇಳಿ. ನಿವೃತ್ತಿಯಾಗಿರತಕ್ಕಂಥ ಎಲ್ಲಾ ಡಾಕ್ಟರ್‌ಗಳನ್ನು ತೆಗೆದುಕೊಳ್ಳುವ ಮುಖಾಂತರ ಎಲ್ಲರನ್ನೂ ರಕ್ಷಣೆ ಮಾಡಬೇಕೆಂದು ಹೇಳಿ. ಏಕೆ ಮಾಡುವುದುಕ್ಕಾಗುವುದಿಲ್ಲ? ಎಲ್ಲರೂ ಖಾಸಗಿ ನರ್ಸಿಂಗ್ ಹೋಂಗೆ ಹೋಗುತ್ತಾರೆ. ಖಾಸಗಿ ನರ್ಸಿಂಗ್ ಹೋಂಗಳು Slaughter House ಇದ್ದ ಹಾಗೆ. ಮನುಷ್ಯನ ಚರ್ಮದ ಸಮೇತ ಕತ್ತರಿಸುತ್ತಾರೆ. ನೀವು ಏನಾದರೂ ಮಾಡಿ ಅದು ಸರ್ಕಾರಕ್ಕೆ ಬಿಟ್ಟಿದ್ದು. ನಿವೃತ್ತಿ ಹೊಂದಿರತಕ್ಕಂಥ ಡಾಕ್ಟರ್‌ಗಳನ್ನು......

ಶ್ರೀ ಎಸ್.ಆರ್. ಶ್ರೀನಿವಾಸ:- ಮಾನ್ಯ ಉಪಾಧ್ಯಕ್ಷರೆ, service ಆಗಿರುವ linemen ಗಳಿಗೆ 35 ಸಾವಿರ ರೂಪಾಯಿ ಸಂಬಳ ಬರುತ್ತದೆ. Lecturers ಒಂದೂವರೆ ಗಂಟೆ ಪಾಠ ಮಾಡಿ ಒಂದು ಲಕ್ಷ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾರೆ. ಡಾಕ್ಟರ್‌ಗ ಸಂಬಳ ಹೆಚ್ಚಿಗೆ ಕೊಡಿ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:- Lecturers ಲಕ್ಷ ಸಂಬಳ, not Medical Officer.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ:- ಎಂ.ಎ. ಮಾಡಿಕೊಂಡು ಬಂದಿರುವ ಒಬ್ಬ lecturers ಗೆ UGC scale ಪ್ರಕಾರ ಒಂದು ಲಕ್ಷ ರೂಪಾಯಿ salary ಕೊಡುತ್ತಾರೆ. MBBS ಮುಗಿಸಿಕೊಂಡು MS ಮುಗಿಸಿಕೊಂಡು ಬಂದಿರುವ ಡಾಕ್ಟರ್‌ಗೆ ನೀವು 30 ರಿಂದ 40 ಸಾವಿರ ಸಂಬಳ ಕೊಟ್ಟರೆ ಯಾರು ಬರುತ್ತಾರೆ? ಆರು ವರ್ಷಗಳ ಕಾಲ ಓದಿರುತ್ತಾರೆ. 1 ರಿಂದ 2 ಕೋಟಿ ಡೊನೇಷನ್ ಕೊಟ್ಟು ಓದಿರುತ್ತಾರೆ. ನೀವು ಕೊಡುವ 30-40 ಸಾವಿರ ಸಂಬಳಕ್ಕೆ ಯಾರು ಬರುತ್ತಾರೆ.? you must change your attitude. ಇಲ್ಲ ಅಂದರೆ ಹಳ್ಳಿಗಳಲ್ಲಿ ಜನ ಸಾಯುತ್ತಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸಾಯುವುದಲ್ಲ, ಶಾಸಕರಿಗೆ ಜನ ಯಾವ ರೀತಿ ಬಯ್ಯುತ್ತಾರೆಂದರೆ, ಅವ್ವ, ಅಕ್ಕ, ಹೆಂಡತಿ, ಯಾರ್‍ಯಾರು ಇದ್ದಾರೆ ಅವರ್‍ಯಾರೂ ಉಳಿದುಕೊಂಡಿಲ್ಲ.

ಶ್ರೀ ಸಿ.ಎನ್. ಬಾಲಕೃಷ್ಣ:- ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, NRHM ಅಡಿಯಲ್ಲಿ ತಜ್ಞ ವೈದ್ಯರನ್ನು ಏನು ತೆಗೆದುಕೊಂಡಿದ್ದಾರೆ ಅವರಿಗೆ 8 ತಿಂಗಳಿನಿಂದ ಸ್ಯಾಲರಿ ಕೊಟ್ಟಿಲ್ಲ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. Staff Nurseಗೆ 4 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಖಂಡಿತವಾಗಿಯೂ ಇದು ನನ್ನ ತಾಲ್ಲೂಕಿನಲ್ಲಿ ಇರುವ ಸಮಸ್ಯೆಯನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಈ ಸಮಸ್ಯೆಯನ್ನು ಯಾವ ತರಹ ಬಗೆಹರಿಸಬೇಕೋ ಅದರ ಕಡೆಗೆ ಗಮನಹರಿಸಿ.

ಶ್ರೀ ಯು.ಟಿ. ಖಾದರ್:- ಮಾನ್ಯ ಅಧ್ಯಕ್ಷರೆ, NRHM ಅಡಿಯಲ್ಲಿ ಆಯ್ಕೆಯಾದ ಡಾಕ್ಟರ್ಸ್ ಮತ್ತು ನರ್ಸ್‌ಗಳಿಗೆ ನಾವು ಮೂರು ತಿಂಗಳ

ಸಂಬಳವನ್ನು ಮೊದಲು ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡುತ್ತೇವೆ. ಅಲ್ಲಿಂದ DHO ಗೆ ಹೋಗಿ ನಂತರ ಅವರು ಸಂಬಂಧಪಟ್ಟವರಿಗೆ ಬಿಡುಗಡೆ ಮಾಡಬೇಕಾಗುತ್ತದೆ. ಈಗ ನಿಮ್ಮ ಜಿಲ್ಲೆಯಲ್ಲಿ ಕೊಡದಿದ್ದರೆ ನಿಮ್ಮಲ್ಲಿ KDP ಸಭೆಯಾಗುವಂಥ ಸಂದರ್ಭದಲ್ಲಿ, ಶಾಸಕರು, ಜಿಲ್ಲಾ ಅಧ್ಯಕ್ಷರು, DHO ಗಳಿರುತ್ತಾರೆ. ನೀವು ಅಲ್ಲಿ ಕುಳಿತು, ಸಂಬಳ ಏಕೆ ಬರಲಿಲ್ಲ ವಿಳಂಬಕ್ಕೆ ಏನು ಕಾರಣ ಎಂದು ಕೇಳಿ ನಮ್ಮ ಗಮನಕ್ಕೆ ತನ್ನಿ. ತಾವು ಈಗ ನನ್ನ ಗಮನಕ್ಕೆ ಈ ವಿಷಯವನ್ನು ತಂದಿದ್ದೀರಿ, ನಾನು ಆ ಬಗ್ಗೆ ಸಂಬಂಧಪಟ್ಟವರೊಡನೆ ಮಾತನಾಡುತ್ತೇನೆ. ಬಹುಶಃ ಎಲ್ಲಾ ಜಿಲ್ಲೆಗಳಲ್ಲಿಯೂ KDP ಸಭೆ ನಡೆಯುತ್ತದೆ. ಕೆಡಿಪಿ ಸಭೆ ನಡೆಯುವಂಥ ಸಂದರ್ಭದಲ್ಲಿ ಎಷ್ಟು ತಿಂಗಳಿಂದ ಸಂಬಳ ಕೊಟ್ಟಿಲ್ಲವೆಂದು ಕೇಳುವುದಕ್ಕೆ ನಿಮಗೆ ಅವಕಾಶ ಇರುತ್ತದೆ. ಹಾಗೆಯೇ NRHM ನಿಂದ ಎಷ್ಟು ಹಣ ಬರುತ್ತದೆಂದು ಕೇಳಬಹುದು. Quarterly ಅಂದರೆ, ಮೂರು ತಿಂಗಳ ಮುಂಚಿತವಾಗಿ ನಾವು ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಡಾಕ್ಟರ್‌ಗಳನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಕೊಟ್ಟಿದ್ದಾರೆ. ಆದ್ದರಿಂದ, ಅವರನ್ನು ಮೊದಲು ಸರ್ಕಾರದ ಲೆವೆಲ್‌ಗೆ ವಾಪಸ್ಸು ತೆಗೆದುಕೊಳ್ಳಿ. ಇವತ್ತಿನ ದಿವಸ ಏನಾಗಿದೆ ಎಂದರೆ, ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು ಹೋಗಿ ಅಲ್ಲಿನ ಡಾಕ್ಟರ್‌ಗಳಿಗೆ ಕೊಡುವಂಥ ಟ್ರೀಟ್‌ಮೆಂಟ್ ಮತ್ತು ಇವರು ಕೊಡುವ ಗೌರವವನ್ನು ನೋಡಿದರೆ ಅವರು ಹಳ್ಳಿಗಳಿಗೆ ಹೋಗಿ ಎಲ್ಲಿ ಕೆಲಸ ಮಾಡುತ್ತಾರೆ? ಆದ್ದರಿಂದ, ಇದನ್ನು ಮೊದಲು ಸರಿಪಡಿಸಿಕೊಳ್ಳತಕ್ಕಂಥದ್ದು ಸೂಕ್ತ. ಅವರನ್ನು ಮೊದಲು ಜಿಲ್ಲಾ ಪಂಚಾಯತ್ ವ್ಯಾಪ್ತಿಯಿಂದ ತೆಗೆಯುವುದು ಒಳ್ಳೆಯದು.

ಶ್ರೀ ಎಂ.ಟಿ. ಕೃಷ್ಣಪ್ಪ:- ನೀವು ಹಣವನ್ನು ಬಿಡುಗಡೆ ಮಾಡುತ್ತೀರಿ. ಆದರೆ, ಜಿಲ್ಲಾ ಪಂಚಾಯತ್‌ನಲ್ಲಿರುವ Chief Secretary ಆ ಹಣವನ್ನು FD

ಯಲ್ಲಿ ಹಾಕಿಕೊಂಡು ಬಡ್ಡಿ ತೆಗೆದುಕೊಂಡ ನಂತರ ಹಣ ಕೊಡುತ್ತಾರೆ. ಆದ್ದರಿಂದ, ತಕ್ಷಣ ಇದನ್ನು ನಿಲ್ಲಿಸಬೇಕು.

ಶ್ರೀ ಯು.ಟಿ. ಖಾದರ್:- ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಸರ್ಕಾರ ಕೊಡುವ ಸವಲತ್ತುಗಳನ್ನು ಕೆಳಮಟ್ಟದಲ್ಲಿ ಸರಿಯಾಗಿ ಅನುಷ್ಠಾನವಾಗುತ್ತಿದೆಯೇ ಅಥವಾ ಇಲ್ಲವೇ ಎಂದು ನೋಡುವುದಕ್ಕೆ ನಮ್ಮ ಶಾಸಕರನ್ನು ಆಯ್ಕೆ ಮಾಡಿದ್ದಾರೆ. ಸಭೆಗೆ ಕರೆದು ಎಲ್ಲೆಲ್ಲಿ ಆಗಿಲ್ಲವೆಂದು ಮತ್ತು ಏಕೆ ಆಗಿಲ್ಲವೆಂದು ಹಾಗೂ ಬೇರೆ ಕಡೆ ಆಗಿರುವಾಗ ಇಲ್ಲಿ ಏಕೆ ಆಗಿಲ್ಲವೆಂದು ಕೇಳಬೇಕು. ಮತ್ತೆ ಹಿರಿಯ ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಕುಮಾರಸ್ವಾಮಿಯವರು ಈಗ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಬರವಣಿಗೆಯಲ್ಲಿ ಕೊಟ್ಟರೆ ಅದರ ಬಗ್ಗೆ ನಾವು ಪರಿಶೀಲಿಸುತ್ತೇವೆ.

ಶ್ರೀ ಎನ್.ಎ. ಹ್ಯಾರಿಸ್ (ಶಾಂತಿನಗರ):- ಮಾನ್ಯ ಅಧ್ಯಕ್ಷರೆ, ತಮಗೆ ತುಂಬಾ ಧನ್ಯವಾದಗಳು. 2014-15ನೇ ಸಾಲಿನ ಬಜೆಟ್ ಅನ್ನು inclusive and all round development budget ಆಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇದು ಎಲ್ಲಾ ವರ್ಗದ ಜನರನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಬಜೆಟ್ ಆಗಿರುತ್ತದೆ. ದಲಿತರು, ಎಸ್.ಸಿ/ಎಸ್.ಟಿ, ಹಿಂದುಳಿದ ವರ್ಗ ಎಲ್ಲರ ಏಳಿಗೆಗಾಗಿ ಅನ್ನಭಾಗ್ಯ, ಕ್ಷೀರಭಾಗ್ಯ, ಕುಟೀರ ಜ್ಯೋತಿ, ಮನಸ್ವಿನಿ, ಮೈತ್ರಿ ಇವೆಲ್ಲವೂ ಬೇರೆ ಬೇರೆ ಕಾರ್ಯಕ್ರಮವಾಗಿದ್ದು, ನಮ್ಮ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಇವತ್ತು ಒಂದು ಕೆ.ಜಿ. ಅಕ್ಕಿಯನ್ನು ಒಂದು ರೂಪಾಯಿಗೆ ಕೊಡುವಂತಹದ್ದು, ಕ್ಷೀರಭಾಗ್ಯದ ಕಾರ್ಯಕ್ರಮ, ಕುಟೀರ ಜ್ಯೋತಿ ಕಾರ್ಯಕ್ರಮವನ್ನು ಕಳೆದ ಸರ್ಕಾರ ನಿಲ್ಲಿಸಿತ್ತು, ಈ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರ 318 ಕೋಟಿ ರೂಪಾಯಿಗಳನ್ನು ಕೊಡುವ ಮುಖಾಂತರ ಎಲ್ಲಾ ಬಡವರ ಮನೆಯಲ್ಲಿ ಜ್ಯೋತಿ ಬೆಳಗಿಸುವಂತಹ ಕೆಲಸವನ್ನು ಮಾಡಿದ್ದಾರೆ. ಇದೇ ರೀತಿ ಸುಮಾರು ಕಾರ್ಯಕ್ರಮಗಳನ್ನು ಈ ಸರ್ಕಾರ ಬಜೆಟ್ ಪುಸ್ತಕದಲ್ಲಿ ತಿಳಿಸಿದೆ. Overall 1,38,000 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ revenue surplus 281 ಕೋಟಿ ರೂಪಾಯಿಗಳಿವೆ. ಇದನ್ನು ನಾವು ಗಮನಿಸಬೇಕಾಗಿದೆ. ಕಳೆದ ಸರ್ಕಾರ ನಮಗೆ ಕೊಟ್ಟಿರುವ ಬಜೆಟ್‌ನಲ್ಲಿ -13.88 ಕೋಟಿ ರೂಪಾಯಿಗಳಿತ್ತು ಇದು last ಬಜೆಟ್‌ನಲ್ಲಿ ಆದರೆ ಇವತ್ತು 281 ಕೋಟಿ ರೂಪಾಯಿಗಳ revenue surplus ಅನ್ನು ಕೊಡುತ್ತಿದ್ದೇವೆ. ಹಾಗೆ ಕಳೆದ ಬಜೆಟ್ 1,16,212 ಕೋಟಿ ರೂಪಾಯಿಗಳಿತ್ತು ಅದು ಈಗ 28% ಜಾಸ್ತಿಯಾಗಿ ನಮ್ಮ ರಾಜ್ಯಕ್ಕೆ ಬಂದಿದೆಯೆಂದರೆ ಬಹುಶಃ ನಮ್ಮ ರಾಜ್ಯದಲ್ಲಿ ಸುಮಾರು ಒಳ್ಳೆಯ ಕೆಲಸಗಳು ಆಗುವುದಕ್ಕೆ ಅವಕಾಶವಾಗುತ್ತದೆ. ಕೇಂದ್ರ ಸರ್ಕಾರದಿಂದ ನಮಗೆ ಬರುವಂತಹ tax, grants ಎಲ್ಲ ಸೇರಿದರೆ 36,695 ಕೋಟಿ ರೂಪಾಯಿಗಳು ಬರುತ್ತದೆ. 1,02,000 ಕೋಟಿ ರೂಪಾಯಿಗಳನ್ನು ಈ ಸರ್ಕಾರ ಲೋನ್ ಮತ್ತು ರೆವಿನ್ಯೂ

ಆಗಿ ಸೃಷ್ಟಿ ಮಾಡುವಂತಹ ಕೆಲಸ ನಮ್ಮ ರಾಜ್ಯದಲ್ಲಿ ಸೃಷ್ಟಿ ಮಾಡುವಂತಹ ಕೆಲಸವಾಗುತ್ತದೆ. ವಿಶೇಷವಾಗಿ social service ಗೋಸ್ಕರ ಮಾತ್ರ 2013–14ನೇ ಸಾಲಿನ ಬಜೆಟ್‌ನಲ್ಲಿ 34,883 ಕೋಟಿ ರೂಪಾಯಿಗಳಿತ್ತು ಆದರೆ 2014–15ನೇ ಸಾಲಿನಲ್ಲಿ 42,478 ಕೋಟಿ ರೂಪಾಯಿಗಳು, ಅಂದರೆ 8,000 ಕೋಟಿ ರೂಪಾಯಿಗಳು ಹೆಚ್ಚಿಗೆ social service ಎಂದರೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಯಾರು ಬಡ ಜನರಿದ್ದಾರೆ ಅವರಿಗೋಸ್ಕರ 8,000 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ಅವಕಾಶವನ್ನು ಮಾಡಿದ್ದಾರೆ. ಇದೊಂದು ಬಹಳ ಒಳ್ಳೆಯ ಬೆಳವಣಿಗೆಯಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸದಸ್ಯರಾದ ಶ್ರೀ. ಪುಟ್ಟಣ್ಣಯ್ಯರವರು ಕೃಷಿ ಬಗ್ಗೆ ಮಾತನಾಡಿದರು. ಬಹುಶಃ ಕೃಷಿ 119 ಲಕ್ಷ ಟನ್ ಇದ್ದದ್ದು ಈಗ 131 ಲಕ್ಷ ಟನ್‌ಗೆ ಏರಿದೆ. ಆದರೆ ಇದು ಜಾಸ್ತಿ ಆಗುವ ಸಮಯದಲ್ಲಿ ಯಾವುದೇ ಗೋಲಿಬಾರ್ ಅಥವಾ ಲಾಠಿಚಾರ್ಜ್ ಆಗಲಿಲ್ಲ. ಯಾರಿಗೆ ಬೀಜ ಮತ್ತು ಗೊಬ್ಬರ ಸಿಗದಿರುವ ಕಷ್ಟ ಎಲ್ಲೂ ಇರಲಿಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ರೈತರಿಗೋಸ್ಕರ ಕೃಷಿ ಭಾಗ್ಯ ಸ್ಕೀಮ್ 500 ಕೋಟಿ ರೂಪಾಯಿಗಳು ಇದರಿಂದ ಹೆಚ್ಚು ಕಡಿಮೆ 53 ಲಕ್ಷ ರೈತರಿಗೆ ಅನುಕೂಲವಾಗುವಂತಹ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ಬಜೆಟ್‌ನಲ್ಲಿ ತಂದಿದ್ದಾರೆ. Interest ರಹಿತವಾದ ಸಾಲ ಎರಡು ಲಕ್ಷ ರೂಪಾಯಿವರೆಗೆ 0% interest ನಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಕಳೆದ ವರ್ಷದವರೆಗೆ ಎರಡು ಲಕ್ಷದವರೆಗೆ ಕೊಡುತ್ತಿದ್ದು, ಈ ವರ್ಷದಿಂದ ಅದನ್ನು ಮೂರು ಲಕ್ಷ ರೂಪಾಯಿವರೆಗೆ ಏರಿಸಿದ್ದಾರೆ. 3% ಬಡ್ಡಿಗೆ ಮೂರು ಲಕ್ಷ ರೂಪಾಯಿಗಳಿಂದ ಹತ್ತು ಲಕ್ಷ ರೂಪಾಯಿಗಳವರೆಗೆ ಕೊಡುವ ಕಾರ್ಯಕ್ರಮವಿದೆ. ಸಾಲ ಕೊಡುವುದಕ್ಕೆ 650 ಕೋಟಿ ರೂಪಾಯಿಗಳನ್ನು ಸಬ್ಸಿಡಿಯಾಗಿ ಬಡ್ಡಿಗೋಸ್ಕರ ಕೊಟ್ಟಿದ್ದಾರೆ. ಈ ಮುಖಾಂತರ ರೈತರಿಗಾಗಿ ಒಳ್ಳೆಯ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಸಿದ್ದರಾಮಯ್ಯನವರು ಕೊಟ್ಟಿದ್ದಾರೆಂದು

ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಕಳೆದ ಸರ್ಕಾರದಲ್ಲಿ ಕೃಷಿ ಬಜೆಟ್‌ಗೆ ಒಂದು ಬೇರೆ book ಇತ್ತು. ರೈತರ ಬಜೆಟ್ ಎಂದು ಒಂದು ಬುಕ್ ಮಾಡಿದ್ದರು. ಈ ಕೃಷಿ ಬಜೆಟ್ ಬೇರೆ ಎಂದು ಒಂದು ಬುಕ್ ಮಾಡಿದ್ದರು. ಆದರೆ ಇವತ್ತು ಎಲ್ಲವನ್ನೂ ಒಂದೇ ಪುಸ್ತಕದಲ್ಲಿಟ್ಟರೂ ಕೂಡ ರೈತರಿಗೂ ಕೂಡ ಕೊಡುವಂತಹ ವ್ಯವಸ್ಥೆ ಇಲ್ಲಿ ಆಗಿದೆಯೆಂಬುದನ್ನು ನಾವೆಲ್ಲರೂ ನೋಡಬೇಕಾಗುತ್ತದೆ. ಅದರಲ್ಲಿ Agricultural growth last ನಲ್ಲಿ –4.9 ಇತ್ತು ಈ ಬಾರಿ ಅದು +3.6 ಆಗಿದೆ ಎಂದರೆ 8.5% growth ಆಗಿರುವುದನ್ನು ಇವತ್ತು ನಾವು ನೋಡುತ್ತಿದ್ದೇವೆ. ಆದ್ದರಿಂದ Agricultural Budget ಇಲ್ಲದೆ ಒಳ್ಳೆಯ ಬಜೆಟ್ ರೈತರಿಗೋಸ್ಕರ ಬಂದಿದೆಯೆಂಬುದನ್ನು ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಕೆರೆ ಅಭಿವೃದ್ಧಿ ಬಗ್ಗೆ ಹೇಳಬೇಕೆಂದರೆ, "One tank in each of the Assembly Constituency" ಎನ್ನುವ ಒಂದು ಕಾರ್ಯಕ್ರಮವನ್ನು ನೀರಾವರಿಯಲ್ಲಿ ತಂದಿದ್ದಾರೆ. ಇದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ಆದರೆ ಬೆಂಗಳೂರು ನಗರದಲ್ಲಿ ಕೆರೆ ಮಾಡುವುದಕ್ಕೆ ಜಾಗವೇ ಇಲ್ಲ. ಅಲ್ಲೂ ಕೂಡ rain harvest ಮಾಡುವುದಕ್ಕೋಸ್ಕರ ನಾವು ಈ ಕಾರ್ಯಕ್ರಮವನ್ನು ಬೇರೆ ರೀತಿಯಲ್ಲಿ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇವೆ. ಹಾಗೆಯೇ ಶ್ರೀ.- ಪುಟ್ಟಣ್ಣಯ್ಯರವರೇ ರೈತರ ಮಕ್ಕಳಿಗೆ Agricultural universities ನಲ್ಲಿ 40% seat reservation ಮಾಡಿದ್ದಾರೆ. So, that is a very geat support for farmers. ಸೋಲಾರ್ ಪಂಪ್‌ನ್ನು Horticulture ನಲ್ಲಿ ಉಪಯೋಗಿಸುವಂತಹದ್ದು, ಬಹುಶಃ ಅದಕ್ಕೆ 75% ಸಬ್ಸಿಡಿಯನ್ನು ಕೊಡುವಂತಹ ಕಾರ್ಯಕ್ರಮವನ್ನು ಈ ಸರ್ಕಾರ ತಂದಿರುವುದನ್ನು ನಾವು ಮೆಚ್ಚಲೇಬೇಕಾಗಿದೆ. ಏಕೆಂದರೆ ಸೋಲಾರ್ energy ಯನ್ನು ನಾವು ಉಪಯೋಗಿಸಿಕೊಂಡರೆ ಬೇಕಾದಷ್ಟು ಬೇರೆ ರೀತಿಯಲ್ಲಿ natural resources ಗೆ ಅನುಕೂಲವಾಗುವುದೂ ಕೂಡ ಇಲ್ಲಿ ನಮಗೆ ಕಾಣುತ್ತಿದೆ. ನಮ್ಮ ಸರ್ಕಾರ Agricultural Price Commission ಎಂದು

ಮಾಡಿದೆ. ಆದರೆ ನಾನು ಕೇಳಿಕೊಳ್ಳುವುದೇನೆಂದರೆ ನೀವು minimum support price ಅನ್ನು ಮಾಡುವ ಕಾರ್ಯಕ್ರಮವನ್ನು ಮಾಡಬೇಕು. minimum support price ಎಂದು ಹೇಳಿದರೆ ಬಹುಶಃ ಬಿತ್ತನೆ ಮಾಡುವುದಕ್ಕೆ ಮೊದಲೇ ಸರ್ಕಾರ ಟೊಮ್ಯಾಟೋ ಇರಬಹುದು, ರಾಗಿ ಇರಬಹುದು, ಅಕ್ಕಿ ಇರಬಹುದು ಯಾವುದಕ್ಕಾದರೂ ಸರಿ ಒಂದು price ಅನ್ನು declare ಮಾಡಿದರೆ ಬಹುಶಃ ರೈತರು ಯಾವ ಬೆಳೆಯನ್ನು ಹಾಕಬೇಕೆಂದು ನೋಡಿ ಬಿತ್ತನೆ ಮಾಡುತ್ತಾರೆ ಇದರಿಂದ ಅವರಿಗೆ ನಷ್ಟವಾಗುವುದಿಲ್ಲ. ಇದರಿಂದ ಅವರಿಗೆ ಅನುಕೂಲವಾಗುತ್ತದೆ.

ಮಾನ್ಯ ಕೃಷಿ ಸಚಿವರು ಸದನದಲ್ಲಿ ಇಲ್ಲ. ಅವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, MSP ಅನ್ನು ನೀವು ಮಾಡಿದರೆ ಇಡೀ ಭಾರತ ದೇಶದಲ್ಲೇ ಮೊದಲನೇ ರಾಜ್ಯ ನಮ್ಮದಾಗುತ್ತದೆಂದು ನಾವು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇದರಿಂದ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆ. ರೈತರು ಕಷ್ಟವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವಂತಹುದ್ದನ್ನು ನಿಲ್ಲಿಸುವುದಕ್ಕೆ ಒಳ್ಳೆಯ ಅವಕಾಶವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ನನ್ನ ಕ್ಷೇತ್ರದ ಪಕ್ಕದಲ್ಲಿರುವ Dairy Farming Collegeನಲ್ಲಿ ನಡೆದಂತಹ ಒಂದು ದೊಡ್ಡ award programme, ಗೆ ಮುಖ್ಯ ಅತಿಥಿಯಾಗಿ ನನ್ನನ್ನು ಕೂಡ ಕರೆದಿದ್ದರು. ನೀವು ಕೂಡ ಅದರ ಬಗ್ಗೆ ಕೇಳಿರುವುದಿಲ್ಲ. ಅಲ್ಲಿ ಯಾವ ಮೀಡಿಯಾದವರು ಇರಲಿಲ್ಲ. ಆದರೆ ಅಲ್ಲಿ ನಡೆದಂತಹ ಕಾರ್ಯಕ್ರಮದಲ್ಲಿ rural area ದಲ್ಲಿರುವ ಯುವಕರು ಕೋಳಿ, ಕುರಿ, ಹಸು ಇವುಗಳನ್ನೆಲ್ಲಾ ಸಾಕಿ ಅದರಿಂದಲೇ ಮುಂದುವರೆದು ಬಹಳಷ್ಟು ಅನುಕೂಲವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಇದು ಯಾರಿಗೂ ಕೂಡ ಗೊತ್ತಾಗುತ್ತಿಲ್ಲ. Even media ಕೂಡ ಅದನ್ನು cover ಮಾಡುವುದಿಲ್ಲ. ಮೀಡಿಯಾದವರು ಏನಾದರೂ negative ಇದ್ದರೆ cover ಮಾಡುತ್ತಾರೆ

ಒಳ್ಳೆಯದನ್ನು ಯುವಕರಿಗೆ ತಿಳಿಸುವಂತಹ ಕೆಲಸ ಅಲ್ಲಿ ಆಗುತ್ತಿಲ್ಲ. ನನ್ನ ಉದ್ದೇಶವೇನೆಂದರೆ, ಒಳ್ಳೆಯ ಬೆಳೆಯನ್ನು ಬೆಳೆಯುವವರಿಗೆ, ಕುರಿ, ಕೋಳಿ ಚೆನ್ನಾಗಿ ಸಾಕುವ ರೈತರಿಗೆ ಒಂದು Film Fair Award ಕಾರ್ಯಕ್ರಮದ ರೀತಿಯಲ್ಲಿ ಒಂದು function ಅನ್ನು ಮಾಡಿ ಇಡೀ ರಾಜ್ಯದ ಜನರಿಗೆ ಗೊತ್ತಾಗುವ ರೀತಿಯಲ್ಲಿ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಅದರಿಂದ ಯುವಕರಿಗೆ ಸ್ಫೂರ್ತಿ ಸಿಗುತ್ತದೆ. ಹಳ್ಳಿಯಲ್ಲಿರುವ ಯುವಕರು ಅಲ್ಲೇ ಕೆಲಸ ಮಾಡಿ ಅಲ್ಲಿಯೇ ಬದುಕಬಹುದು. ನಗರಕ್ಕೆ migration ಕೂಡ ಆಗುವುದಿಲ್ಲ. ಹಳ್ಳಿಯಲ್ಲಿರುವ ಜಾಗ, ಜಮೀನನ್ನು ಉಪಯೋಗಿಸಿ ಅವರು ಅಲ್ಲಿಯೇ ಒಳ್ಳೆಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಇದನ್ನು motivation ಮಾಡುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಇದನ್ನು ಶ್ರೀ. ಪುಟ್ಟಣ್ಣಯ್ಯರವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಇದು ಯುವಕರಿಗೆ ಸ್ಫೂರ್ತಿ ತರುವಂತಹ ಕಾರ್ಯಕ್ರಮವಾಗಿದೆ. ವಿಶೇಷವಾಗಿ, ನಮ್ಮ coastal belt ನಲ್ಲಿರುವಂತಹ ಶ್ರೀ. ವಿನಯ್‌ಕುಮಾರ್ ಸೊರಕೆಯವರಿದ್ದಾರೆ ವಿಶೇಷವಾಗಿ fishermanಗೆ free SIM card ಕೊಡುವಂತಹ ಒಂದು first time programme ಅನ್ನು ಈ ಸರ್ಕಾರ ಇವತ್ತು ತಂದಿದ್ದು, ಇದನ್ನು ನಾವು ಮೆಚ್ಚಲೇಬೇಕಾಗುತ್ತದೆ. ಏಕೆಂದರೆ ಮೀನುಗಾರರು ಮೀನನ್ನು ಹಿಡಿಯುವುದಕ್ಕೆ ಹೋದಾಗ ಅವರು ಸಂಪರ್ಕವನ್ನಿಟ್ಟುಕೊಳ್ಳುವುದಕ್ಕೆ ಬಹಳ ಅನುಕೂಲವಾಗುತ್ತದೆಂದು ಸಿಮ್ ಕಾರ್ಡ್ ಅನ್ನು free ಕೊಡುವುದು ಹಾಗೆ 3,000 ಮನೆಗಳನ್ನು ಕಟ್ಟಿಕೊಡುವಂತಹ ಒಳ್ಳೆಯ ಕಾರ್ಯಕ್ರಮವನ್ನು ಏರ್ಪಾಡು ಮಾಡಿದ್ದಾರೆ. ಬಹುಶಃ ಅದರ ಜೊತೆಯಲ್ಲಿ solar fencing, ಮಾನ್ಯ ಅಧ್ಯಕ್ಷರೆ ಇದನ್ನು ನೀವು ಒಪ್ಪಿಕೊಳ್ಳುತ್ತೀರಿ. ಆನೆಗಳ ಕಾಟ ಮಲೆನಾಡು, ಸಕಲೇಶಪುರ ಎಲ್ಲಾ ಕಡೆ ಇದೆ. ನನ್ನ ತೋಟದಲ್ಲಿಯೂ ಕೂಡ ಆನೆ ಕಾಟವಿದೆ. ಸರ್ಕಾರ 50% ಸಬ್ಸಿಡಿಯಲ್ಲಿ solar fencing ಅಳವಡಿಸಿ ಆನೆಗಳ ಕಾಟದಿಂದ ತಪ್ಪಿಸುವುದಕ್ಕೆ

ಒಂದು ಕಾರ್ಯಕ್ರಮವನ್ನು ರೂಪಿಸಿದ್ದಾರೆ ಇದನ್ನು ಕೂಡ ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ ಶ್ರೀ ಕುಮಾರಸ್ವಾಮಿಯವರು ಇಲ್ಲೇ ಇದ್ದಾರೆ Elephant Menace ನಿಮ್ಮ ಕ್ಷೇತ್ರದಲ್ಲಿ ಜಾಸ್ತಿಯಿದೆ. ಇದರಿಂದ ಸುಮಾರು ಜನ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಒಳ್ಳೆಯ ಕಾರ್ಯಕ್ರಮ ಬಜೆಟ್ ಮುಖಾಂತರ ಬಂದಿದ್ದು, ಇದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡರೆ ಒಳ್ಳೆಯದಾಗುತ್ತದೆ. ವಿಶೇಷವಾಗಿ ಮಹಿಳೆಯರಿಗೆ ಸುಮಾರು ಕಾರ್ಯಕ್ರಮಗಳಿವೆ. ಆದರೆ ವಿಶೇಷವಾದ ಕಾರ್ಯಕ್ರಮವೆಂದರೆ, 1.15 ಲಕ್ಷ ಮಹಿಳಾ ವಿದ್ಯಾರ್ಥಿಗಳು ಏಡೆಡ್ ಕಾಲೇಜುಗಳಿಗೆ ಕಟ್ಟುವ fee ಅನ್ನು reimburse ಮೂಲಕ ಪಡಯುವಂತಹ ಕಾರ್ಯಕ್ರಮವನ್ನು ಮಾಡಿದ್ದು, ಇದನ್ನು ಖಂಡಿತವಾಗಿ ನಾವು ಮೆಚ್ಚಲೇಬೇಕಾಗುತ್ತದೆ. ಏಕೆಂದರೆ ವಿಶೇಷವಾಗಿ ಮಹಿಳೆಯರು ವಿದ್ಯಾವಂತರಾಗಬೇಕು, ವಿದ್ಯಾಭ್ಯಾಸ ಅವರಿಗೆ ಸಿಗಬೇಕೆಂಬ ದೃಷ್ಟಿಯಿಂದ ಈ ಒಂದು ಕಾರ್ಯಕ್ರಮವನ್ನು ಸರ್ಕಾರ ಮಾಡಿದ್ದು, ಇದನ್ನೂ ಕೂಡ ನಾವು ಮೆಚ್ಚಲೇಬೇಕು. ಹಾಗೆ ವಿಶೇಷವಾಗಿ unemployed women, handicap ಗಳಿಗೆ 1,000 ರೂಪಾಯಿಗಳನ್ನು 10ನೇ ತರಗತಿ ಪಾಸಗಿರುವಂತಹ 5,000 ಜನರಿಗೆ ಕೊಡುವ ಕಾರ್ಯಕ್ರಮವನ್ನು ಮಾಡಿದೆ. ಹತ್ತು women Police Station ಗಳನ್ನು ರಾಜ್ಯದಲ್ಲಿ ತೆರೆಯುವ ಕಾರ್ಯಕ್ರಮವನ್ನು ಕೂಡ ಮಾಡುತ್ತಿದ್ದಾರೆ. ಬಹುಶಃ ಇದನ್ನು ಕೂಡ ನಾವು ಸ್ವಾಗತಿಸಬೇಕಾಗುತ್ತದೆ. ನಮ್ಮ UPA ಸರ್ಕಾರ ಮಹಿಳೆಯರಿಗೆ ಬ್ಯಾಂಕ್‌ಗಳನ್ನು ಕೂಡ ಕಳೆದ ಬಜೆಟ್‌ನಲ್ಲಿ announce ಮಾಡಿದ್ದಾರೆ. ಹೀಗೆ ಸುಮಾರು ಒಳ್ಳೆಯ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಮಾಡಿರುವುದು ಈ ಬಜೆಟ್‌ನಲ್ಲಿ ಬಂದಿದೆ. ವಿಶೇಷವಾಗಿ backward class ಗಳಾದ ಮಡಿವಾಳ ಸಮಾಜ, ಸವಿತಾ ಸಮಾಜ, ತಿಗಳ ಸಮಾಜದವರಿಗೆ ಎರಡು ಲಕ್ಷ ರೂಪಾಯಿಗಳ ಸಾಲ 2% ಬಡ್ಡಿ ದರದಲ್ಲಿ ಕೊಡುತ್ತಿರುವುದು ಒಳ್ಳೆಯದು. ಈ ಜನಾಂಗದವರು ನನ್ನ ಕ್ಷೇತ್ರದಲ್ಲಿದ್ದಾರೆ ಆದ್ದರಿಂದ ನಾನು ವೈಯಕ್ತಿಕವಾಗಿ ಈ ಕಾರ್ಯಕ್ರಮವನ್ನು

ಸ್ವಾಗತ ಮಾಡುತ್ತಿದ್ದೇನೆ. ಏಕೆಂದರೆ ಮಡಿವಾಳ ಸಮಾಜ, ಸವಿತಾ ಸಮಾಜ, ತಿಗಳ ಸಮಾಜದವರು ನನ್ನ ಕ್ಷೇತ್ರದಲ್ಲಿ ಸುಮಾರು ಜನರಿದ್ದಾರೆ. Minority Welfare ಗೆ ಈ ಸರ್ಕಾರ ಹೆಚ್ಚು ಹಣವನ್ನು ಕೊಟ್ಟಿದೆ. ಆದರೆ ಕೆಲವು ಕ್ಷೇತ್ರಗಳಿಗೆ ಹಣ ಕೊಟ್ಟಿರುವುದು ಸ್ವಲ್ಪ ಕಡಿಮೆಯಾಗಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. Allocation ಮಾಡಿರುವುದು 125 ಕೋಟಿ ರೂಪಾಯಿಗಳು. Renovation of Church and Christian institution ಗೆ ಕೊಟ್ಟಿದ್ದಾರೆ. ಇದು ಕೂಡ ಸ್ವಾಗತ ಮಾಡುವಂತಹ ಕಾರ್ಯಕ್ರಮವಾಗಿದೆ. ಸುಮಾರು ಚರ್ಚ್‌ಗಳಿಗೆ ಹಾಗೂ ಇತರೆ ಕ್ರಿಶ್ಚಿಯನ್ ಸಮುದಾಯಗಳಿಗೆ ಇದರಿಂದ ಅನುಕೂಲವಾಗುತ್ತದೆ. ಹಾಗೆಯೇ ನಮ್ಮ ಹಜ್ ಘರ್ ಗೆ 17 ಕೋಟಿ additional fund ಕೊಟ್ಟಿದ್ದಾರೆ. ಅದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ಈಗಾಗಲೇ ವಕ್ಫ್ ಆಸ್ತಿಯನ್ನು ಅವರು ಹೊಡೆದುಕೊಂಡರು ಇವರು ಹೊಡೆದುಕೊಂಡರೆಂದು ಎಲ್ಲಾ ಕಡೆ ಮಾತನಾಡುತ್ತಾರೆ. ಅದಕ್ಕೆ fence ಹಾಕಿ compound wall ಹಾಕುವುದಕ್ಕೆ 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ ಇದನ್ನು ಇನ್ನಷ್ಟು ಜಾಸ್ತಿ ಕೊಟ್ಟು ಎಲ್ಲಾ ವಕ್ಫ್ ಆಸ್ತಿಗೆ ಕಾಂಪೌಂಡ್ ಹಾಕಿ fence ಹಾಕಿಟ್ಟರೆ ಆ ಆನೆ ಕಾಟದ ರೀತಿಯಲ್ಲಿ ವಕ್ಫ್ ಆಸ್ತಿಯನ್ನು ಹೊಡೆಯುವುದು ಒಂದು ಕಾಟವಾಗಿದ್ದು, ಅದು ಕೂಡ ನಿಲ್ಲುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದು ಒಳ್ಳೆಯ ಕಾರ್ಯಕ್ರಮ. ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ 10 ಕೋಟಿ ರೂ.ಗಳನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕು. ಆಗ ವಕ್ಫ್ property protection ಆಗುತ್ತದೆ. ಅದು ಸರ್ಕಾರದ ಆಸ್ತಿ. ಅದನ್ನು ಕಾಪಾಡುವ ಕೆಲಸವಾಗುತ್ತದೆಂದು ಹೇಳಬಯಸುತ್ತೇನೆ. ಎಲ್ಲಾ ಜಿಲ್ಲೆಗಳಲ್ಲಿ Minority Welfare Officer ಗಳನ್ನು ತೆರೆಯುವ ಕಾರ್ಯಕ್ರಮವನ್ನು ಕೂಡ ಸನ್ಮಾನ್ಯ

ಮುಖ್ಯಮಂತ್ರಿಗಳು ಹೇಳಿದ್ದು, ಇದು ಸ್ವಾಗತಾರ್ಹ. ಇದರಿಂದ ಜಿಲ್ಲಾ ಮಟ್ಟದಲ್ಲಿ ಜನರಿಗೆ ಅನುಕೂಲವಾಗುತ್ತದೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಕಳೆದ ವರ್ಷ 8 ಕೋಟಿ ರೂ. ಇದ್ದಂತಹ Scholarship ಕಾರ್ಯಕ್ರಮವನ್ನು ಈ ವರ್ಷ 5 ಕೋಟಿ ರೂ.ಗಳಿಗೆ ಇಳಿಸಿದ್ದೀರಿ. ದಯಮಾಡಿ ಆ 8 ಕೋಟಿ ರೂ.ಗಳ ಜೊತೆಗೆ ಇನ್ನೂ 5 ಕೋಟಿ ರೂ.ಗಳನ್ನು ಸೇರಿಸಿ ಕೊಡಬೇಕಾಗುತ್ತದೆ. ಏಕೆಂದರೆ, ನಮ್ಮ ಮುಸ್ಲಿಂ ಅಲ್ಪಸಂಖ್ಯಾತರಲ್ಲಿ ಮಕ್ಕಳು ವಿಶೇಷವಾಗಿ ವಿದ್ಯಾಭ್ಯಾಸದಲ್ಲಿ ತುಂಬಾ ಹಿಂದುಳಿದಿರುವುದರಿಂದ ಈ ವರ್ಷ scholarship ಗೆಂದು 13 ಕೋಟಿ ರೂ.ಗಳನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದನ್ನು ಕಡಿಮೆ ಮಾಡಿರುವುದು ಸರಿಯಲ್ಲ ಎನ್ನುವುದನ್ನು ಕೂಡ ಹೇಳಲಿಚ್ಛಿಸುತ್ತೇನೆ. ಹಾಗೆ ಗಂಗಾ ಕಲ್ಯಾಣ ಯೋಜನೆಯೂ ಬಹಳ ಒಳ್ಳೆಯ ಕಾರ್ಯಕ್ರಮ. ಹಳ್ಳಿಯಲ್ಲಿರುವ ಅಲ್ಪಸಂಖ್ಯಾತರಿಗೆ ಗಂಗಾ ಕಲ್ಯಾಣ ಯೋಜನೆಯಿಂದ ತುಂಬಾ ಅನುಕೂಲವಾಗುತ್ತದೆ. ಇದು ಕಳೆದ ಬಾರಿ 44 ಕೋಟಿ ರೂ. ಇತ್ತು. ಆದರೆ ಈ ಬಾರಿ ನೀವು ಕೇವಲ 27 ಕೋಟಿ ರೂ. ಮಾಡಿದ್ದೀರಿ. ದಯಮಾಡಿ ಅದನ್ನೂ ಸಹ ಹೆಚ್ಚು ಮಾಡುವ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು. ಹಾಗೆ ಶ್ರಮ ಶಕ್ತಿ ಎಂದು loan ಕೊಡುತ್ತೀರಿ. ಒಬ್ಬ ವ್ಯಕ್ತಿಗೆ ಕೇವಲ 10 ಸಾವಿರ ರೂ.ಗಳನ್ನು ಮಾತ್ರ ಕೊಡುತ್ತೀರಿ. ಅದನ್ನು 50 ಸಾವಿರ ರೂ.ಗಳಿಗೆ ಏರಿಸಬೇಕು. ಇಂದು 10 ಸಾವಿರಕ್ಕೆ ಏನು ಬೆಲೆ ಇದೆ ಎನ್ನುವುದು ನಿಮಗೆ ಗೊತ್ತಿದೆ. ಆ ಅಲ್ಪ ಹಣದಿಂದ ಏನೂ ಕೂಡ ಆಗುವುದಿಲ್ಲ. ಆದುದರಿಂದ ಅದನ್ನು 50 ಸಾವಿರ ರೂ.ಗಳಿಗೆ ಏರಿಸಿ. ಲೋನ್ ಪಡೆದುಕೊಳ್ಳಬೇಕಾದರೆ ಒಬ್ಬ Government Employee ಯಿಂದ ಒಂದು guarantee ಬೇಕೆಂದು ಕಂಡಿಷನ್ ಹಾಕುತ್ತೀರಿ. ಈಗ ಯಾವ Government Employee ಗಳು ಸ್ವಂತ ಅಣ್ಣ-ತಮ್ಮಂದಿರಿಗೆ ಸಹಿ ಹಾಕುವುದಿಲ್ಲ. ಅಂತಹುದರಲ್ಲಿ ಬೇರೆಯವರಿಗೆ ಯಾರು ಸಹಿ ಹಾಕುತ್ತಾರೆ? ನೀವು ಲೋನ್ ಕೊಡಬೇಕು ಅಂದರೆ ಈ ಕಂಡೀಷನ್‌ನ್ನು

ತೆಗೆಯಬೇಕು. ಇಲ್ಲ ಅಂದರೆ ಲೋನ್ ಕೊಡುವುದಿಲ್ಲ ಎಂದು ಹೇಳಿ ಪರವಾಗಿಲ್ಲ. Government Employee ಯಾರಿಗೆ ಸಹಿ ಹಾಕುತ್ತಾರೆ? ಸರ್ಕಾರಿ ನೌಕರರು ಯಾರಿಗೂ ಸಹ ಗ್ಯಾರಂಟಿ ಹಾಕುವುದಿಲ್ಲ. ಆದ್ದರಿಂದ ಅದನ್ನು ತೆಗೆದು 10,000 ರೂ.ಗಳಿಂದ 50,000 ರೂ.ಗಳಿಗೆ ಮಾಡಬೇಕೆಂದು ಸದನದ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ. ಕರ್ನಾಟಕ ಮೈನಾರಿಟೀಸ್ ಡೆವೆಲಪ್‌ಮೆಂಟ್‌ಗೆ ಹೆಚ್ಚಿನ ಹಣವನ್ನು ಕೊಡುವ ಕೆಲಸ ಕೂಡ ಮಾಡಬೇಕು. ಅದೇ ರೀತಿಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಹಾಸ್ಟೆಲ್‌ಗಳಿಗೆ ಹಣವನ್ನು ಇಟ್ಟಿದ್ದು, ದಯವಿಟ್ಟು ಶಾದಿ ಮಹಲ್‌ಗೆ ಸಂಬಂಧಿಸಿದಂತೆ NGO's ಗಳಿಗೆ ಯಾವ ರೀತಿ ಹಣ ಕೊಡುತ್ತಿದ್ದೀರೋ ಅದೇ ರೀತಿಯಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಕ್ಕೆ ಅದೇ ರೀತಿ ಹಣವನ್ನು ಕೊಟ್ಟರೆ ಇದರಿಂದ ನಮ್ಮ ಜನಾಂಗಕ್ಕೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನರಲ್ ಆಗಿ ಡಿ.ಸಿ. ಅವರು ಎಲ್ಲಾ ಜನರಿಗೂ ಸೇರಿದಂತೆ ಹಾಸ್ಟೆಲ್ ಮಾಡುತ್ತಾರೆ. ಅದರಿಂದ ನಮ್ಮ ಜನಾಂಗಕ್ಕೆ ಅನುಕೂಲವಾಗುವುದಿಲ್ಲ. ಆದ್ದರಿಂದ ವಿಶೇಷವಾಗಿ ಶಾದಿ ಮಹಲ್ ಕೊಡುವ ರೀತಿಯಲ್ಲೇ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಕೊನೆಯದಾಗಿ ಹೇಳುವುದೇನೆಂದರೆ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಈ ವರ್ಷದ ಕೊನೆಯ ಕಂತು ಬಾಕಿಯಿದ್ದು ಅದನ್ನೂ ಸಹ ಕೊಡಬೇಕು. ಉರ್ದು ಶಾಲೆಗಳೇನಿವೆ ಅದರಲ್ಲಿ strength ಬಹಳ ಕಡಿಮೆಯಿದ್ದು, ಮಕ್ಕಳು ಓದಲಿಕ್ಕೆ ಬರುತ್ತಿಲ್ಲ. ಉರ್ದು ಶಾಲೆಗಳಲ್ಲಿ 6ನೇ ತರಗತಿಯಿಂದ ಇಂಗ್ಲಿಷ್ ಭಾಷೆಯನ್ನು ಕಲಿಸುವಂತಹ ಮತ್ತು ಇಂಗ್ಲಿಷ್ ಮೀಡಿಯಂಗೆ ಬದಲಾವಣೆ ಮಾಡುವ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು, ದಯವಿಟ್ಟು ಇದನ್ನು ನಾಲ್ಕನೇ ತರಗತಿಯಿಂದಲೇ ಜಾರಿಗೆ ತರಬೇಕು. ಇದರ ಜೊತೆಯಲ್ಲಿ ಉರ್ದು ಭಾಷೆಯನ್ನು ಬೇರೆ ಎಲ್ಲಾ ಶಾಲೆಗಳಲ್ಲೂ ಆ ಭಾಷೆಯನ್ನು language ಆಗಿ ಕೊಡುವ ಪ್ರಯತ್ನವನ್ನು ಮಾಡಬೇಕು. ಅದರಲ್ಲಿಯೂ ಕನ್ನಡ ಭಾಷೆಯ ಶಾಲೆಗಳಲ್ಲಿ ಉರ್ದು ಭಾಷೆಯನ್ನು ಕಲಿಸುವ

ಪ್ರಯತ್ನ ಮಾಡಿದರೆ, ನಮ್ಮ ಜನಾಂಗದ ಮಕ್ಕಳು ಕನ್ನಡ ಮೀಡಿಯಂನಲ್ಲಿ ಓದುವುದಕ್ಕೆ ಅವಕಾಶವಾಗುತ್ತದೆ. ಈ ಒಂದು ಕಾರ್ಯಕ್ರಮವನ್ನು ಮಾಡಬೇಕೆಂದು ಸದನದ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

Youth and Sports ಬಗ್ಗೆ ಹೇಳುವುದಾದರೆ, ಇದಕ್ಕೆ ಬಹಳಷ್ಟು ಪ್ರೋತ್ಸಾಹ ಕೊಟ್ಟಿದ್ದೀರಿ. ಆಟ ಆಡಿ ಗೆದ್ದವರಿಗೆ ಅಲ್ಲದೆ, ಆಟ ಆಡುವುದಕ್ಕೆ ಹೋದವರಿಗೂ ಕೂಡ ಪ್ರೋತ್ಸಾಹ ಧನವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೀರಿ. Participantsಗೂ ಕೂಡ ಇದು ಸ್ವಾಗತ ಮಾಡುವಂತಹ ಕಾರ್ಯಕ್ರಮ. ಅದೇ ರೀತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಗ್ರಾಮೀಣ ಕ್ರೀಡೋತ್ಸವ ಮಾಡುವುಕ್ಕೆ 1.5 ಲಕ್ಷ ರೂ.ಗಳನ್ನು ಕೊಟ್ಟಿರುವುದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಹಳೆಯ ಪೈಲ್ವಾನ್‌ರಿಗೆ 1,500 ರೂ.ಗಳನ್ನು ಕೊಡುವ ಜಾಗದಲ್ಲಿ ₹. 3,000 ರೂ.ಗಳನ್ನು ಮಾಡಿದ್ದಾರೆ. ಏಕೆಂದರೆ ಮೈಸೂರಿನಲ್ಲಿ ಪೈಲ್ವಾನರು ಜಾಸ್ತಿಯಿದ್ದಾರೆಂದು ಮಾನ್ಯ ಮುಖ್ಯಮಂತ್ರಿಯವರು ಈ ರೀತಿ ಮಾಡಿರಬಹುದೆಂದು ನಾನು ತಿಳಿದುಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ former football players ಬಹಳಷ್ಟು ಜನರಿರುವುದರಿಂದ ಅವರಿಗೂ ಸಹ ಪಿಂಚಣಿ ದೊರೆಯುವ ಸೌಲಭ್ಯವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಸದನದ ಮುಖಾಂತರ ಕೇಳಿಕೊಳ್ಳುತ್ತೇನೆ. ಏಕೆಂದರೆ Football ಆಟ ಆಡಿರುವವರು ಸಹ ಈಗ ಬಹಳ ಕಷ್ಟದಲ್ಲಿದ್ದಾರೆ.

ಬೆಂಗಳೂರು ನಗರಕ್ಕೆ ಸರ್ಕಾರವು ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟಿದೆ. ಬೆಂಗಳೂರು ನಗರದಲ್ಲಿ ನಾವೆಲ್ಲರೂ ಒಳ್ಳೆಯ ರಸ್ತೆಗಳಲ್ಲಿ ಓಡಾಡುತ್ತಿದ್ದೇವೆ. ಸುಮಾರು ಕಡೆ ರಸ್ತೆ ಕೆಲಸಗಳು ಆಗುತ್ತಿವೆ. ಬಿ.ಬಿ.ಎಂ.ಪಿ. ಗೆ ದುಡ್ಡನ್ನು ಕೊಟ್ಟಿದೀರಿ. ಆದರೂ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಏಕೆಂದರೆ ಬೆಂಗಳೂರು ನಗರವೊಂದೇ ಇಡೀ ರಾಜ್ಯದ

ರೆವಿನ್ಯೂ ಕಲೆಕ್ಷನ್‌ನಲ್ಲಿ ಹೆಚ್ಚು-ಕಡಿಮೆ 50% ನಷ್ಟು ತೆರಿಗೆಯನ್ನು ಕೊಡುತ್ತಾ ಇದೆ. ವಿಶೇಷವಾಗಿ 28ನೇ ತಾರೀಖಿನಂದು ಮೆಟ್ರೋದ ಎರಡನೇ ಹಂತದ ಮತ್ತು ಎರಡನೇ ಲೈನ್‌ನ inauguration ಹಾಗೂ ಸಂಪಿಗೆ ಮತ್ತು ಪೀಣ್ಯದ ಮಧ್ಯೆ ಇರುವ ಲೈನ್ ಅನ್ನು ಉದ್ಘಾಟನೆ ಮಾಡುತ್ತಿದ್ದಾರೆ. Airport ಗೆ ಹೋಗುವಂತಹ ಜಾಗದಲ್ಲಿ ನಿರ್ಮಿಸಿರುವ flyover ನಿಂದ ಬಹಳ ಅನುಕೂಲವಾಗಿದೆ. 164 ಎಕರೆಯಿರುವ ಬೆಗ್ಗರ್ಸ್ ಕಾಲೋನಿಯನ್ನು ಪಾರ್ಕ್ ಆಗಿ convert ಮಾಡುತ್ತಿರುವುದು ಬಹಳ ಸಂತೋಷ. ಕಂಠೀರವ ಸ್ಟೇಡಿಯಂನ್ನು upgradation ಮಾಡುತ್ತಿದ್ದೀರಿ. ನೀವು ಹಳ್ಳಿಯಲ್ಲಿ ದುಡ್ಡನ್ನು ಕೊಟ್ಟಿದ್ದೀರಿ. ಕಳೆದ ಸಾರಿ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು Blueprint ಮಾಡುತ್ತೇವೆಂದು ಹೇಳಿದ್ದೀರಿ. ಆದರೆ Blueprint ಕೆಲಸ ಏನೂ ನಡೆದಿಲ್ಲ, ಯಾವ ರೀತಿಯಲ್ಲಿ Blueprint ಆಗುತ್ತಿದೆಯೋ ಇಲ್ಲವೋ ಎಂದು ಗೊತ್ತಾಗುತ್ತಿಲ್ಲ. ಬಹುಶಃ ಬೆಂಗಳೂರು ನಗರಕ್ಕೆ Blueprint ಮಾಡಲೇಬೇಕು. ಯಾರಾದರೂ International Architect, ಇಲ್ಲವಾದರೆ ಹೆಸರುವಾಸಿಯಾದ ಒಳ್ಳೆಯ Architect companyಗೆ ಕೊಟ್ಟು ಬೆಂಗಳೂರು ನಗರಕ್ಕೆ Blueprint ಮಾಡಿಸಿದರೆ, ಬಹಳಷ್ಟು ಅನುಕೂಲವಾಗುತ್ತದೆ. ಹಾಗೆಯೇ, ಈ ಬಾರಿಯ ಬಜೆಟ್‌ನಲ್ಲಿ ಬೆಂಗಳೂರು ನಗರವನ್ನು tourist attraction place ಮಾಡಬೇಕೆಂದು ಹೇಳುತ್ತೀರಿ. ಆ ರೀತಿ ಮಾಡಬೇಕಾದರೆ 11.30 ಗಂಟೆಗೆ ಮುಚ್ಚುವಂತಹ ಬೆಂಗಳೂರನ್ನು ರಾತ್ರಿ ಒಂದು ಗಂಟೆಯವರೆಗೂ ತೆಗೆದಿಡುವ ಪ್ರಯತ್ನವನ್ನು ಮಾಡಬೇಕು. ಆದರೆ ನೀವು ಬೆಂಗಳೂರು ನಗರವನ್ನು 11.30 ಗಂಟೆಗೆ ಮುಚ್ಚುತ್ತೀರಿ. ಹೀಗಾದರೆ, Tourist ಎಲ್ಲಿಂದ ಬರುತ್ತಾರೆ? ಬಾರ್ ಅನ್ನು ಮುಚ್ಚಿ ಅದನ್ನು ತೆಗೆಯಬೇಡಿ. ಆದರೆ ಬಾಕಿ ಇರುವ ವ್ಯವಸ್ಥೆಯನ್ನು ಒಂದು ಗಂಟೆಯವರೆವಿಗೂ ವಿಸ್ತರಿಸಬೇಕು. ಏಕೆಂದರೆ ರಾತ್ರಿ ಸಮಯದಲ್ಲಿ ಬರುವಂತಹ touristಗಳಿಗೆ ಊಟ ಕೂಡ ಸಿಗದಿರುವಂತಹ ಪರಿಸ್ಥಿತಿ ಇವತ್ತು ಬೆಂಗಳೂರಿನಲ್ಲಿ ಇದೆ. ಬೆಂಗಳೂರು ನಗರದಲ್ಲಿ 24X7 ಜನ ಕೆಲಸ

ಮಾಡುತ್ತಾರೆ. ರಾತ್ರಿ ಕೆಲಸ ಮಾಡುವವರಿಗೆ ಏನೂ ಸಿಗುವುದಿಲ್ಲ. ಆದ್ದರಿಂದ, ಬೆಂಗಳೂರು ನಗರವನ್ನು ಒಂದು ಗಂಟೆಯವರೆಗೂ ತೆಗೆಯುವಂತಹ ಕೆಲಸವಾಗಬೇಕು. ಇದರ ಜೊತೆಯಲ್ಲಿ ನಿಮ್ಮ ಹಾಗೂ ನಮ್ಮೆಲ್ಲರ ಅನುಭವ ಏನೆಂದರೆ, trafficನಿಂದಾಗಿ ಎಲ್ಲಿ ಹೋಗುವುದಕ್ಕೂ ಸಮಯ ಸಾಕಾಗುತ್ತಾ ಇಲ್ಲ. ಆದ್ದರಿಂದ road widening ಮಾಡುವಂತಹ ಕೆಲಸ ತಾವು ಆದಷ್ಟು ಬೇಗ ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಸಾಕು, ಬಹಳ ಜನರು ಮಾತನಾಡುವವರು ಇದ್ದಾರೆ.

ಶ್ರೀ ಎನ್.ಎ. ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷ. Freedom fightersಗೆ ಆರು ಸಾವಿರದಿಂದ ಎಂಟು ಸಾವಿರದವರೆಗೆ pension ಅನ್ನು ಜಾಸ್ತಿ ಮಾಡಿರುವುದು ಬಹಳ ಸಂತೋಷ. ಹಾಗೆಯೇ journalistಗಳಿಗೆ ಮೂರು ಸಾವಿರ ಇದ್ದಂತಹ pension ಅನ್ನು ಆರು ಸಾವಿರ ಮಾಡಿದ್ದು, ಅದನ್ನು ಹತ್ತು ಸಾವಿರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ elelctronic mediaದಲ್ಲಿ ಕೆಲಸ ಮಾಡುವವರಿಗೂ ಕೂಡ ಈ pension ಕೊಡುವಂತಹ ಕೆಲಸವಾಗಬೇಕು. ಇದರ ಜೊತೆಗೆ ಬಹಳ ಮೆಚ್ಚುವಂತಹ ಕೆಲಸ ಮಾಡಿರುವುದೇನೆಂದರೆ ಕರ್ತವ್ಯದಲ್ಲಿರುವ ಪೊಲೀಸ್ ಅಧಿಕಾರಿಯು ಮರಣಗೊಂಡರೆ, ex-gratia amount ಅನ್ನು ಐದು ಲಕ್ಷ ರೂ.ಗಳಿಂದ ಮೂವತ್ತು ಲಕ್ಷ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೀರಿ. ಅದೇ category ಯಲ್ಲಿ forest guard, watch guards home guards, watchers fire force ನಲ್ಲಿರುವಂತಹವರು, KEB linemen, teachers, ಅಂಗನವಾಡಿ workers ಅನ್ನು ಕೂಡ ತಾವು ಇದರಲ್ಲಿ ಸೇರಿಸಬೇಕು. ಸರ್, ತಾವು ನನಗೆ ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ಸಾಕು. No., Thank you.

ಶ್ರೀ ಪಿ. ಸುಧಾಕರ್ ಲಾಲ್:– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯದ ಮೇಲೆ....

ಶ್ರೀ ಎನ್.ಎ. ಹ್ಯಾರಿಸ್:– Senior citizens ಗೆ pension ಅನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು:– ಪ್ಲೀಸ್, ಸಾಕು.. ಅವರು ಹೇಳುವುದನ್ನು ಬರೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು:– ನೀವು ಮಾಡನಾಡಿ.

ಶ್ರೀ ಪಿ.ಆರ್. ಸುಧಾಕರ್ ಲಾಲ್ (ಕೊರಟಗೆರೆ):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಧನ್ಯವಾದಗಳು.

ಶ್ರೀ ಎನ್.ಎ. ಹ್ಯಾರಿಸ್:– ಸರ್, ಎರಡು ನಿಮಿಷಗಳ ಕಾಲ ಸಮಯ ಕೊಡಿ.

ಅಧ್ಯಕ್ಷರು:– No, No, Please resume.

ಶ್ರೀ ಪಿ.ಆರ್. ಸುಧಾಕರ್‌ಲಾಲ್:– ಭಾರಿ ಮತ್ತು ಮಧ್ಯಮ ನೀರಾವರಿಯಲ್ಲಿ ಎತ್ತಿನ ಹೊಳೆ ಯೋಜನೆಯನ್ನು ಜಾರಿಮಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ನಾನಾದರೂ ಕೂಡ ಬಯಸುವುದೇನೆಂದರೆ, ಬಯಲುಸೀಮೆಯ ರೈತರ ಪರವಾಗಿ ಬಹಳಷ್ಟು ವರ್ಷಗಳಿಂದ Upper Bhadra ಯೋಜನೆ ಬರುತ್ತದೆಂದು ಹೇಳುತ್ತಿದ್ದರು. ಆದರೆ Upper Bhadra Project ಬರಲಿಲ್ಲ. ಇಂದು ಎತ್ತಿನ ಹೊಳೆ ಯೋಜನೆ ಬರುವ ನಿರೀಕ್ಷೆ ಏನಿದೆ, ಅದು ನಿಜವಾಗಿಯೂ ಬಯಲುಸೀಮೆಯ ರೈತರ ಬದುಕಿಗೆ ಒಂದು ಹೊಸ ಆಶಾಕಿರಣವನ್ನು ನೀಡುವಂತಹ ನಿಟ್ಟಿನಲ್ಲಿ ಈ ಯೋಜನೆ ಸರ್ಕಾರ ಕೈಗೆತ್ತಿಕೊಳ್ಳುವುದೇನಿದೆ ಅದು ಸಮರ್ಪಕವಾಗಿ

ಜಾರಿಯಾಗಬೇಕು ಎಂದು ಸದನದ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಸಣ್ಣ ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ಅಂತರ್ಜಲ ಕುಸಿದಿರುವ ಬಗ್ಗೆ ಗದಗ, ಬಿಜಾಪುರ, ಕೊಪ್ಪಳ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನೈಸರ್ಗಿಕ ನದಿ ಕೊಳ್ಳಗಳಿಗೆ ಅಡ್ಡಲಾಗಿ ಸರಣಿಯಲ್ಲಿ ಪಿಕಪ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ನಮ್ಮ ತುಮಕೂರು ಜಿಲ್ಲೆಯನ್ನು ಕೈಬಿಟ್ಟಿದ್ದು ಅದನ್ನು ಸೇರಿಸಿಕೊಳ್ಳಬೇಕು. ನಮ್ಮಲ್ಲೂ ಸಹ 1,000 ಅಡಿ ಕೊರೆದರೂ ನೀರು ಸಿಗುತ್ತಿಲ್ಲ. ಅಂತರ್ಜಲ ಬಹಳಷ್ಟು ಕುಸಿದಿರುವ ಪರಿಸ್ಥಿತಿ ಇರುವುದರಿಂದ ತುಮಕೂರು ಜಿಲ್ಲೆಯನ್ನು ಸೇರಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ, ನಮ್ಮಲ್ಲಿರುವ ಪದವಿ ಪೂರ್ವ ಕಾಲೇಜುಗಳಲ್ಲಿ ಕನಿಷ್ಠವಾಗಿರುವಂತಹ ಮೂಲಭೂತ ಸೌಕರ್ಯಗಳಿಲ್ಲ. 700–800–1000 ಜನ ಹೆಣ್ಣು ಮಕ್ಕಳಿರುವಂತಹ ಪದವಿ ಪೂರ್ವ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಶೌಚಾಲಯಗಳೇ ಸರಿಯಾಗಿಲ್ಲ. ಹಾಗಾಗಿ ಶೌಚಾಲಯಗಳ ನಿರ್ಮಾಣಕ್ಕೆ ಮೊದಲ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ICT ಯೋಜನೆಯನ್ನು ಜಾರಿಗೊಳಿಸುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದು ಅದನ್ನು ನಾನು ಸಹ ಸ್ವಾಗತ ಮಾಡುತ್ತೇನೆ. ಈ ಹಿಂದೆ, ಕಳೆದ 2–3 ವರ್ಷಗಳ ಹಿಂದಿನಿಂದ ಮಾಹಿತಿ ತಂತ್ರಜ್ಞಾನದಲ್ಲಿರುವ ಕಂಪ್ಯೂಟರ್ ಶಿಕ್ಷಣದ ಬಗ್ಗೆ ಸಂಪೂರ್ಣವಾಗಿ ನಮ್ಮ ಸರ್ಕಾರಗಳು ನಿರ್ಲಕ್ಷ್ಯ ಮಾಡಿದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ವಿಷಯದಲ್ಲಿ ಒಂದು ವಿಚಾರವನ್ನು ಸದನದ ಗಮನಕ್ಕೆ ತರಬಯಸುವುದೇನೆಂದರೆ, ಕಳೆದ ಎರಡು ವರ್ಷಗಳ ಹಿಂದೆ ಸುಮಾರು ಲಕ್ಷಾಂತರ ರೂ.ಗಳ ಮೌಲ್ಯದ ಬ್ಯಾಟರಿಗಳನ್ನು ಸಪ್ಲೈ ಮಾಡಿದರು. ಆದರೆ ಗಣಕಯಂತ್ರಗಳನ್ನು ಕೊಡಲಿಲ್ಲ.

ಈಗಾಗಲೇ ಬ್ಯಾಟರಿ ಮತ್ತು Xerox machineಗಳು ಸಂಪೂರ್ಣವಾಗಿ ಹಾಳಾಗಿದ್ದು, ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸದನದ ಮುಖಾಂತರ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದೇನೆಂದರೆ, 'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿಯನ್ನು ಹೇಳಿದ್ದಾರೆ. ನಮ್ಮ ಬಡ ಜನರು ಆರೋಗ್ಯವನ್ನು ಹುಡುಕಿಕೊಂಡು ತಾಲ್ಲೂಕು ಆಸ್ಪತ್ರೆಗಳಿಗೆ ಹೋದರೆ ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸುತ್ತಾರೆ. ಜಿಲ್ಲಾ ಆಸ್ಪತ್ರೆಗಳಿಗೆ ಹೋದರೆ ಬೆಂಗಳೂರಿಗೆ ಕಳುಹಿಸುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಜಿಲ್ಲಾ ಆಸ್ಪತ್ರೆಗೆ ಹೋದರೆ ಬೆಂಗಳೂರಿಗೆ ಹೋಗಿ ಎಂದು ಕಳುಹಿಸತಕ್ಕಂಥ ಪರಿಸ್ಥಿತಿಯನ್ನು ಇವತ್ತು ನಾವು ನೋಡುತ್ತಿದ್ದೇವೆ. ಯಾವ ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾಮಟ್ಟದಲ್ಲಿ ಆರೈಕೆಯನ್ನು ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಎಷ್ಟೋ ಜನರಿಗೆ ತಾಲ್ಲೂಕಿಗೆ ಬರಲು ಕಷ್ಟವಾಗುತ್ತಿದೆ. ಅಂತಹದ್ದರಲ್ಲಿ ಅವರನ್ನು ಜಿಲ್ಲಾ Headquarters ಗೆ ಕಳುಹಿಸುತ್ತಾರೆ. ಅಲ್ಲಿಂದ ಬೆಂಗಳೂರಿಗೆ ಹೋಗಿ ಎಂದರೆ ನಮ್ಮ ಜನಗಳಿಗೆ ಬಹಳ ಸಮಸ್ಯೆಯಾಗುತ್ತಿದೆ ಎನ್ನುವಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ವಿಶೇಷವಾಗಿ, ಇವತ್ತು ಪ್ರತಿ ಹಾಸ್ಪಿಟಲ್‌ನಲ್ಲೂ ಕೂಡ ventilators ಕೊರತೆಯಿದೆ. ಅದೇ ರೀತಿ dialysis machineಗಳ ಕೊರತೆ ಕೂಡ ಇದೆ. ಜೊತೆಗೆ ವಾಜಪೇಯಿ ಆರೋಗ್ಯಶ್ರೀ ಎನ್ನುವಂಥ ಕಾರ್ಯಕ್ರಮ ಏನಿದೆ ಆ ಕಾರ್ಯಕ್ರಮದಲ್ಲಿ ಹಲವಾರು ಖಾಯಿಲೆಗಳಿಗೆ ಉಚಿತವಾಗಿ ಚಿಕಿತ್ಸೆಯನ್ನು ಕೊಡುವ ಒಂದು ಯೋಜನೆ ಇದೆ. ಅತಿ ಮುಖ್ಯವಾಗಿ ಇವತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕ ಮಹಿಳೆಯರು ಗರ್ಭಕೋಶ ಖಾಯಿಲೆಯಿಂದ ಬಳಲುತ್ತಿದ್ದಾರೆ. ಹಾಗಾಗಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯಲ್ಲಿ ಗರ್ಭಕೋಶದಿಂದ ಬಳಲುತ್ತಿರುವ

ಹೆಣ್ಣುಮಕ್ಕಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನು ಆ ಯೋಜನೆಯಲ್ಲಿ ಸೇರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇವತ್ತು ಆಸ್ಪತ್ರೆಗಳಲ್ಲಿ ಔಷಧಿಗಳ ಸರಬರಾಜು ಸಮರ್ಪಕವಾಗಿ ಆಗುತ್ತಿಲ್ಲ. ಎಲ್ಲ ಆಸ್ಪತ್ರೆಗಳಿಗೆ ಸಮಾನವಾಗಿ ಹಂಚುತ್ತಿದ್ದಾರೆ. ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 20 ಲಕ್ಷ ರೂ.ಗಳ ಔಷಧಿಗಳನ್ನು ಕೊಡುತ್ತಿದ್ದಾರೆ. ಉದಾಹರಣೆಗೆ ಕೊರಟಗೇರಿ ಆಸ್ಪತ್ರೆಯಲ್ಲಿ 20 ಲಕ್ಷ ರೂ.ಗಳನ್ನು ಫಿಕ್ಸ್ ಮಾಡಿದ್ದಾರೆ. ಇವತ್ತಿನವರೆಗೂ ಅಲ್ಲಿ 13 ಲಕ್ಷ ರೂ.ಗಳ ಔಷಧಿಗಳನ್ನು ಮಾತ್ರ ಕೊಟ್ಟಿದ್ದಾರೆ. 8 ಲಕ್ಷ ರೂ.ಗಳ ಔಷಧಿಗಳನ್ನು ಇನ್ನೂ ಸರಬರಾಜು ಮಾಡಿಲ್ಲ. ಇವತ್ತಿನ ದಿವಸ ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲವೆಂದು ಹೇಳುತ್ತಿದ್ದೇವೆ. ಉದಾಹರಣೆಗೆ, ಕೊರಟಗೆರೆಯಲ್ಲಿ ಯುನಾನಿ ಆಯುಷ್ ಇಲಾಖೆಯ ಒಬ್ಬ ಡಾಕ್ಟರ್ ಇದ್ದಾರೆ. ಅವರನ್ನು ಕೇಳಿದರೆ ಸರ್, 2012ರಿಂದ ನಮಗೆ ಔಷಧಿ ಸರಬರಾಜು ಮಾಡಿಲ್ಲ ನಾನು ಏನು treatment ಅನ್ನು ಕೊಡಲಿ ಎಂದು ಹೇಳುತ್ತಾರೆ. 2012 ರಿಂದ ಯುನಾನಿಗೆ ಸಂಬಂಧಿಸಿದಂಥ ಔಷಧಿಯನ್ನು ಇವತ್ತು ಸರ್ಕಾರ supply ಮಾಡಿಲ್ಲ.

ಅಧ್ಯಕ್ಷರು:– ಮಾನ್ಯ ಜಯಚಂದ್ರರವರೇ, 2012 ರಿಂದ medicine supply ಇಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಸುಧಾಕರ್‌ಲಾಲ್ ರವರೆ, ಮತ್ತು repeat ಮಾಡಿ.

ಶ್ರೀ ಪಿ.ಆರ್. ಸುಧಾಕರ್‌ಲಾಲ್:– ಕೊರಟಗೆರೆಯಲ್ಲಿ ಆಯುಷ್ ವೈದ್ಯರಿದ್ದಾರೆ. ಆದರೆ, ಅವರಿಗೆ ಸಂಬಂಧಿಸಿದಂಥ ಯನಾನಿ ಔಷಧಿಯನ್ನು 2012ರಿಂದ supply ಮಾಡಿಲ್ಲ.

ಅಧ್ಯಕ್ಷರು:– ಆಯಿತು, ಮುಂದೆ ಮಾತನಾಡಿ.

ಶ್ರೀ ಪಿ.ಆರ್. ಸುಧಾಕರ್‌ಲಾಲ್:– ನಮ್ಮ ಆಸ್ಪತ್ರೆಗಳಲ್ಲಿ ಇವತ್ತು ಮೂಲಭೂತವಾಗಿರತಕ್ಕಂಥ ಹಲವಾರು ಸೌಕರ್ಯಗಳ ಅವಶ್ಯಕತೆಯಿದೆ.

ಆಯುಷ್ ಇಲಾಖೆಯ ಡಾಕ್ಟರ್‌ಗಳ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೇವಲ 13,000/- ರೂ.ಗಳ ವೇತನವನ್ನು ಕೊಡಲಾಗುತ್ತಿದೆ. ಅವರ ವೇತನವನ್ನು ಹೆಚ್ಚಿಗೆ ಮಾಡಬೇಕೆಂದು ನಾವು ಹೇಳುತ್ತೇವೆ. ಇವತ್ತು ಬಹಳ ಕಡೆಗಳಲ್ಲಿ ಡಾಕ್ಟರ್‌ಗಳು ಇಲ್ಲವೆಂದು ಹೇಳುತ್ತೇವೆ. ಆದರೆ, ಆಯಷ್ ಇಲಾಖೆಯವರು ಬಂದು ಕೆಲಸ ಮಾಡುತ್ತಿದ್ದಾರೆ. ಅವರಿಗೆ ವೇತನ ಕೇವಲ 13,000/- ರೂ.ಗಳು ಎಂದರೆ ಬಹಳ ಕಡಿಮೆಯಾಯಿತು. ಹಾಗಾಗಿ, ಅವರ ವೇತನವನ್ನು ಹೆಚ್ಚಿಗೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಮಾಜ ಕಲ್ಯಾಣ ಸಚಿವರನ್ನು ಅಭಿನಂದಿಸುತ್ತೇನೆ. ತುಮಕೂರಿನಲ್ಲಿ ತಾಂಡಾ ಅಭಿವೃದ್ಧಿ ನಿಗಮದ ಪ್ರಾದೇಶಿಕ ಕಛೇರಿ ಹಾಗೂ ಸಮುದಾಯ ಭವನಗಳ ನಿರ್ಮಾಣವನ್ನು ಮಾಡಲಿಕ್ಕೆ ಅನುದಾನವನ್ನು ಕೊಟ್ಟಿದ್ದಾರೆ. ಬಂಜಾರ ಸಮುದಾಯದ ಪ್ರಸಿದ್ಧ ಕೊಪ್ಪಳದ ಬಹದ್ದೂರ್ ಬಂಡಿ ಕ್ಷೇತ್ರದ ಅಭಿವೃದ್ಧಿಗಾಗಿ 75 ಕೋಟಿ ಅನುದಾನವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ.

ಸಮಾಜ ಕಲ್ಯಾಣ ಇಲಾಖೆಗೆ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಇಲಾಖೆಗಳಿಂದ ನಡೆಸುತ್ತಿರುವ ಹಾಸ್ಟೆಲ್‌ಗಳಿಗೆ food-grains supply ಮಾಡುವುದಿದೆ. Supply ಮಾಡತಕ್ಕಂಥ ಅಧಿಕಾರವನ್ನು ನಮ್ಮ self-help groups ಏನಿದೆ ಬಹುಶಃ ಮಹಿಳಾ ಸ್ವಸಹಾಯ ಸಂಘಗಳ ಮುಖಾಂತರವಾಗಿ ಕೊಡಿಸಿದರೆ ಮಹಿಳಾ ಸ್ವಸಹಾಯ ಸಂಘಗಳಿಗೆ ಕೂಡ ಆರ್ಥಿಕವಾಗಿ ಸಹಕಾರ ಮಾಡಿದಂತೆ ಆಗುತ್ತದೆ.

ಕ್ರೀಡಾ ಇಲಾಖೆಗೆ ಸಂಬಂಧಿಸಿದಂತೆ, ಒಲಂಪಿಕ್ಸ್‌ನಲ್ಲಿ ಗೆದ್ದವರಿಗೆ ಬಹುಮಾನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ 150 ರಿಂದ 180ರ ವರೆಗೆ ಕ್ರೀಡಾಂಗಣಗಳಿವೆ. ಆದರೆ ತರಬೇತುದಾರರ ಕೊರತೆಯಿದೆ ಎಂದು ನಾನು ಸದನದ ಗಮನಕ್ಕೆ ತರುತ್ತೇನೆ. ನಾವು ಮೂಲಭೂತವಾಗಿ ಅ ಒಂದು ಸೌಕರ್ಯವನ್ನು ಕೊಡದಿದ್ದರೂ, at least

ಒಂದು ತಾಲ್ಲೂಕಿನಲ್ಲಿರತಕ್ಕಂಥ ಒಂದು ಕ್ರೀಡಾಂಗಣಕ್ಕೆ ಒಬ್ಬ ತರಬೇತುದಾರ, ಒಂದು Gymnasium ಆದರೂ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಅತಿ ಮುಖ್ಯವಾಗಿ, RDPR ಇಲಾಖೆ ಏನಿದೆ ಆ ಇಲಾಖೆಯಲ್ಲಿ ಪ್ರಪ್ರಥಮವಾಗಿ ಇವತ್ತು ಸುಮಾರು 15ರಿಂದ 18 ವರ್ಷಗಳಿಂದ ಯಾವುದೇ ಸರ್ಕಾರ, ಸಚಿವರು ನಮ್ಮ ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಆದ್ಯತೆಯನ್ನು ಕೊಟ್ಟಿರಲಿಲ್ಲ. ಆದರೆ, ಇವತ್ತು ಒಂದು ಕಿ.ಮೀ.ಗೆ 30–54 head ನಲ್ಲಿ 10,000/–ರೂ.ಗಳ maintenance of roadಗೆಂದು ಕೊಟ್ಟಿದ್ದಾರೆ ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತಾ, ಈ 10,000/- ರೂ.ಗಳಲ್ಲಿ ನಾವು ರಸ್ತೆಗಳ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಆದುದರಿಂದ ಕನಿಷ್ಠ ಕಿ.ಮೀ.ಗೆ 40,000/– ರೂ.ಗಳಿಗೆ ಏರಿಗೆ ಮಾಡಬೇಕೆಂಬ ಪ್ರಸ್ತಾವನೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಸರ್ಕಾರಿ ಸ್ವಾಮ್ಯದ ಬಹಳ ಪ್ರತಿಷ್ಠಿತವಾದಂಥ ಮೈಸೂರು ಲ್ಯಾಂಪ್ಸ್ ಸಂಸ್ಥೆ ಏನಿದೆ ಆ ಸಂಸ್ಥೆ ಉತ್ತಮವಾದಂಥ ಬಲ್ಬ್‌ಗಳನ್ನು ನೀಡತಕ್ಕಂಥ ಕೆಲಸವನ್ನು ಮಾಡಿಕೊಂಡು ಬಂದಿದೆ. ಇವತ್ತು ಗ್ರಾಮ ಪಂಚಾಯಿತಿಗಳಲ್ಲಿ ಬಲ್ಬ್‌ಗಳ ಖರೀದಿಯನ್ನು ನಾವು ಮಾಡುತಿದ್ದೇವೆ. ಬೇರೆ ಬೇರೆ ಕಂಪನಿಗಳಿಂದ ಖರೀದಿ ಮಾಡುವುದಕ್ಕಿಂತ ನಮ್ಮ ಮೈಸೂರು ಲ್ಯಾಂಪ್ಸ್ ಸಂಸ್ಥೆ ಮೂಲಕ ಖರೀದಿ ಮಾಡಿದರೆ ಬಹುಶಃ ಸಂಸ್ಥೆಗೆ ಕೂಡ ಲಾಭ ಬರುತ್ತದೆ. ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೂ ಸಹಾಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ನಾವು ಉದ್ಯೋಗ ಖಾತರಿ ಯೋಜನೆಯಲ್ಲಿ ಶೌಚಾಲಯಗಳ ನಿರ್ಮಾಣವಾಗಬೇಕೆಂದು ಹೇಳುತ್ತಿದ್ದೇವೆ. ಆದರೆ, ಇವತ್ತು ಜನರು ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡು 2–3 ತಿಂಗಳಾದರೂ ಅವರಿಗೆ ಇವತ್ತಿನವರೆಗೂ ಹಣ ಬಿಡುಗಡೆಯಾಗಿಲ್ಲ.

ಅಧ್ಯಕ್ಷರು:- ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಹಣ ಬಿಡುಗಡೆಯಾಗಬೇಕಾಗಿತ್ತು?

ಶ್ರೀ ಪಿ.ಆರ್. ಸುಧಾಕರ್‌ಲಾಲ್:- ಮಾನ್ಯ ಅಧ್ಯಕ್ಷರೆ, ₹. 35 ಲಕ್ಷ ಬಿಡುಗಡೆಯಾಗಬೇಕಾಗಿತ್ತು. ₹. 35 ಲಕ್ಷ ಎರಡು ತಿಂಗಳಿನಿಂದ ಪೆಂಡಿಂಗ್ ಇದೆ. ಹಾಗಾಗಿ, ನಾವು ಎಲ್ಲ ಕಡೆ ಹೋದಂಥ ಸಂದರ್ಭದಲ್ಲಿ ಶೌಚಾಲಯ ಪ್ರತಿ ಮನೆಯಲ್ಲೂ ಇರಬೇಕೆಂದು ಒಂದು ಕಡೆ ಹೇಳಿಕೊಂಡು ಬರುತ್ತೇವೆ. ಆದರೆ, ಅವರು ನಮಗೆ ಪ್ರಶ್ನೆಯನ್ನು ಮಾಡುತ್ತಾರೆ ತಾವು ಹಣವನ್ನು ಕೊಡಿಸುವುದಿಲ್ಲ, ನಾವು ಎಲ್ಲಿಂದ ಶೌಚಾಲಯಗಳನ್ನು ಕಟ್ಟಿಸಿಕೊಳ್ಳೋಣವೆಂದು ಹೇಳುತ್ತಾರೆ. ಈ ರೀತಿ ಪರಿಸ್ಥಿತಿ ಇದೆ, ಆದುದರಿಂದ, ಆ ಹಣವನ್ನು ಬಿಡುಗಡೆ ಮಾಡಿಸಬೇಕು. ಜೊತೆಯಲ್ಲಿ ಅರಣ್ಯ ಇಲಾಖೆಯಿಂದ ಕೂಡ ಸಸಿ ನೆಟ್ಟ ರೈತರಿಗೆ 2 ತಿಂಗಳಿನಿಂದ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿಲ್ಲವೆಂಬ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು:- 2 ತಿಂಗಳಿನಿಂದ ಕೂಲಿಗಾರರಿಗೆ ಹಣ ಬಿಡುಗಡೆಯಾಗಿಲ್ಲವೆ?

ಶ್ರೀ ಪಿ.ಆರ್. ಸುಧಾಕರ್‌ಲಾಲ್:- ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಹಣ ಬಿಡುಗಡೆಯಾಗಿಲ್ಲ. ಅವರು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೆಲಸ ಮಾಡಿರುತ್ತಾರೆ.

ಅಧ್ಯಕ್ಷರು:- ಮಾನ್ಯ ಜಯಚಂದ್ರರವರೆ, ಇದರ ಬಗ್ಗೆ ಸ್ವಲ್ಪ ಗಮನ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ:- ಅಧ್ಯಕ್ಷರೆ, ಮೊನ್ನೆ ದಿವಸ ನಾನು, ಮಾನ್ಯ ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಸಚಿವರು ಹೋದಂಥ ಸಂದರ್ಭದಲ್ಲಿ ಕೇಂದ್ರ ಸಚಿವರನ್ನು ನೋಡಿ edit option ಎಂದು ಇದೆ. ಆ edit option ಗೆ permission ತೆಗೆದುಕೊಂಡು ಬಂದಿದ್ದೇವೆ. Edit option ಗೆ permission ಅನ್ನು ದೇಶದಲ್ಲಿ ಎಲ್ಲೂ ಕೊಟ್ಟಿಲ್ಲ. ಬಹುಶಃ ನಮ್ಮ ರಾಜ್ಯಕ್ಕೆ ಕೊಟ್ಟಿರುವ ಹಿನ್ನಲೆಯಲ್ಲಿ ಬಾಕಿಯಿರುವ ಎಲ್ಲ ಹಣ ಬಿಡುಗಡೆಯಾಗುತ್ತದೆ. ಯಾವುದೇ ತೊಂದರೆ ಆಗುವುದಿಲ್ಲ. 200 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವು.

ಆ ಹಣವೆಲ್ಲವೂ ಕೂಡ exhaust ಆಗಿದೆ. ರಾಜ್ಯ ಬಜೆಟ್‌ನಿಂದ ರಾಜ್ಯ ಸರ್ಕಾರದಿಂದಲೂ ಹಣ ಬಿಡುಗಡೆಯಾಗಿದೆ. ಅದು exhaust ಆಗಿದೆ. ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೆಂಬ ಕಾರಣಕ್ಕಾಗಿ ಸ್ವಲ್ಪ ತೊಂದರೆಯಾಗಿದೆ. ಅದನ್ನು ಬಿಟ್ಟರೆ ಹಣ ಬರುವುದರಲ್ಲಿ ಯಾವುದೇ ತೊಂದರೆಯಿಲ್ಲ. Records ಎಲ್ಲ update ಆಗಿದೆ, ಎಂ.ಬಿ.ನಲ್ಲಿ ರೆಕಾರ್ಡ್ ಆಗಿದೆ. ದುಡ್ಡಿಗೇನೂ ತೊಂದರೆ ಆಗುವುದಿಲ್ಲ. ಅವರು ಹೇಳುತ್ತಿರುವಂತಹದ್ದು 2 ತಿಂಗಳಿನಿಂದ ಬರಬೇಕಾದ ಹಣಕ್ಕೆ ಏನೂ ತೊಂದರೆ ಇಲ್ಲ. ಅದು ಬರುತ್ತದೆ.

ಶ್ರೀ ಪಿ.ಆರ್. ಸುಧಾಕರ್‌ಲಾಲ್:– ಅಧ್ಯಕ್ಷರೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ನನ್ನ ಕ್ಷೇತ್ರದಲ್ಲಿ ವಸಂತನರಸಾಪುರ ಎಂಬ ಒಂದು Industiral area ದಲ್ಲಿ K.I.A.D.B. ಯವರು land acquisition ಮಾಡಿಕೊಂಡು ಕಳೆದ 4 ವರ್ಷಗಳಿಂದ ಸುಮಾರು ಆರು ಸಾವಿರ ಎಕರೆಯನ್ನು acquire ಮಾಡಿದ್ದಾರೆ. ಆದರೆ ಇವತ್ತಿನವರೆಗೂ ಕೂಡ ಸಂಪೂರ್ಣವಾದ ಹಣ ಅವರಿಗೆ ಬಿಡುಗಡೆಯಾಗಿಲ್ಲ. ಕೇವಲ ಜಮೀನಿನ ಹಣ ಕೊಟ್ಟಿದ್ದಾರೆ. ಬೆಳೆದಿರತಕ್ಕ ಮರಗಿಡಗಳ ಹಣವನ್ನು ಇದುವರೆಗೂ ಕೊಟ್ಟಿಲ್ಲ. ನಾವು ಏಕೆ ಹಣ ಕೊಟ್ಟಿಲ್ಲವೆಂದು ಕೇಳಿದ ಸಂದರ್ಭದಲ್ಲಿ ನಮ್ಮ ತುಮಕೂರಿನಲ್ಲಿ ಆರು ಸಾವಿರ ಎಕರೆ ಪ್ರದೇಶವನ್ನು land acquisition ಮಾಡಿಕೊಳ್ಳುತ್ತಾರೆ ಅಲ್ಲಿ ಇವತ್ತು SLAO Office ಕೂಡ ಇಲ್ಲ. ಯಾವುದೇ ರೈತ ತನಗೆ ಬರಬೇಕಾಗಿರುವ ಹಣವನ್ನು ಕೇಳಲು ಬೆಂಗಳೂರಿಗೆ ಬರಬೇಕು. ಹಾಗಾಗಿ ದಯವಿಟ್ಟು ತಾವು ಸರ್ಕಾರಕ್ಕೆ ನಿರ್ದೇಶನವನ್ನು ಕೊಡಬೇಕು. ತುಮಕೂರಿನಲ್ಲೇ ಒಂದು SLAO ಆಫೀಸ್ ಅನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿ ಕೇಳುತ್ತಿದ್ದೇನೆ.

ಈಗಾಗಲೇ ಸುಮಾರು industries ಪ್ರಾರಂಭವಾಗಿದೆ. ಏನಾಗಿದೆಯೆಂದರೆ ಅಲ್ಲಿ ಲ್ಯಾಂಡ್ ಇದೆ, ಆದರೆ ಅಲ್ಲಿ ಪೊಲೀಸ್ ಔಟ್ ಪೋಸ್ಟ್ ಆಗಲಿ, ಆಸ್ಪತ್ರೆಯಾಗಲಿ, ಕೆಎಸ್‌ಆರ್‌ಟಿಸಿ ಬಸ್ ಸಹ ಬರುತ್ತಿಲ್ಲ. ಕೆಲಸ ಮಾಡುತ್ತಿರುವಂಥ ನಮ್ಮ ಎಲ್ಲಾ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತಿದೆ.

ಒಳಾಡಳಿತಕ್ಕೆ ಸಂಬಂಧಪಟ್ಟಂತೆ ನಾನದರೂ ಸಹ ಪ್ರಪ್ರಥಮವಾದ ಅಧಿವೇಶನದಲ್ಲಿ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆದಿದ್ದೆ. 10 ವರ್ಷ ಮತ್ತು 14 ವರ್ಷ ಜೈಲುವಾಸವನ್ನು ಪೂರೈಸಿರುವಂಥ ಖೈದಿಗಳಿಗೆ ಬಿಡುಗಡೆ ಮಾಡುವಂಥ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿದ್ದೆನು. ಅಂದು ಮಾನ್ಯ ಗೃಹ ಸಚಿವರು ಆಗಸ್ಟ್-15ಕ್ಕೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಅದೂ ಸಹ ಆಗಲಿಲ್ಲ. ಜನವರಿ 26 ಬಂದು ಹೋಯಿತು, ಅಂದೂ ಸಹ ಬಿಡುಗಡೆ ಭಾಗ್ಯ ಆಗಲಿಲ್ಲ. ಹಾಗಾಗಿ ಬಹಳಷ್ಟು ಜನ ಬಹಳ ನಿರೀಕ್ಷೆಯಿಂದ ಸರ್ಕಾರವನ್ನು ನೋಡುತ್ತಿದ್ದಾರೆ. ಹಿಂದೆ ನಮ್ಮ ಶ್ರೀಯುತ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಸುಮಾರು 600 ಜನ ಖೈದಿಗಳಿಗೆ ಬಿಡುಗಡೆಯನ್ನು ಮಾಡಿಸಿದ್ದರು. ಅದೇ ರೀತಿ ಸರ್ಕಾರ ಈ ನಿಟ್ಟಿನಲ್ಲಿ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಕಡೆಯದಾಗಿ, ಇವತ್ತು Right to Education ಎಂದು ಹೇಳುತ್ತಿದ್ದೇವೆ, ಆದರೆ ಅದಕ್ಕೆ accountable ಯಾರಾಗುತ್ತಾರೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಪ್ರತಿಯೊಂದು ಮಗುವಿಗೂ ಸಹ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆಂದು ಹೇಳುತ್ತೇವೆ. ಆದರೆ ಇಂದೂ ಸಹ ಶಾಲೆಗೆ ಹೋಗದೇ ಇರುವಂಥ ಬಹಳಷ್ಟು ಜನ ಮಕ್ಕಳನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ಈ ವಿಚಾರದಲ್ಲಿ ಯಾರನ್ನು accountable ಮಾಡಬೇಕು ಎನ್ನುವುದನ್ನು ಕೇಳುತ್ತಿದ್ದೇನೆ.

ಅದೇ ರೀತಿ Food Security Bill ಸಹ ಇದೆ. ಪ್ರತಿಯೊಬ್ಬರಿಗೂ ಆಹಾರದ ಭದ್ರತೆ ಬಗ್ಗೆ ಹೇಳುತ್ತೇವೆ. ಆದರೆ, ಯಾವುದೋ ಒಂದು ಹಳ್ಳಿಗೆ ಹೋದಂಥ ಸಂದರ್ಭದಲ್ಲಿ ಆ ಹಳ್ಳಿಯಲ್ಲಿರುವಂಥ ವಯಸ್ಸಾದವರೊಬ್ಬರು ಹೇಳುತ್ತಾರೆ, ಸ್ವಾಮಿ ನನಗೆ ಗಂಡ ಇಲ್ಲ, ಮಕ್ಕಳು ಇಲ್ಲ, ಕಾರ್ಡು ಸಹ ಇಲ್ಲ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ, ಅದಕ್ಕೂ ಸಹ ಯಾರನ್ನೂ accountable ಮಾಡುತ್ತಿಲ್ಲ. ಹಾಗಾಗಿ ಯಾವುದೇ ಬಿಲ್ ಪಾಸಾದರೂ ಸಹ ಅದರ ಜೊತೆಯಲ್ಲಿ ಅದಕ್ಕೆ ಸಂಬಂಧಪಟ್ಟಂತೆ accountability ಸಹ

ಇರಬೇಕೆನ್ನುವಂಥ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಶ್ರೀ ಗೋಪಾಲ್ ಪೂಜಾರಿ, ಈಗ ಹೆಚ್ಚು ಸಮಯವಿಲ್ಲ, ದಯವಿಟ್ಟು 10 ನಿಮಿಷಗಳ ಕಾಲ ಮಾತ್ರ ಮಾತನಾಡಿ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯವನ್ನು ಬೆಂಬಲಿಸುತ್ತಾ ನಾನು ವಿಶೇಷವಾಗಿ ನಮ್ಮ ಸರ್ಕಾರ ಬಂದ ಮೇಲೆ ಅನೇಕ ಹೊಸ ಯೋಜನೆಗಳನ್ನು ತರುವ ಮೂಲಕ ಸಮಾಜದ ಅತ್ಯಂತ ಎಲ್ಲಾ ವರ್ಗದ ಜನರಿಗೆ ನ್ಯಾಯವನ್ನು ಒದಗಿಸಿ ಕೊಡವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಬಹಳ ವಿಶೇಷವಾಗಿ ಸುಮಾರು 7 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಂಥ ಪಡಿತರ ವ್ಯವಸ್ಥೆ, ಬಹುಶಃ ಜನ ನಮ್ಮ ಸರ್ಕಾರದ ಮೇಲೆ ಭರವಸೆಯನ್ನು ಇಟ್ಟುಕೊಂಡಿರುವಂಥ ಸಂದರ್ಭದಲ್ಲಿ, ಈ 8 ತಿಂಗಳ ಅವಧಿಯೊಳಗೆ ಮೊದಲ ಕೆಲಸವಾಗಿ ನಮ್ಮ ಸರ್ಕಾರ ದಿಟ್ಟ ನಿಲುವನ್ನು ತೆಗೆದುಕೊಂಡು ಪಡಿತರ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸಮಾಜದ ಕಟ್ಟಕಡೆಯಲ್ಲಿರುವಂಥ ಜನರಿಗೆ ವಿಶ್ವಾಸ ಮೂಡಿಸುವಂಥ ಕೆಲಸವನ್ನು, ಪಡಿತರ ವ್ಯವಸ್ಥೆಯನ್ನು ಸರಿಪಡಿಸುವಂಥ ಕೆಲಸಕ್ಕೆ ಮೊದಲ ಆದ್ಯತೆಯನ್ನು ನೀಡಿರುವಂಥ ನಮ್ಮ ಸರ್ಕಾರಕ್ಕೆ ವಿಶೇಷವಾದ ಗೌರವ ಸಲ್ಲಬೇಕಾಗುತ್ತದೆ.

ಪಡಿತರ ವ್ಯವಸ್ಥೆಯಡಿಯಲ್ಲಿ ಅತ್ಯಂತ ಯಶಸ್ವಿಯಾದಂಥ "ಅನ್ನಭಾಗ್ಯ" ಕಾರ್ಯಕ್ರಮವನ್ನು ಜಾರಿಗೆ ತರುವುದರ ಮೂಲಕ ಸುಮಾರು ಒಂದು ಕೋಟಿ ಬಡ ಕುಟುಂಬದವರಿಗೆ ತಮ್ಮ ಹಕ್ಕನ್ನು ಪಡೆಯುವಲ್ಲಿ ಹಾಗೂ ಹಸಿವನ್ನು ನೀಗಿಸುವಲ್ಲಿ ನಮ್ಮ ಸರ್ಕಾರ ಯಶಸ್ವಿಯಾಗಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಸುಮಾರು ₹. 1,368 ಕೋಟಿಗಳ ಸಾಲವನ್ನು ಮನ್ನಾ ಮಾಡುವುದರ ಮೂಲಕ ಸಮಾಜದ

ಕಟ್ಟಕಡೆಯಿರುವಂಥ ಜನರಿಗೆ ನ್ಯಾಯವನ್ನು ಒದಗಿಸಿ ಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡಿದ್ದೇನೆ ಬಹಳ ಜನ ಪರಿಶಿಷ್ಟ ವರ್ಗದವರಿರುವಂಥ LAMP Society, ಈ ರಾಜ್ಯದ ಸುಮಾರು 7 ಭಾಗದಲ್ಲಿ ಈ LAMP Society ಇದೆ. ಅವರು ಕಾಡು ಭಾಗದಲ್ಲಿರುವಂಥ ಜನರು LAMP Socielty ಯಲ್ಲಿ ಸಾಲವನ್ನು ತೆಗೆದುಕೊಂಡು, ಮರುಪಾವತಿ ಮಾಡಲು ಆಗದೇ ಇರುವಂಥ ಪರಿಸ್ಥಿತಿಯಿದೆ. ಆ LAMP Societyಯ ಸಾಲವನ್ನು ಮನ್ನಾ ಮಾಡಿದರೆ, ಸಮಾಜದ ಅತ್ಯಂತ ಪರಿಶಿಷ್ಟ ವರ್ಗದ ಜನರಿಗೆ ನ್ಯಾಯವನ್ನು ಒದಗಿಸಿಕೊಟ್ಟಂತೆ ಆಗುತ್ತದೆ. ಸಾಲವನ್ನು ಮರುಪಾವತಿ ಮಾಡದೆ ಇರುವ ಕಾರಣದಿಂದ LAMP Society ಮುಳುಗುವ ಹಂತದಲ್ಲಿದೆ, ಆ ಸೊಸೈಟಿಯನ್ನು ಉಳಿಸಬೇಕಾದರೆ ನಮ್ಮ ಸರ್ಕಾರ ಆ ಜನರಿಗೆ ಸಹಾಯವನ್ನು ಮಾಡುವಂಥ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಈ ಸದನದ ಮೂಲಕ ನಾನು ಮುಖ್ಯಮಂತ್ರಿಯವರಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ.

ಬಹಳ ವಿಶೇಷವಾಗಿ, 'ಕುಟೀರ ಜ್ಯೋತಿ'. 'ಭಾಗ್ಯ ಜ್ಯೋತಿ' ಕೊಡುವ ಮೂಲಕ ಅತ್ಯಂತ ಸಣ್ಣ ಸಣ್ಣ ಕಾಲೋನಿಗಳಲ್ಲಿ ವಾಸಿಸುವಂಥ ಜನರಿಗೆ ಬೆಳಕು ಚೆಲ್ಲುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಹಿಂದಿನ ಸರ್ಕಾರ ಕರೆಂಟ್ ಬಿಲ್ ಪಾವತಿ ಮಾಡದವರ ಮೀಟರ್‌ಗಳನ್ನು ಸ್ಥಗಿತಗೊಳಿಸಿತ್ತು. ನಮ್ಮ ಮುಖ್ಯಮಂತ್ರಿಗಳು ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಆ ಆಶ್ವಾಸನೆಯನ್ನು ಈಡೇರಿಸುವಂಥ ಕೆಲಸಕ್ಕೆ ಸುಮಾರು ₹. 319 ಕೋಟಿ ಬಿಲ್ ಅನ್ನು ಪಾವತಿಸುವುದರ ಮೂಲಕ ಸಮಾಜದ ಅತ್ಯಂತ ಕಟ್ಟಕಡೆಯ ಜನರ ಮನೆಯಲ್ಲಿ ಬೆಳಕನ್ನು ಬೆಳಗಿಸುವ್ರುದರ ಮೂಲಕ ಒಂದು ಒಳ್ಳೆಯ ಕಾರ್ಯಕ್ರಮವನ್ನು ಈ ಆಯವ್ಯಯದಲ್ಲಿ ನಮ್ಮ ಸರ್ಕಾರ ಮಾಡಿದೆ.

ಇನ್ನೂ ಹೆಚ್ಚಾಗಿ ಒಂದು ದೊಡ್ಡ ಕಾರ್ಯಕ್ರಮ, ಬಹುಶಃ ಕನ್ನಡ ಶಾಲೆಗೆ ಹೋಗುವ ಮಕ್ಕಳೆಂದರೆ ಬಡ ವರ್ಗದ ಮಕ್ಕಳು. ಆ ಬಡ ವರ್ಗದ ಮಕ್ಕಳ ಆರೋಗ್ಯದ ದೃಷ್ಟಿಯಿಂದ, ವಿದ್ಯಾಭ್ಯಾಸದ ದೃಷ್ಟಿಯಿಂದ ವಾರದಲ್ಲಿ 3

ದಿನ "ಕ್ಷೀರಭಾಗ್ಯ" ಯೋಜನೆಯನ್ನು ಕೊಡುವ ಮೂಲಕ ಆ ಮಕ್ಕಳ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಕ್ಷೀರಭಾಗ್ಯ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ವಾರದಲ್ಲಿ 3 ದಿನಗಳ ಬದಲಿಗೆ 5 ದಿನಗಳೂ ಸಹ ಹಾಲನ್ನು ಕೊಡುವ ಕೆಲಸಕ್ಕೆ ಸರ್ಕಾರ ಮುಂದೆ ಬರಬೇಕು ಮತ್ತು ಆ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಬಹುಶಃ ಇನ್ನೂ ಅನೇಕ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಮಾಡಿದೆ. ಬೇರೆ ಬೇರೆ ರೀತಿಯಲ್ಲಿ ರೈತರಿಗೆ ನೀಡುತ್ತಿದ್ದ 2 ಲಕ್ಷ ರೂ.ಗಳವರೆಗೆ ಬಡ್ಡಿ ರಹಿತ ಸಾಲವನ್ನು 3 ಲಕ್ಷಕ್ಕೆ ಹೆಚ್ಚಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ರೈತರು ಇವತ್ತು ಕಷ್ಟದಲ್ಲಿರುವಂಥ ಸಂದರ್ಭದಲ್ಲಿ ಯಾವ ಚುನಾವಣಾ ಪ್ರಣಾಳಿಕೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರೋ, ಅದರಲ್ಲಿ ವಿಶ್ವಾಸವನ್ನಿಡುವಂಥ ಕೆಲಸವಾಗಿ 3 ಲಕ್ಷದವರೆಗೂ ಬಡ್ಡಿ ರಹಿತ ಸಾಲವನ್ನು ಕೊಡುವುದರ ಜೊತೆಗೆ ಸುಮಾರು 10 ಲಕ್ಷದವರೆಗೂ ರೈತರಿಗೆ 3% ಬಡ್ಡಿ ದರದಲ್ಲಿ ಸಾಲ ಕೊಡುವುದಕ್ಕೆ ನಮ್ಮ ಸರ್ಕಾರ ಮುಂದೆ ಬಂದಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ವಿಶೇಷವಾಗಿ ಅಂಗನವಾಡಿ ಕಾರ್ಯಕರ್ತರಿಗೆ ಪ್ರೋತ್ಸಾಹಧನ ಕೊಡುವುದರ ಮುಖಾಂತರ ಅಂಗನವಾಡಿ ಕಾರ್ಯಕರ್ತರು ಸರ್ಕಾರಿ ನೌಕರರ ಮಾದರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಯಾವುದೇ ಕೆಲಸವನ್ನು ಅಂಗನವಾಡಿ ಕಾರ್ಯಕರ್ತರಿಗೆ ಕೊಟ್ಟರೆ ಅದನ್ನು ಯಶಸ್ವಿಯಾಗಿ ನಿರ್ವಹಿಸುವುದನ್ನು ಮನಗಂಡ ನಮ್ಮ ಮುಖ್ಯಮಂತ್ರಿಯವರು ಅವರ ಗೌರವಧನವನ್ನು ಹೆಚ್ಚು ಮಾಡುವಂಥ ಕೆಲಸವನ್ನು ಮಾಡಿದ್ದಾರೆ.

ಬಡತನ ರೇಖೆಗಿಂತ ಕೆಳಗಿರುವಂಥ ಜನರಿಗೆ "ರಾಜೀವ್ ಗಾಂಧಿ ಆರೋಗ್ಯ ವಿಮಾ ಯೋಜನೆ" ಎನ್ನುವಂಥ ಒಳ್ಳೆಯ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮತ್ತು ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳು ವಿದ್ಯೆಯಲ್ಲಿ ವಂಚಿತರಾಗಬಾರದೆನ್ನುವ ದೃಷ್ಟಿಯಲ್ಲಿ "ವಿದ್ಯಾಸಿರಿ" ಎನ್ನುವಂಥ ಹೊಸ ಯೋಜನೆಯನ್ನು ತರುವುದರ ಮೂಲಕ

ಮಕ್ಕಳಿಗೆ ಶೈಕ್ಷಣಿಕ ಒತ್ತನ್ನು ನೀಡುವಂಥ ಕೆಲಸವನ್ನು ನಮ್ಮ ಮುಖ್ಯಮಂತ್ರಿಯವರು ಮಾಡಿದ್ದಾರೆ.

ಇದಕ್ಕಿಂತ ಹೆಚ್ಚಾಗಿ ಗ್ರಾಮ ಪಂಚಾಯಿತಿಯಲ್ಲಿ ಕೂಲಿ ಕೆಲಸ ಮಾಡುತ್ತಿರುವವರೂ ಸಹ reservation systemನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ, ಗ್ರಾಮ ಪಂಚಾಯಿತಿ ಸಭೆಯಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿದೆ. ಆ ಮೂಲಕ ಜನರನ್ನು ಭೇಟಿಯಾಗಿ ಗ್ರಾಮಸಭೆಗಳನ್ನು ನಡೆಸಬೇಕೆನ್ನುವ ದೃಷ್ಟಿಯಲ್ಲಿ ಅವರ ಪ್ರೋತ್ಸಾಹಧನವನ್ನು ಹೆಚ್ಚಿಸುವುದಕ್ಕೆ ನಮ್ಮ ಸರ್ಕಾರ ಒತ್ತನ್ನು ಕೊಟ್ಟಿದೆ.

ಮಹಿಳಾ ಸಹಕಾರಿಗಳಿಗೆ "ಪ್ರಿಯದರ್ಶಿನಿ" ಎನ್ನುವಂಥ ಹೊಸ ಯೋಜನೆಯನ್ನು ತಂದು ಮಹಿಳಾ ಸಹಕಾರ ಸಂಘಗಳಿಗೆ ಒತ್ತನ್ನು ಕೊಡುವುದರ ಜೊತೆಗೆ ಈ ಸಹಕಾರಿ ಸಂಘಗಳಿಗೆ ಹೆಚ್ಚು ಸದಸ್ಯತ್ವದ ಅವಕಾಶವನ್ನು ಕೊಡಬೇಕು. ಏಕೆಂದರೆ, ಸಹಕಾರಿ ಸಂಸ್ಥೆಗಳು ಒಂದು ಹಿಡಿತದಲ್ಲಿದೆ. ಆ ಹಿಡಿತದಿಂದ ಬಿಡಿಸಬೇಕಾದರೆ ಕಡ್ಡಾಯ ನೀತಿಯಾಗಬೇಕು. ಯಾರು ಸಹಕಾರಿ ಸಂಸ್ಥೆಯಲ್ಲಿ ಸದಸ್ಯತ್ವನ್ನು ಕೇಳುತ್ತಾರೋ, ಅವರಿಗೆ ಸದಸ್ಯತ್ವ ಅವಕಾಶವನ್ನು ಕಾನೂನಿನಡಿಯಲ್ಲಿ ಕೊಡಲೇಬೇಕೆನ್ನುವ ರೀತಿಯಲ್ಲಿ ಕಾನೂನನ್ನು ರೂಪಿಸಬೇಕೆಂಬ ಒತ್ತಾಯವನ್ನು ಮಾಡುವುದಕ್ಕೆ ಈ ಸಂದರ್ಭದಲ್ಲಿ ಇಚ್ಛೆಪಡುತ್ತೇನೆ.

ವಿಶೇಷವಾಗಿ, ವಿಕಲಚೇತನ ಬಹುಶಃ ನಮ್ಮ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇಂದು ಹಳ್ಳಿಯಲ್ಲಿ ಈ ವಿಚಾರವಾಗಿ ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ಅನೇಕ ಸಮಸ್ಯೆಗಳು ಈ ವಿಚಾರದಲ್ಲಿದೆ. ಇದಕ್ಕೆ ಎಲ್ಲಾ ಮೂಲಭೂತ ಸೌಕರ್ಯವನ್ನು ಕೊಡುವುದರ ಮೂಲಕ ಸರ್ಕಾರದ ಮೇಲೆ ವಿಶ್ವಾಸ ಮೂಡಿಸುವುದಕ್ಕಾಗಿ "ಆಶಾ ಕಿರಣ" ಎನ್ನುವಂಥ ಹೊಸ ಯೋಜನೆಯನ್ನು ತರುವಂಥ ಕೆಲಸವನ್ನು ಮಾಡಿದ್ದಾರೆ.

ಕೃಷಿ ಮಾರುಕಟ್ಟೆಗೋಸ್ಕರ "ಗ್ರಾಹಕ ಮಾರಾಟ ಅಂಗಳ" ಎನ್ನುವಂಥ ಯೋಜನೆಯನ್ನು ಮಾಡಿದ್ದಾರೆ. ಇವತ್ತು ತಮಗೆ ಗೊತ್ತಿದೆ, ಇಂಥ ಕೃಷಿಕರ

ಬಾಳು ಸುಗಮವಾಗಬೇಕಾದರೆ ಎಲ್ಲಾ ರೀತಿಯ ಸಹಾಯವನ್ನು ಮಾಡಬೇಕೆನ್ನುವ ಒತ್ತಾಯವನ್ನು ಮಾಡಿ, ನಾನು ವಿಶೇಷವಾಗಿ ಕುರಿ-ಮೇಕೆಗಳು ಸತ್ತರೆ, 3 ರಿಂದ 5 ಸಾವಿರ ಹಣ ಕೊಡುವಂಥ ಹಾಗೂ ಮೀನುಗಾರರಿಗೆ "Slim Card" ಕೊಡುವಂಥದ್ದು, ವಿಶೇಷವಾಗಿ ಮೀನುಗಾರರಿಗೆ "ಮತ್ಸ್ಯಾಶ್ರಯ ಯೋಜನೆ" ಮುಖಾಂತರ ಸುಮಾರು 3000 ಮನೆಗಳ ಯೋಜನೆ ಕೊಟ್ಟಿದ್ದೀರಿ. ಆದರೆ ಇದು ಸಾಕಾಗುವುದಿಲ್ಲ. ಇಡೀ ರಾಜ್ಯಕ್ಕೆ 3000 ಮನೆ ಕೊಟ್ಟರೆ ಇದರಿಂದ ಏನೂ ತೃಪ್ತಿಪಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಶಾಸಕರಾಗಿ ಆಯ್ಕೆಯಾಗಬೇಕಾದರೆ ಬಹಳ ಕಷ್ಟವಿದೆ. ಆದ್ದರಿಂದ ಈ ಯೋಜನೆಗೆ ಹೆಚ್ಚು ಒತ್ತನ್ನು ಕೊಡಬೇಕೆನ್ನುವ ದೃಷ್ಟಿಯಿಂದ ನಮ್ಮ ಮೀನುಗಾರಿಗೆ ಇಲಾಖೆ ಬಹಳ ವಿಶೇಷವಾಗಿ ನಮ್ಮ ಕ್ಷೇತ್ರದ ಉಪ್ಪುಂದ ಗ್ರಾಮದ ಮಡಿಕಳ ಬಳಿ outer harbourನ್ನು ಮಾಡುವಂಥ ಕೆಲಸ ಈ ಆಯವ್ಯಯದಲ್ಲಿ ಆಗಿದೆ. ನಾನು ವಿಶೇಷವಾಗಿ ನನ್ನ ಕ್ಷೇತ್ರದ ಜನತೆಯ ಪರವಾಗಿ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೇಂದ್ರ ಸರ್ಕಾರದಿಂದ ಗಂಗೊಳ್ಳಿಯಲ್ಲಿ ಸುಮಾರು ₹. 102 ಕೋಟಿಯ outer harbourಗೆ ಅನುಮತಿ ದೊರಕಿದೆ. ಇದು ನಮ್ಮ ಸರ್ಕಾರದ ಒಂದು ದೊಡ್ಡ ಕಾರ್ಯಕ್ರಮ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದಲ್ಲದೆ, ಮೀನುಗಾರರಿಗೆ ಸುಮಾರು 223 ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದುದ್ದನ್ನು 300 ಲೀಟರ್‌ಗೆ ಹೆಚ್ಚಿಗೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಮೀನುಗಾರಿಕೆಯಲ್ಲಿ ಅನೇಕ ಸಮಸ್ಯೆಗಳಿವೆ. ಮೀನುಗಾರಿಕೆ ಇಲಾಖೆಗೆ ಕೇವಲ 221 ಕೋಟಿ ರೂ.ಗಳನ್ನು ಮಾತ್ರ ನೀಡಲಾಗಿದೆ. ರಾಜ್ಯದಲ್ಲಿ ಯಾವುದಾದರೂ ಇಲಾಖೆ ಸರ್ಕಾರಕ್ಕೆ ಲಾಭ ತಂದು ಕೊಡುತ್ತದೆ ಎನ್ನುವುದಾದರೆ ಅದು ಮೀನುಗಾರಿಕಾ ಇಲಾಖೆ. ಮೀನುಗಳನ್ನು ವಿದೇಶಗಳಿಗೆ ರಫ್ತು ಮಾಡುವ ಮೂಲಕ ಸರ್ಕಾರ ಕೊಟ್ಟಿರುವ ಹಣವನ್ನು ಮರುಪಾವತಿ ಮಾಡುವಂತಹ ಇಲಾಖೆ ಎಂದರೆ ಅದು ಮೀನುಗಾರಿಕಾ ಇಲಾಖೆ. ಇಡೀ ನಾಲ್ಕು ಕರಾವಳಿ ಭಾಗದಲ್ಲಿ ಮೀನುಗಾರಿಕಾ ರಸ್ತೆಗಳು ಹೊಂಡ ಮುಚ್ಚಿರುವ ಪರಿಸ್ಥಿತಿ ಇದೆ. 229 ಕೋಟಿಯಲ್ಲಿ ಸಂಬಳ ಕೊಟ್ಟರೆ at least 30 ಕೋಟಿ

ರಸ್ತೆ ಮುಚ್ಚಲು ಸಹ ಬರುವುದಿಲ್ಲ. 30 ಕೋಟಿ ನಮಗೆ ಸಿಗುವುದಿಲ್ಲ ವೆಚ್ಚ ತಗ್ಗಿದ ಮೇಲೆ. ಈ ಇಲಾಖೆಗೆ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಏಕೆಂದರೆ ಕರಾವಳಿ ಭಾಗದ ಜನರಿಗೆ ವಿಶ್ವಾಸವನ್ನು ಮೂಡಿಸಬೇಕಾಗುತ್ತದೆ. ಆದುದರಿಂದ 229 ಕೋಟಿ ರೂ.ಗಳ ಬದಲಿಗೆ at least 500 ಕೋಟಿ ರೂ.ಗಳನ್ನಾದರೂ ಕೊಡಬೇಕು. ನಾನು ನೋಡಿದ್ದೇನೆ. ಹಿಂದಿನ ಸರ್ಕಾರಗಳು ಮಂಡಿಸಿರುವ ಬಜೆಟ್ ಅನ್ನು ತೆಗೆಸಿ ನೋಡಿದೆ. ಅದನ್ನು ತುಲನೆ ಮಾಡಿದರೆ ಮೀನುಗಾರಿಕಾ ಇಲಾಖೆ ಒಂದು ನಿರ್ಲಕ್ಷ್ಯ ಇಲಾಖೆ. ಈ ಇಲಾಖೆಗೆ ಸರ್ಕಾರದಿಂದ ಯಾವುದೇ ರೀತಿಯ ಸಹಾಯ ಹಸ್ತ ಬರುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಕ್ಷಣೆಗೆ ಬರಬೇಕು. ಈ ಇಲಾಖೆಗೆ ಹೆಚ್ಚು ಕಾಯಕಲ್ಪ ಕೊಡುವ ಮೂಲಕ ಸಹಾಯ ಮಾಡುವ ಕೆಲಸ ಮಾಡಬೇಕು. ಮೀನುಗಾರಿಕಾ ಉತ್ಪನ್ನ ಈಗ ಸ್ವಲ್ಪ ಕಡಿಮೆಯಾಗಿದೆ. 857 ಕೋಟಿ ರೂ.ಗಳ ಉತ್ಪಾದನೆ ಇದ್ದಂತಹುದು ಇಂದು 737 ಕೋಟಿ ರೂ.ಗಳಿಗೆ ಇಳಿದಿದೆ ಎಂದರೆ ಬಹುಶಃ ಈ ಇಲಾಖೆಗೆ ಹೆಚ್ಚು ಒತ್ತನ್ನು ಕೊಡಬೇಕು. ಕರಾವಳಿ ಭಾಗದ ಜನರ ಬಹಳ ದೊಡ್ಡ ನೋವು ಎಂದರೆ CRZ ಸಮಸ್ಯೆ ಕೇರಳ ಮತ್ತು ಗೋವಾದಿಂದ ಸಮೀಕ್ಷೆ ಮಾಡಬೇಕು. ಕೇರಳದಲ್ಲಿ ಮತ್ತು ಗೋವಾದಲ್ಲಿ 50 ಮೀಟರ್‌ಗೆ CRZ ಕಾನೂನನ್ನು ಸಡಲೀಕರಣ ಮಾಡಿದ್ದಾರೆ. ನಮ್ಮಲ್ಲಿ CRZ-1, CRZ-2, CRZ-3, 200 ಮೀಟರ್‌ಗಳವರೆಗೆ ಮನೆ ಕಟ್ಟಲು ಬರುವುದಿಲ್ಲ. ಮನೆ ರಿಪೇರಿಗೆ ಅವಕಾಶ ಕೊಡುತ್ತಿಲ್ಲ. ನಾನು ಕೇಳುವುದಿಷ್ಟೆ. CRZ ಭಾಗದಲ್ಲಿ ದೊಡ್ಡ ದೊಡ್ಡ ಉದ್ಯಮಗಳು ಬರಬಾರದು, ಸಮುದ್ರ ಮಾಲಿನ್ಯವಾಗಬಾರದೆಂಬ ಉದ್ದೇಶದಿಂದ ಈ CRZ ನಿಯಮ ಮಾಡಿದ್ದಾರೆ. ಆದರೆ ಈ ನಿಯಮದಿಂದ ಮೀನುಗಾರರಿಗೆ ಮನೆ ಕಟ್ಟಲು ತೊಂದರೆಯಾಗುತ್ತಿದೆ. ಮನೆ ರಿಪೇರಿ ಮಾಡಿಕೊಳ್ಳಲಾಗುತ್ತಿಲ್ಲ. ವಿದ್ಯುತ್ ವ್ಯವಸ್ಥೆ ಕಲ್ಪಿಸುತ್ತಿಲ್ಲ. ನೀವು ರಸ್ತೆಗೆ acquire ಮಾಡಿ ಹಣ ಕೊಡುತ್ತೀರಿ, ಡ್ಯಾಮ್ ಮಾಡಲು acquire ಮಾಡಿದರೆ ಹಣ ಬಿಡುಗಡೆ ಮಾಡುತ್ತೀರಿ, ನಮ್ಮ ಜಾಗಕ್ಕೆ ನೀವು ಮನೆ ಕಟ್ಟಲು ಬಿಡುತ್ತಿಲ್ಲ. ವಿದ್ಯುತ್ ಪಡೆದುಕೊಳ್ಳಲು ಕೊಡುತ್ತಿಲ್ಲ. ನಾವು ಸರ್ಕಾರವನ್ನು ಕೇಳುವುದಿಷ್ಟೆ. ಒಂದು ವೇಳೆ ನಮಗೆ ಮನೆ

ಕಟ್ಟಲು ನೀವು ಅವಕಾಶ ಕೊಡುವುದಿಲ್ಲವೆನ್ನುವುದಾದರೆ, ನಮ್ಮ ಮನೆಗಳನ್ನು ರಿಪೇರಿ ಮಾಡಿಕೊಳ್ಳಲು ಬಿಡುವುದಿಲ್ಲವೆಂದರೆ ಸರ್ಕಾರ ನಮ್ಮ ಮನೆಗಳನ್ನು acquire ಮಾಡಿ, ಮಾರುಕಟ್ಟೆ ದರವನ್ನು ನಮಗೆ ಕೊಡಿ. ನಾವು ಸಮುದ್ರದ ಬದಿಯನ್ನು ಬಿಟ್ಟು ಮೇಲೆ ಹೋಗಿ ವಾಸಿಸುತ್ತೇವೆ. ಆದರೆ CRZ ನಿಯಮವನ್ನು ಸಡಲೀಕರಣ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ ಈ ನಿಯಮವನ್ನು ಸಡಲೀಕರಣ ಮಾಡಿ. ಯಾರು ಮನೆಯಿಲ್ಲದೆ ಕುಳಿತಿದ್ದಾರೆ ಅವರಿಗೆ ರಿಪೇರಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಅವರಿಗೆ ವಿದ್ಯುತ್ ಕೊಡಲು ಪಂಚಾಯಿತಿಗೆ ನಿರ್ದೇಶನ ಕೊಡಬೇಕು. ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟರೆ ಯಾವುದೇ ಪಂಚಾಯಿತಿಯವರು ಮನೆ ಕಟ್ಟಲು, ಮನೆ ರಿಪೇರಿ ಮಾಡಲು ಅನುಮತಿ ಕೊಡುವುದಿಲ್ಲ. ಒಂದು ಕುಟುಂಬ divide ಆದರೆ ಪಕ್ಕದಲ್ಲಿ ಮನೆ ಕಟ್ಟಿಕೊಳ್ಳಲು ಅವಕಾಶವಿಲ್ಲ. ಆ ಮೀನುಗಾರರು ಎಲ್ಲಿಗೆ ಹೋಗುವುದು ನೀವೇ ಹೇಳಿ. ಸಮುದ್ರದ ಪಕ್ಕದಲ್ಲಿ ದೋಣಿಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆದುದರಿಂದ ತಮ್ಮ ಬಳಿ ನನ್ನ ವಿನಂತಿ ಇಷ್ಟೆ. ಈ CRZ ನಿಯಮವನ್ನು ಸಡಿಲೀಕರಣ ಮಾಡಿ ಅವರಿಗೆ ನ್ಯಾಯವನ್ನು ಒದಗಿಸಬೇಕು. ಒಂದು ವೇಳೆ ಕೊಡದಿದ್ದರೆ ಅವರಿಗೆ ಬೇರೆ ಜಾಗದ ವ್ಯವಸ್ಥೆ ಮಾಡಿ, ಅವರಿಗೆ ನ್ಯಾಯವನ್ನು ಒದಗಿಸಬೇಕು. ಇನ್ನೂ ವಿಶೇಷವಾಗಿ ಮೀನುಗಾರರ ಸೀಗಡಿ ಕೃಷಿ. ಕರಾವಳಿ ಭಾಗದ ಜನರ ಸೀಗಡಿ ಕೃಷಿಯ ಬಗ್ಗೆ ತಮಗೆ ಗೊತ್ತಿದೆ. ಇದೊಂದು ಕೃಷಿ ಉದ್ಯಮ. ಈ ಆಯವ್ಯಯದಲ್ಲಿ ಕೃಷಿಗೆ ಎಷ್ಟು ಬೆಂಬಲ ಬೆಲೆಯನ್ನು ಕೊಟ್ಟಿದ್ದೀರಿ, ನಾವು ಕೇಳುವುದು ಈ ಸೀಗಡಿ ಕೃಷಿಯನ್ನು ಉಳಿಸಬೇಕು. ಸರ್ಕಾರಕ್ಕೆ ಇದರಿಂದ tax ಬರುತ್ತದೆ. ಏಕೆಂದರೆ ಇದನ್ನು ರಫ್ತು ಮಾಡುತ್ತೇವೆ. ಈ ಸೀಗಡಿಯನ್ನು ನಾವು ಉಪಯೋಗಿಸುವುದಿಲ್ಲ. ಹೊರ ದೇಶಕ್ಕೆ ಕಳುಹಿಸುತ್ತೇವೆ. ಹೊರ ದೇಶದಿಂದ ಹಣ ನಮಗೆ ಹರಿದು ಬರುತ್ತದೆ. ಆದುದರಿಂದ ಕೃಷಿಕರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವಂತೆ ಸೀಗಡಿ ಕೃಷಿಗೂ ಒತ್ತನ್ನು ಕೊಡಬೇಕು. ಸೀಗಡಿ ಕೃಷಿಗೆ ಬೆಂಬಲ ಕೊಟ್ಟಾಗ ಹಳ್ಳಿಯ ಜನರು ಹೆಚ್ಚು ವಲಸೆ ಬರುವುದಿಲ್ಲ. ತಮ್ಮ ತಮ್ಮ ಜಾಗದಲ್ಲಿ ಸೀಗಡಿ

ಕೃಷಿಯನ್ನು ಮಾಡುವುದರ ಮೂಲಕ ಅವರಿಗೆ ಸ್ವ ಉದ್ಯೋಗ ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ಕೆಲಸವನ್ನು ಸರ್ಕಾರ ಮಾಡಬೇಕು. ನನ್ನ ವಿನಂತಿ ಇಷ್ಟೆ. ಇಂದು ಸಮಾಜ ಕಲ್ಯಾಣ ಇಲಾಖೆಯವರು ಬಹಳಷ್ಟು ಸಹಾಯ ಹಸ್ತವನ್ನು ಕೊಟ್ಟಿದ್ದಾರೆ, ಕೊಡಲಿಲ್ಲವೆಂದು ನಾನು ಹೇಳುವುದಿಲ್ಲ. ಇವತ್ತು ವಿಶೇಷವಾಗಿ ಆಶ್ರಮ ಶಾಲೆ, ಆಶ್ರಮ ಶಾಲೆಯಲ್ಲಿ ಓದುವ ಮಕ್ಕಳು ಯಾರು? ಆಶ್ರಮ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳಿಗೆ ಮೊದಲು ಆದ್ಯತೆ ಕೊಡಬೇಕು. ಶ್ರೀಮಂತ ವರ್ಗದವರು ಆಂಗ್ಲ ಮಾಧ್ಯಮ ಶಾಲೆಗಳಿಗೆ ಹೋಗುತ್ತಾರೆ. ಆಶ್ರಮ ಶಾಲೆಗಳಿಗೆ ಹೋಗುವವರು ಎಸ್.ಸಿ/ಎಸ್.ಟಿ ವರ್ಗದ ಮಕ್ಕಳು, ಬಡವರ್ಗದ ಮಕ್ಕಳು. ಕಷ್ಟದಲ್ಲಿರುವಂತಹ ಮಕ್ಕಳು ಆಶ್ರಮ ಶಾಲೆಗಳಿಗೆ ಹೋಗುತ್ತಾರೆ. ಅವರ ಊಟದ ವ್ಯವಸ್ಥೆಯ ಬಗ್ಗೆ ಇಲಾಖೆ ಸಮೀಕ್ಷೆ ಮಾಡಬೇಕು. ಅವರಿಗೆ ಯಾವ ರೀತಿಯ ಊಟ ಹಾಕಲಾಗುತ್ತಿದೆ, ಯಾವ ರೀತಿ ರಕ್ಷಣೆ ಮಾಡುತ್ತಿದ್ದೇವೆಂದು ಗಮನಿಸುವ ಮೂಲಕ ಅವರ ಕಾಳಜಿಯನ್ನು ವಹಿಸಿ ಹೆಚ್ಚು ಒತ್ತನ್ನು ಕೊಡಬೇಕು. ಹೆಚ್ಚು ಶಿಕ್ಷಕರ ನೇಮಕಾತಿಯಾಗಬೇಕು. ಅವರನ್ನು ಮುಖ್ಯವಾಹಿನಿಗೆ ತರಬೇಕು. ತಾವು (ಸಭಾಧ್ಯಕ್ಷರು) ಸಮಾಜ ಕಲ್ಯಾಣ ಸಚಿವರು ಇದ್ದಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ಕೊರಗ ಸಮಾಜದವರು ಇದ್ದಾರೆ, ಅವರಿಗೆ ಜಾಗವನ್ನು ಸರ್ಕಾರ ಖರೀದಿ ಮಾಡಿ ಮನೆ ಕಟ್ಟಿ, ಅವರಿಗೆ ಸೂರು ಕೊಡುವ ಕೆಲಸವನ್ನು ತಾವು ಮಾಡಿದಿರಿ. ಆ ಕೆಲಸ ಮಾಡಿ ಎಷ್ಟು ವರ್ಷಗಳಾಯಿತು? ಆ ಕೆಲಸ ಇಂದು ನೆನೆಗುದಿಗೆ ಬಿದ್ದಿದೆ. ಅವರು ಕಾಡಿನಲ್ಲಿ ವಾಸಿಸುವ ಕೊರಗ ಸಮಾಜದವರಿರಬಹುದು, ಎಸ್.ಸಿ/ಎಸ್.ಟಿ. ಸಮಾಜದವರು ಇರಬಹುದು, ಅವರಿಗೆ ಯಾವುದೇ ರೀತಿಯ ನ್ಯಾಯವನ್ನು ಒದಗಿಸಿಕೊಡುವುದಕ್ಕೆ, ಅವರನ್ನು ಮುಖ್ಯವಾಹಿನಿಗೆ ತರುವುದಕ್ಕೆ ಆಗುತ್ತಿಲ್ಲ. ಪಂಚಾಯಿತಿಗಳಲ್ಲಿ reservation ಇದ್ದು, ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಹೋಗಲು ಅವರಿಗೆ ಅಧಿಕಾರವಿದ್ದರೂ ಈ ಜನಾಂಗದವರು ಅಧ್ಯಕ್ಷ ಗಾದಿಗೆ ಅವರು ಹೋಗುವುದಿಲ್ಲ. ಅವರು ಅವಕಾಶ ವಂಚಿತರಾಗುತ್ತಿದ್ದಾರೆ. ಅದಕ್ಕಾಗಿ ಕಟ್ಟುನಿಟ್ಟಾದ ಕಾನೂನನ್ನು ತರಬೇಕು. ಪಂಚಾಯಿತಿ ಅಧ್ಯಕ್ಷ ಸ್ಥಾನದ ಅವಕಾಶ ಬಂದಾಗ ಅವರಿಗೆ

ಅವಕಾಶ ಸಿಗದಿದ್ದರೆ ಮತ್ತೆ system ಹಿಂದಕ್ಕೆ ಹೋಗುತ್ತದೆ. ಹಾಗೆ ಆಗಬಾರದೆಂದರೆ ತಾವು ಕಾಳಜಿ ವಹಿಸಬೇಕು. ಈ ಕುರಿತು ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ. ಇಂದು wild life area ದಲ್ಲಿರುವ STF ಬಗ್ಗೆ ನಾನು ಕೇಳುವುದಿಷ್ಟೆ, Parliament ನಲ್ಲಿ 2005–06 ರಲ್ಲಿ ಕಾನೂನು ಆಯಿತು. ನಕ್ಸಲೈಟ್ ಬಗ್ಗೆ ತಾವು ಮಾತನಾಡಿದಿರಿ. ನಕ್ಸಲೈಟ್ಸ್ ಹೇಗೆ ಆಗುತ್ತಾರೆ ಹೇಳಿ. ಸರ್ಕಾರದ ಮೇಲೆ ಜನರು ವಿಶ್ವಾಸ ಕಳೆದುಕೊಂಡಾಗ ನಕ್ಸಲೈಟ್‌ಗಳೊಂದಿಗೆ ಶಾಮೀಲಾಗುತ್ತಾರೆ. ಇಂದು ಆ ಭಾಗದಲ್ಲಿ ವಿದ್ಯುತ್ ಕೊಡಿ ಎಂದರೆ ಅರಣ್ಯ ಇಲಾಖೆಯವರು wild life ಎಂದು ಹೇಳುತ್ತಾರೆ, ಕಾನೂನು ಹೇಳುತ್ತಾರೆ. ಈ ಪುಸ್ತಕವನ್ನು ಅರಣ್ಯ ಇಲಾಖೆಯವರು ಓದುವುದಿಲ್ಲ. ಅವರಿಗೆ ಅಂಗನವಾಡಿ, ಶಾಲೆ, ಕುಡಿಯುವ ನೀರು, ರಸ್ತೆ ಕೊಡಬೇಕು. ಇದು ಕಾನೂನಿನ ಪುಸ್ತಕದಲ್ಲಿ ಮಾತ್ರ ಉಳಿದಿದೆ. ಅವರಿಗೆ ಯಾವುದೇ ಸಾಮಾಜಿಕ ನ್ಯಾಯ ದೊರೆತಿಲ್ಲ.

ಅಧ್ಯಕ್ಷರು:– ಅದು Preamble ಇದೆಯಲ್ಲ?

ಶ್ರಿ ಕೆ. ಗೋಪಾಲ ಪೂಜಾರಿ:– ಅರಣ್ಯ ಸಮಿತಿ ಮಾಡಿದ್ದಾರೆ. 5 ವರ್ಷದಿಂದ ಬಂದಂತಹ ಅರ್ಜಿಯನ್ನು ಹಿಂದಿನ ಸರ್ಕಾರವಿದ್ದಾಗ ತಿರಸ್ಕಾರ ಮಾಡಿದ್ದಾರೆ. ಅರಣ್ಯ ಸಮಿತಿಯಲ್ಲಿ ಅವರಿಗೆ ನ್ಯಾಯ ಕೊಡಲಾಗಿಲ್ಲ.

ಶ್ರೀ ಡಿ.ಎನ್. ಜೀವ್‌ರಾಜ್:– ಮಾನ್ಯ ಅಧ್ಯಕ್ಷರೆ, ಅವರು ಸುಮ್ಮನೆ ಅವರದ್ದನ್ನು ಹೇಳಬೇಕು. ನಮ್ಮ ಸರ್ಕಾರ ಇದ್ದಾಗ ಯಾರ ಜಾಗವನ್ನು ಕಿತ್ತಿದ್ದಾರೆ? ನಮ್ಮ ಸರ್ಕಾರವಿದ್ದಾಗ ನೀವು ಎಂ.ಎಲ್.ಎ. ಆಗಿರಲಿಲ್ಲ.

(ಗೊಂದಲ)

ಅಧ್ಯಕ್ಷರು:– ಪೂಜಾರಿಯವರೆ, ಈಗ ಗ್ರಾಮಕ್ಕೆ ಒಂದು ಅರಣ್ಯ ಹಕ್ಕು ಸಮಿತಿ ಆಗಿದೆಯೋ ಇಲ್ಲವೋ?

ಶ್ರೀ ಕೆ. ಗೋಪಾಲ ಪೂಜಾರಿ:– ಆಗಿದೆ. ಆದರೆ ಹಿಂದೆ reject ಮಾಡಿದ್ದಾರೆ.

ಅಧ್ಯಕ್ಷರು:– ಈಗ ಮಾಡಿದ್ದಾರೋ, ಇಲ್ಲವೋ?

ಶ್ರೀ ಕೆ. ಗೋಪಾಲ ಪೂಜಾರಿ:– ಈಗ ಮಾಡಿದ್ದಾರೆ. ಈಗ ಯಾವುದೇ ಸಮಿತಿ ಮಾಡಿದರೂ ಸಹ ಅರಣ್ಯ ಇಲಾಖೆಯ ಡಿ.ಎಫ್.ಓ.ಗಳ ಕಣ್ತೆರೆಸಬೇಕು. ಅರಣ್ಯ ಇಲಾಖೆ ಈ ಕೆಲಸವನ್ನು ಮಾಡುತ್ತಿಲ್ಲ.

ಅಧ್ಯಕ್ಷರು:– ಹೇಳುವವರೆಗೆ ಕೇಳಿ. ಅದರ ಪ್ರಕಾರ ಪ್ರತಿಯೊಂದು ಗ್ರಾಮಕ್ಕೂ ಅರಣ್ಯ ಹಕ್ಕು ಸಮಿತಿಯನ್ನು ಮಾಡಿದ್ದಾರೋ, ಇಲ್ಲವೋ?

ಶ್ರೀ ಕೆ. ಗೋಪಾಲ ಪೂಜಾರಿ:– ಅರಣ್ಯ ಹಕ್ಕು ಸಮಿತಿ ಮಾಡಿ, ಸಮಿತಿಯಲ್ಲಿ ನಿರ್ಣಯವಾಗುತ್ತದೆ. ಗ್ರಾಮ ಸಭೆಗಳಲ್ಲಿ ನಿರ್ಣಯವಾಗುತ್ತದೆ. ನಿರ್ಣಯವಾಗಿ ಎ.ಸಿ.ಎಫ್.ಗೆ ಕೊಡುತ್ತೇವೆ. ಆದರೆ ನಿರ್ಣಯ ಮಾಡಿ ಇಲ್ಲಿಯವರೆಗೆ ಕೊಟ್ಟಿಲ್ಲ. ಅವರಿಗೆ ವಿದ್ಯುತ್ ಇಲ್ಲ, ರಸ್ತೆ ಇಲ್ಲ, ನೀರಿಲ್ಲ. ತಾವು ಪುಸ್ತಕದಲ್ಲಿ ಮಾಡಿ ಗ್ರಾಮ ಸಭೆಯಲ್ಲಿ ಇಟ್ಟು, ಅರಣ್ಯ ಸಮಿತಿಯಲ್ಲಿ ಇಟ್ಟು ಪಾಸ್ ಮಾಡಿ ಕಳುಹಿಸಿದರೂ ಸಹ ಆಗುತ್ತಿಲ್ಲ. ಇಂದು ನಮ್ಮ Home Minister ಒಂದು ಸಭೆ ಮಾಡಿ, ಅವರಿಗೆ ವಿದ್ಯುತ್ ಕೊಡಬೇಕು, ನೀರು ಕೊಡಬೇಕು, ರಸ್ತೆ ಕೊಡಬೇಕೆಂದು ಕಟ್ಟುನಿಟ್ಟಿನ ಆದೇಶ ನೀಡಿದರು. ಆದರೆ ಇಲ್ಲಿಯವರೆಗೆ ನ್ಯಾಯ ಕೊಡಲಿಲ್ಲ. ಇಲಾಖೆಯವರು ಕಣ್ಣು ತೆರೆಯಬೇಕು. ಇಲಾಖೆಯವರು ಮನಸ್ಸು ಮಾಡದೆ ನಾವು ಎಷ್ಟೇ ಹೋರಾಟ ಮಾಡಿದರೂ ಕಾನೂನಿನಲ್ಲಿ ಅವರು ಅವಕಾಶ ಮಾಡಿಕೊಡುತ್ತಿಲ್ಲ. ನಮ್ಮ ರಕ್ಷಣೆಗೆ ತಾವು ಹಾಗೂ ಮುಖ್ಯಮಂತ್ರಿಗಳು ಬರಬೇಕೆಂದು ಒತ್ತಾಯಿಸಿ ನನಗೆ ಬಜೆಟ್ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಎರಡು ಬಿಲ್ಸ್ ಇದೆ. ಅದನ್ನು ಪಾಸ್ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇಂದು ಬಿಲ್ ಅನ್ನು ಮಂಡನೆ ಮಾಡಿದ್ದಾರೆ. ನಾಳೆ ಚರ್ಚಿಸೋಣ.

ಅಧ್ಯಕ್ಷರು:– ಮೇಲ್ಮನೆಗೆ ಹೋಗಿ ಬರಬೇಕು. ಏನಾದರೂ ಬದಲಾವಣೆ ಇದ್ದರೆ, ಮಾಡಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮ್ಮ party ಯಲ್ಲಿ ಒಂದು stand ತೆಗೆದುಕೊಳ್ಳಬೇಕು.

ಶ್ರೀ ವಿನಯಕುಮಾರ್ ಸೊರಕೆ:– ನಿಮ್ಮ ಪಕ್ಷದವರೂ ಬಂದಿದ್ದರು.

ಶ್ರೀ ಜಗದೀಶ್ ಶೆಟ್ಟರ್:– ಬಂದಿದ್ದಾರೆ ಸರಿ. ಆದರೂ ನಾವು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇಂದು ಮಂಡನೆ ಮಾಡಿ ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ ಆಗುವುದಿಲ್ಲ. ಇದು ಒಳ್ಳೆಯದಲ್ಲ. ನಾನು ಹೇಳುತ್ತಿದ್ದೇನೆ. ಇದು ಸರಿಯಲ್ಲ. ನಾಳೆ ಬೆಳಿಗ್ಗೆ first hour ನಲ್ಲಿ ತೆಗೆದುಕೊಳ್ಳಿ. ನಿನ್ನೆ ಕೊಟ್ಟಿದ್ದರೆ ನಾವು ಇಂದು ಚರ್ಚಿಸಿ ಬರುತ್ತಿದ್ದೆವು.

ಶ್ರೀ ವಿನಯಕುಮಾರ್ ಸೊರಕೆ:– ಎಲ್ಲರೂ delegation ಬಂದು ಒಪ್ಪಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಸರಿ, ಅವರು delegation ಬಂದರು. ನಾವು partyಯವರು decision ತೆಗೆದುಕೊಳ್ಳಬೇಕಲ್ಲ? ನಮ್ಮದು stand ಇದೆ. ಅದನ್ನೂ ಹೇಳಬೇಕಲ್ಲವೆ. ಇದು ಸರಿಯಲ್ಲ. ಮೊನ್ನೆ ನಡೆದ B.A.C. ಸಭೆಯಲ್ಲಿಯೂ ಸಹ ಹೇಳಿದ್ದೇವೆ. ವಿಧೇಯಕ, draft Bill ತರುವುದಾದರೆ ಬೇಗ ತನ್ನಿ ಎಂದು. ಇಂದಿನ ಅಜೆಂಡಾದಲ್ಲಿಯೂ ಇಲ್ಲ. ಒಮ್ಮೆಲೆ ಮಂಡನೆ ಮಾಡುತ್ತೀರಿ, ಈಗಲೇ ಚರ್ಚಿಸಿ ಪಾಸ್ ಮಾಡಿ ಎಂದರೆ ಇದು ಸರಿಯಲ್ಲ, ಒಳ್ಳೆಯದಲ್ಲ. ಇಂದಿನ ಅಜೆಂಡಾದಲ್ಲಿಯೂ ಇಲ್ಲ. ನಾಳೆ ಬೆಳಿಗ್ಗೆ ಮಾಡಿ. First hourನಲ್ಲಿ ತೆಗೆದುಕೊಳ್ಳಿ. ನಾವು ಬೇಡವೆನ್ನುವುದಿಲ್ಲ.

ಅಧ್ಯಕ್ಷರು:– ಇಲ್ಲಿ ಪ್ರಶ್ನೆ ಅದಲ್ಲ. ನೀವು ಹೇಳುವುದು correct ಇದೆ. ನಾಳೆ ಮಾಡಬಹುದು, ಆದರೆ ಆ ಮನೆಗೆ ಹೋಗಿ ಅಲ್ಲಿಂದ ಮತ್ತೆ ಏನಾದರೂ ವಾಪಸ್ ಬಂದರೆ,,,

ಶ್ರೀ ಜಗದೀಶ್ ಶೆಟ್ಟರ್:– ಈ ಬಿಲ್ ಬಗ್ಗೆ ಬಹಳಷ್ಟು ಚರ್ಚೆ ಮಡಬೇಕಾಗಿದೆ. ಈ ಬಗ್ಗೆ ನಮ್ಮ ಪಾರ್ಟಿಯಲ್ಲಿ ಒಂದು ಸ್ಟ್ಯಾಂಡ್ ತೆಗೆದುಕೊಳ್ಳಬೇಕಾಗಿದೆ. ನಾಳೆ ಬೆಳಗ್ಗೆ first hour ನಲ್ಲಿಯೇ ತೆಗೆದುಕೊಂಡು ಬೇಕಾದರೆ ಕ್ಲಿಯರ್ ಮಾಡಿಕೊಳ್ಳಿ. ಆಮೇಲೆ ವಿಧಾನ ಪರಿಷತ್ತಿಗೆ ಹೋಗಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇದರಿಂದ ಏನೂ ತೊಂದರೆಯಾಗುವುದಿಲ್ಲ ಅಧ್ಯಕ್ಷರೆ, ಇದು ತುರ್ತಾಗಿ ಮಾಡಬೇಕಾದ್ದೂ ಅಲ್ಲ. ಒಂದು ವೇಳೆ ಇವರಿಗೆ ತುರ್ತಾಗಿದ್ದರೆ ಈ ಬಿಲ್ ಅನ್ನು ನಿನ್ನೆಯೇ ತರಬೇಕಾಗಿತ್ತು.

ಶ್ರೀ ವಿನಯಕುಮಾರ್ ಸೊರಕೆ:– ಪಕ್ಷಾತೀತವಾಗಿ ಎಲ್ಲರೂ ಒಪ್ಪಿಕೊಂಡಿದ್ದೀರಿ

ಶ್ರೀ ಜಗದೀಶ್ ಶೆಟ್ಟರ್:– ನೋಡಿ ನನಗೆ ಗೊತ್ತಿದೆ. ಎಲ್ಲಾ ಪಾರ್ಟಿಯವರು ಬಂದಿದ್ದರು. ಇದರ ಬಗ್ಗೆ ನಿಜವಾಗಿ ಒಂದು ಸ್ಟ್ಯಾಂಡ್ ತೆಗೆದುಕೊಳ್ಳಬೇಕು. ನಮ್ಮ ಪಾರ್ಟಿ ಮೀಟಿಂಗ್‌ನಲ್ಲಿಯೂ ಇದರ ಬಗ್ಗೆ ಡಿಸ್‌ಕಷನ್ ಮಾಡಬೇಕು. ನಿಮಗೆ ಒಂದು ವೇಳೆ ಅರ್ಜೆಂಟ್ ಇದ್ದರೆ Ordinance ಮಾಡಿ. ಆದರೆ ನಾಳೆ ಬೆಳಿಗ್ಗೆಯೇ first hour ನಲ್ಲಿ ಈ ಬಿಲ್ ತೆಗೆದುಕೊಳ್ಳಿ. ಪಾಸ್ ಮಾಡಿಕೊಡುತ್ತೇವೆ. ಆಮೇಲೆ ವಿಧಾನ ಪರಿಷತ್ತಿಗೆ ಕಳುಹಿಸುವಿರಂತೆ.

ಅಧ್ಯಕ್ಷರು:– ಕೇವಲ ಮೂರ್‍ನಾಲ್ಕು ವಿಚಾರಗಳಿವೆ, ಅಲ್ಲಿ sitting member ರವರನ್ನೇ continue ಮಾಡುವ ವಿಚಾರವಿದೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, problem ಏನಿದೆ ಎಂಬುದು ನಮಗೆ ಗೊತ್ತಿದೆ. ಆದರೆ ಅದರ ಬಗ್ಗೆ ನಮ್ಮ ಪಾರ್ಟಿ stand ಏನು ಎಂಬುದನ್ನು ತೆಗೆದುಕೊಳ್ಳಬೇಕಲ್ಲವೇ? ನಾವು ಕೇವಲ in the interest of meeting ಅಲ್ಲ. ನಾಳೆ ಬೆಳಿಗ್ಗೆ first hour ನಲ್ಲಿಯೇ ತೆಗೆದುಕೊಂಡು ಬರಲಿ. ಆಮೇಲೆ ಬೇಕಾದರೆ ಬಜೆಟ್ ಮೇಲೆ ಉತ್ತರ ಕೊಡಲಿ.

ಶ್ರೀ ವಿನಯಕುಮಾರ್ ಸೊರಕೆ:- ಈಗಾಗಲೇ additional Agenda ದಲ್ಲಿ ತಂದಿದ್ದೇವೆ. ಪಕ್ಷಾತೀತವಾಗಿ ಎಲ್ಲಾ ಪಕ್ಷದವರು,,,,,

ಶ್ರೀ ಜಗದೀಶ್ ಶೆಟ್ಟರ್:- ನಿಮಗೆ ಅಷ್ಟೊಂದು ಅರ್ಜೆಂಟ್ ಇದ್ದರೆ ನಿನ್ನೆಯೇ ಈ ಬಿಲ್ ಅನ್ನು ತೆಗೆದುಕೊಂಡು ಬರಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು:- ಬರೇ ಇದರಲ್ಲಿಯೇ ಕಾಲಹರಣ ಮಾಡುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ:- ಈ ಬಿಲ್‌ನಲ್ಲಿ ಆಗಿರುವ ತಿದ್ದುಪಡಿಯಲ್ಲಿ,

ಶ್ರೀ ಜಗದೀಶ್ ಶೆಟ್ಟರ್:- ನೋಡಿ ಜಯಚಂದ್ರರವರೆ, ಇದರ ಬಗ್ಗೆ ನಾವು ನಿಮಗೇನೂ ಹೇಳಬೇಕಾಗಿಲ್ಲ. ಈ ಬಿಲ್ ಬಗ್ಗೆ ನಮ್ಮ ಪಕ್ಷದ ನಿಲುವೇನು ಎಂದು ನಿರ್ಧರಿಸಬೇಕಾಗಿದೆ. ನೀವು ಬೇಕಾದರೆ ನಾಳೆ ಬೆಳಿಗ್ಗೆಯೇ ತೆಗೆದುಕೊಂಡು ಕೇವಲ ಹತ್ತು ನಿಮಿಷದಲ್ಲಿ ಚರ್ಚೆ ಮಾಡಿ ಮುಗಿಸಿರಿ. ಆಮೇಲೆ ಅದನ್ನು ವಿಧಾನ ಪರಿಷತ್ತಿಗೆ ಕಳುಹಿಸಿ. ನಾಳೆ ಬೆಳಿಗ್ಗೆಯೇ first hour ನಲ್ಲಿ ಬಿಲ್ ಪಾಸ್ ಮಾಡಿ ಕಳುಹಿಸಿ. ನಮ್ಮದೇನೂ ತಕರಾರಿಲ್ಲ.

ಅಧ್ಯಕ್ಷರು:- ಜಯಚಂದ್ರರವರೆ, ನಾಳೆ ಬೆಳಿಗ್ಗೆ ಈ ವಿಧೇಯಕವನ್ನು ತೆಗೆದುಕೊಂಡು ಬನ್ನಿ. ಈಗ ಎ.ಪಿ.ಎಂ.ಸಿ. ಬಿಲ್ ಇದೆ. ಅದನ್ನು ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್:- ಏನೇ ಬಿಲ್ ತಂದರೂ one day in advance ಕೊಡಿ ಎಂದು ಹೇಳಿದ್ದೇವೆ. ಈಗ ಬಿಲ್‌ಅನ್ನು ಕೊಟ್ಟಿದ್ದಾರೆ. ಅದರಲ್ಲಿ ಏನಿದೆ ಎಂಬುದನ್ನಾದರೂ ನಾವು ತಿಳಿದುಕೊಳ್ಳಬೇಡವೆ?

ಶ್ರೀ ಟಿ.ಬಿ. ಜಯಚಂದ್ರ:- ನಿಮ್ಮನ್ನು ನಾನು convince ಮಾಡುತ್ತೇನೆ.

ಅಧ್ಯಕ್ಷರು:- ಏನು ಮಾಡೋಣ ಈಗ ಜಗದೀಶ್ ಶೆಟ್ಟರೆ?

ಶ್ರೀ ಜಗದೀಶ್ ಶೆಟ್ಟರ್:- ಆಯಿತು. ಎ.ಪಿ.ಎಂ.ಸಿ. ಯ ಬಿಲ್ ತೆಗೆದುಕೊಳ್ಳಿ.

ಅಧ್ಯಕ್ಷರು:- ಎ.ಪಿ.ಎಂ.ಸಿ. ಬಿಲ್ ಬಗ್ಗೆ ವಿವರಿಸಿ ಮಾನ್ಯ ಸಚಿವರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಮೊದಲು ಬಜೆಟ್ ಮೇಲಿನ ಚರ್ಚೆ ಮುಗಿದುಹೋಗಲಿ.

ಅಧ್ಯಕ್ಷರು:- ಒಂದೈದು ನಿಮಿಷದಲ್ಲಿ ಬಿಲ್ ಬಗ್ಗೆ ವಿವರಿಸಿ ಮುಗಿಸುತ್ತಾರೆ. ಇದು ಪಾಸ್ ಆದ ಮೇಲೆ ಬಜೆಟ್ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ.

5. ಶಾಸನ ರಚನೆ

ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರಗಳು(ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ

ವಿಧೇಯಕ 2014

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, 2014 ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾಗಳು (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. "2014 ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರಗಳು (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ"